Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–6 | ಫೆಬ್ರವರಿ 3–9, 2025 | ಪುಟ 16 | ರೂ.10/–
Volume-19 | Issue-6 | February 3-9, 2025 | Pages:16 | Price: 10/-



ಬಜೆಟ್ 2025–26 ಭಾರತೀಯ ಜನತೆಗೆ ಕ್ರೂರ ವಿಶ್ವಾಸದ್ರೋಹ



ಮೈಕ್ರೋ ಫೈನಾನ್ಸ್ ವ್ಯವಸ್ಥೆಯ ಕರಾಳ ಮುಖ: ಗ್ರಾಮೀಣ ಕರ್ನಾಟಕದ ಸಂಕಟ

ಅಮೆರಿಕಕ್ಕೆ ಚೀನಾದ 'ಡೀಪ್ ಸೀಕ್' ನ ಸ್ಪುಟ್ನಿಕ್ ಶಾಕ್!

ಗಾಂಧೀಜಿ ಹುತಾತ್ಮ ದಿನ: ಸೌಹಾರ್ದತೆಯ ಸಂಕಲ್ಪ

ಕುಂಭ ಮೇಳದ ದುರಂತ: ಯಾರು ಹೊಣೆ?

ಬ್ಯಾಂಕುಗಳ ಉಗಮ, ಸಾಲಗಳು, ಪೇಪರ್ ಹಣ ಮತ್ತು ಬಂಡವಾಳ ಶೇಖರಣೆ



ಭಾರತದ ಬ್ಯಾಂಕುಗಳಲ್ಲಿ ಡೆಪಾಸಿಟ್ (ಠೇವಣಿ) ಎಂದು ಜನಸಾಮಾನ್ಯರು ಬ್ಯಾಂಕುಗಳಲ್ಲಿಟ್ಟ ಹಣ 2023–24 ರ ಆರ್ಥಿಕ ವರ್ಷದಲ್ಲಿ ಎರಡು ಕೋಟಿ ಕೋಟಿ ರೂಗಿಂತ (ಎರಡು ಕೋಟಿ, ಹನ್ನೆರಡು ಲಕ್ಷ, ಐವತ್ತ ಮೂರು ಸಾವಿರ ಕೋಟಿ) ಹೆಚ್ಚು! ಅಂದರೆ ಯಾರಿಗಾದರೂ ಅದರ ಕಲ್ಪನೆ ಬಂದಿತೇ! ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಈ ಠೇವಣಿ ಹಣದಲ್ಲಿ ಉಳಿತಾಯ ಖಾತೆಗಳಿಂದ ಅರವತ್ತಾರುವರೆ ಲಕ್ಷ ಕೋಟಿ ರೂ. ಫಿಕ್ಸೆಡ್ ಡೆಪಾಸಿಟ್‌ಗಳಿಂದ ಒಂದು ಕೋಟಿ ಇಪ್ಪತ್ತ ನಾಲ್ಕು ಲಕ್ಷ ನಲವತ್ತು ನಾಲ್ಕು ಸಾವಿರ ಕೋಟಿ ರೂ. ವ್ಯಾಪಾರ, ವ್ಯವಹಾರಗಳ ಕರೆಂಟ್ ಅಕೌಂಟ್ ಖಾತೆಗಳಲ್ಲಿ ಇಪ್ಪತ್ತು ಲಕ್ಷ ಅರವತ್ತೊಂದು ಸಾವಿರ ಕೋಟಿ.

ಇಷ್ಟೊಂದು ಬೃಹತ್ ಗಾತ್ರದ ಹಣ ಹನಿ ಹನಿಗೂಡಿದರೆ ಹಳ್ಳ ಎಂಬಂತೆ ಶೇಖರವಾಗಿ ಬಂಡವಾಳವಾಗಿದೆ. ಈ ಹಣದಲ್ಲಿ ಬ್ಯಾಂಕ್‌ಗಳು ಒಂದು ಕೋಟಿ ಅರವತ್ತು ನಾಲ್ಕು ಲಕ್ಷ ಕೋಟಿ ಹಣವನ್ನು ಸಾಲವಾಗಿ ನೀಡಿವೆ.

ನಾವುಗಳು ಸಣ್ಣವರಿದ್ದಾಗ ಅಲ್ಲಿ ಯಾರದೊ ಮನೆಯ ಪಾಯ ತೋಡುತ್ತಿದ್ದಾಗ ಒಂದು ಕುಡಿಕೆ ಸಿಕ್ಕಿತಂತೆ. ಅದರ ತುಂಬಾ ಚಿನ್ನ, ಬೆಳ್ಳಿಯ ನಾಣ್ಯಗಳಿದ್ದವಂತೆ. ಮತ್ತೊಬ್ಬರು ಯಾರೋ ಸಾಯುವ ಗಳಿಗೆಯಲ್ಲಿ ಮಕ್ಕಳಿಗೆ ತೋಟದ ಒಂದು ಮರದ ಕೆಳಗೆ ಮಡಿಕೆಯಲ್ಲಿ ಹಣ ಎಂದು ಅರೆಬರೆ ಹೇಳಿ ಪ್ರಾಣ ಬಿಟ್ಟರಂತೆ. ಮತ್ತೊಬ್ಬರು ಸತ್ತ ಮೇಲೆ ಒಂದು ಸಂದೂಕದಲ್ಲಿ ಲಕ್ಷಗಟ್ಟಲೆ ಹಣ ಕೂಡಿಟ್ಟದ್ದು ಸಿಕ್ಕಿತಂತೆ ಎಂಬ ಮಾತುಗಳನ್ನು ಕೇಳುತ್ತಿದ್ದೆವು. ಈಗ ಆ ಬ್ಯಾಂಕಿನಲ್ಲಿ ಹಣ ಇಟ್ಟಿದ್ದಾರಂತೆ, ಈ ಬ್ಯಾಂಕ್‌ನಲ್ಲಿ ಮತ್ತೊಂದು ಖಾತೆಯಲ್ಲಿ ಎಷ್ಟು ಇಟ್ಟಿದ್ದಾರೋ ನೋಡಿ ಎಂಬ ಮಾತುಗಳು ಕೇಳಿಬರುತ್ತಿವೆ.

ಸಾವಿರಾರು ವರ್ಷಗಳಿಂದ ಸಾಮಾನ್ಯ ಜನರ ಬಳಿ ಇರುತ್ತಿದ್ದ ಚೂರು ಪಾರು ಉಳಿತಾಯ ಬಹಳ ಕಾಲ ನಿರುಪಯುಕ್ತವಾಗಿ ಒಂದೆಡೆ ಬಿದ್ದಿರುತ್ತಿತ್ತು. ಅದು ಕೇವಲ ಹಣವಾಗಿರುತ್ತಿತ್ತು. ಇಂತಹ ಲಕ್ಷಾಂತರ, ಕೋಟ್ಯಾಂತರ ಸಣ್ಣ ಉಳಿತಾಯದ ಹಣ ಈಗ ಬ್ಯಾಂಕ್ ಸೇರಿ ಬೃಹತ್ ಬಂಡವಾಳವಾಗಿದೆ. ಬೃಹತ್ ಕೈಗಾರಿಕೆ ಮತ್ತಿತರ ಉದ್ಯಮಗಳಲ್ಲಿ ಹೂಡಲ್ಪಟ್ಟಿದೆ.

ಬ್ಯಾಂಕುಗಳು ಜಾಯಿಂಟ್ ಸ್ಟಾಕ್ ಕಂಪನಿಗಳಾಗಿ

ನೂರಾರು ಜನ, ಸಾವಿರಾರು ಜನ ಹಣ ಹೂಡುವ ಅವಕಾಶ ನೀಡುವ ಶೇರು ಕಂಪನಿಗಳ ಬಗ್ಗೆ ಹಿಂದಿನ ಲೇಖನದಲ್ಲಿ ವಿವರಿಸಲಾಗಿದೆ. ಅವುಗಳಲ್ಲಿ ಸಣ್ಣ ಬಂಡವಾಳ ಒಂದು ಕಂಪನಿಯ ಒಂದು ಉದ್ದಿಮೆಯ ಮೇಲೆ ಹೂಡಲ್ಪಟ್ಟಿತು ಅಥವಾ ಮುಂದೆ ಅದೇ ಕಂಪನಿಯ ವಿವಿಧ ಉದ್ದಿಮೆಗಳ ಮೇಲೆ ಹೂಡಲ್ಪಟ್ಟಿತು. ಇದು ಉದ್ದಿಮೆಗಾಗಿ ಬಂಡವಾಳ ಸಂಗ್ರಹಣೆ. ಈ ರೂಪದಲ್ಲಿ ಬಂಡವಾಳ ಸಂಗ್ರಹಣೆ ಎಷ್ಟೆಂದರೂ ಕೂಡಾ ಒಂದು ಕಂಪನಿಗೆ, ಅದರ ಒಂದು ಅಥವಾ ಕೆಲವು ಉದ್ದಿಮೆಗಳಿಗೆ ಅಗತ್ಯವಾದಷ್ಟು ಮಾತ್ರವನ್ನು ಸಂಗ್ರಹ ಮಾಡಲಾಗುತ್ತಿತ್ತು. ಆದರೆ ಅದೇ ಶೇರು ಕಂಪನಿಗಳು ಬ್ಯಾಂಕುಗಳಾದಾಗ ಬಂಡವಾಳ ಸಂಗ್ರಹಣೆ ಹಂಚಿಕೆಯೇ ಉದ್ದಿಮೆಯಾಯಿತು. ಲಕ್ಷಾಂತರ ಜನರಿಂದ ಸಂಗ್ರಹಣೆ, ಸಾವಿರಾರು ಉದ್ದಿಮೆಗಳಲ್ಲಿ ಹೂಡಿಕೆ ಅಥವಾ ಸಾಲ.

ಈ ರೀತಿ ಠೇವಣಿ ಸಂಗ್ರಹಣೆ ಅಥವಾ ಡೆಪಾಸಿಟ್ ಬ್ಯಾಂಕಿಂಗ್ ನ ಒಂದು ಆಯಾಮ ಮಾತ್ರ. ಈ ಮೊದಲು ವ್ಯಾಪಾರಿ ಕುಟುಂಬಗಳು ತಮ್ಮ ದೂರ ವಾಣಿಜ್ಯದ ಹಣ ಚಲಾವಣೆಯ ಅವಶ್ಯಕತೆಗಳಿಗಾಗಿ ಬ್ಯಾಂಕಿಂಗ್‌ನ ಕೆಲ ಕೆಲಸಗಳು ಆರಂಭವಾಯಿತು. ಚಿನ್ನದ ನಾಣ್ಯ ರೂಪದಲ್ಲಿ ಸಂಪತ್ತು ಶೇಖರವಾಗುತ್ತಿದ್ದಾಗ ಅವುಗಳನ್ನು ಕ್ಷೇಮವಾಗಿ ಭದ್ರಪಡಿಸಿ ಇಟ್ಟುಕೊಳ್ಳುವುದೇ ಒಂದು ಆತಂಕದ ಸಂಗತಿಯಾಗಿತ್ತು. ಅದರಲ್ಲೂ ದೂರ ವಾಣಿಜ್ಯದ ವ್ಯಾಪಾರಿಗಳಿಗೆ. ಆದರೆ ಚಿನ್ನದ ವ್ಯಾಪಾರಿಗಳು ಚಿನ್ನವನ್ನು ಭದ್ರವಾಗಿಡುವ ವ್ಯವಸ್ಥೆ ಮಾಡಿಕೊಂಡಿದ್ದರು. ಆಗ ದೂರ ವಾಣಿಜ್ಯದ ವ್ಯಾಪಾರಿಗಳು ಇವರ ಬಳಿ ಚಿನ್ನದ ನಾಣ್ಯಗಳನ್ನು ಸುರಕ್ಷೆಗಾಗಿ ಒಪ್ಪಿಸಿ ರಸೀತಿ ಪಡೆದರು. ಹೀಗೆ ಸಂಗ್ರಹವಾದ ಹಣವನ್ನು ಅಲ್ಪಾವಧಿ ಸಾಲವಾಗಿ ನೀಡುವುದರಿಂದ ಆರಂಭವಾಗಿ ಹಲವು ಖಾಸಗಿ ಬ್ಯಾಂಕುಗಳು ಹುಟ್ಟಿದವು. 1825 ರ ವೇಳೆಗೆ ಬ್ರಿಟನ್‌ನಲ್ಲಿ 800 ಬ್ಯಾಂಕುಗಳಿದ್ದವು.

ಜಾಯಿಂಟ್ ಸ್ಟಾಕ್ ಕಂಪನಿಗಳು (ಶೇರು ಕಂಪನಿಗಳ) ಚಾಲ್ತಿಗೆ ಬಂದ ನಂತರ ಸ್ಟಾಕ್ ಜಾಯಿಂಟ್ ಬ್ಯಾಂಕಿಂಗ್ ಕಂಪನಿಗಳು ಆರಂಭವಾದವು. ಸೀಮಿತ ಹೊಣೆಗಾರಿಕೆ (ಲಿಮಿಟೆಡ್) ಕಂಪನಿಗಳ ಕಾನೂನು ಬಂದ ಮೇಲೆ 1840 ರ ದಶಕದ ನಂತರ ಜಾಯಿಂಟ್ ಸ್ಟಾಕ್ ಕಂಪನಿಗಳ ಯುಗದಲ್ಲಿ ವೇಗವಾಗಿ ಬ್ಯಾಂಕಿಂಗ್ ಕಂಪನಿಗಳು ಸ್ಥಾಪನೆಯಾದವು. ಹಿಂದಿನ ರೀತಿಯ ಖಾಸಗಿ ಬ್ಯಾಂಕ್‌ಗಳು 1880ರ ವೇಳೆಗೆ 170ಕ್ಕೆ ಇಳಿಯಿತು. ಅದೇ ಸಮಯದಲ್ಲಿ ಜಾಯಿಂಟ್ ಸ್ಟಾಕ್ ಬ್ಯಾಂಕಿಂಗ್ ಕಂಪನಿಗಳು 91ಕ್ಕೆ ಏರಿದವು. ಖಾಸಗಿ ಬ್ಯಾಂಕುಗಳಿಗಿಂತ ಈ ಬ್ಯಾಂಕ್‌ಗಳು ದೊಡ್ಡ ಪ್ರಮಾಣದಲ್ಲಿ ಠೇವಣಿಗಳನ್ನು ಆಕರ್ಷಿಸಿದವು. ಆಯಾ ಬ್ಯಾಂಕುಗಳ ಬಗ್ಗೆ ಜನರಲ್ಲಿ ಮೂಡಿದ ನಂಬಿಕೆಯ ಪ್ರಮಾಣಕ್ಕನುಗುಣವಾಗಿ ಠೇವಣಿಗಳ ಸಂಗ್ರಹವಾಗುತ್ತಿತ್ತು.

ಬ್ಯಾಂಕ್ ನೋಟುಗಳು, ಪೇಪರ್ ಹಣ ಮತ್ತು ರಿಸರ್ವ್ ಬ್ಯಾಂಕ್:

ಬ್ಯಾಂಕುಗಳು ಅವು ಖಾಸಗಿ ಕುಟುಂಬ ರೂಪದಲ್ಲಿಯೇ ತಮ್ಮಲ್ಲಿ ಠೇವಣಿ ಇಟ್ಟ ನಾಣ್ಯಗಳ ಬದಲಾಗಿ ಬ್ಯಾಂಕ್ ನೋಟುಗಳು ಎಂಬ ಕಾಗದದ ಪತ್ರಗಳನ್ನು ನೀಡಲಾರಂಭಿಸಿದರು. ನಾಣ್ಯ ರೂಪದ ಹಣಕ್ಕೆ ಬದಲಾಗಿ ಠೇವಣಿದಾರರು ಅವುಗಳನ್ನು ತೋರಿಸಿ ತಮ್ಮ ಅಗತ್ಯಗಳನ್ನು ಪಡೆದುಕೊಳ್ಳುವ ಪದ್ಧತಿ ಆರಂಭವಾಯಿತು. ಇದೇ ವಿವಿಧ ಬೆಲೆಯ ನೋಟುಗಳಾಗಿ ಆಯಾ ಬ್ಯಾಂಕ್ನ ಹೆಸರನ್ನು ಹೊತ್ತು ಮುದ್ರಣ ಮಾಡಿ ನೀಡತೊಡಗಿದರು. ಇದೇ ಇಂದು ನಾವು ಬಳಸುತ್ತಿರುವ ನೋಟು ಎಂಬ ಹೆಸರಿನ ಹಾಗೂ ಪದ್ಧತಿಯ ಮೂಲ.

1694ರಲ್ಲಿ 1268 ಶೇರುದಾರರಿಂದ ಜಾಯಿಂಟ್ ಸ್ಟಾಕ್ ಕಂಪನಿ ರೂಪದ ಬ್ಯಾಂಕ್ ಆಗಿ ಸ್ಥಾಪನೆಗೊಂಡ 'ಬ್ಯಾಂಕ್ ಆಫ್ ಇಂಗ್ಲೆಂಡ್'

ಸಾವಿರಾರು ವರ್ಷಗಳಿಂದ ಸಾಮಾನ್ಯ ಜನರ ಬಳಿ ಇರುತ್ತಿದ್ದ ಚೂರು ಪಾರು ಉಳಿತಾಯ ಬಹಳ ಕಾಲ ನಿರುಪಯುಕ್ತವಾಗಿ ಒಂದೆಡೆ ಬಿದ್ದಿರುತ್ತಿತ್ತು. ಅದು ಕೇವಲ ಹಣವಾಗಿರುತ್ತಿತ್ತು. ಇಂತಹ ಲಕ್ಷಾಂತರ, ಕೋಟ್ಯಾಂತರ ಸಣ್ಣ ಉಳಿತಾಯದ ಹಣ ಈಗ ಬ್ಯಾಂಕ್ ಸೇರಿ ಬೃಹತ್ ಬಂಡವಾಳವಾಗಿದೆ. ಬೃಹತ್ ಕೈಗಾರಿಕೆ ಮತ್ತಿತರ ಉದ್ಯಮಗಳಲ್ಲಿ ಹೂಡಲ್ಪಟ್ಟಿದೆ.

ಸ್ಥಾಪನೆಗೊಂಡಿತು. ಅದು ಇಂತಹ ಕಾಗದದ ವಿವಿಧ ಬೆಲೆಯ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತಂದಿತು. ಈ ಕಾಗದ ರೂಪದ ಹಣ ಬಹಳ ಜನಪ್ರಿಯವಾಯಿತು. ಹಣದ ಚಲಾವಣೆಯನ್ನು ಎಷ್ಟೊಂದು ಸರಾಗ ಮಾಡಿತೆಂದರೆ ಬ್ಯಾಂಕುಗಳ ಹಣ ಸಂಗ್ರಹಣೆ ಮತ್ತಷ್ಟು ವೇಗೋತ್ಕರ್ಷ ಪಡೆದುಕೊಂಡಿತು. ವ್ಯಾಪಾರ, ವ್ಯವಹಾರ, ದೂರ ವಾಣಿಜ್ಯ, ಶೇರುಗಳ ಮೂಲಕ ಬಂಡವಾಳ ಸಂಗ್ರಹಣೆ, ಕೈಗಾರಿಕಾ ಉತ್ಪಾದನೆ, ಬ್ಯಾಂಕುಗಳಲ್ಲಿ ಠೇವಣಿಗಳು ಎಲ್ಲವೂ ನೆಗೆತ ಸಾಧಿಸಿದವು.

ವಿವಿಧ ಬ್ಯಾಂಕುಗಳು ತಮ್ಮಲ್ಲಿ ಠೇವಣಿ ಇಟ್ಟ ಚಿನ್ನ, ಬೆಳ್ಳಿಯ ನಾಣ್ಯಗಳ ಸಂಗ್ರಹಣೆಗೆ ಅನುಗುಣವಾಗಿ ತಂತಮ್ಮ ಹೆಸರುಗಳಲ್ಲಿ ವಿವಿಧ ಪ್ರಮಾಣದಲ್ಲಿ ನೋಟುಗಳನ್ನು ಮುದ್ರಿಸುತ್ತಿದ್ದರು. ವ್ಯಾಪಾರ, ವ್ಯವಹಾರಗಳಲ್ಲಿ ಗೊಂದಲ, ಅರಾಜಕತೆ ಉಂಟಾದದ್ದು ಸಹಜ. ಇದನ್ನು ನಿವಾರಿಸಲು ಬ್ರಿಟಿಷ್ ಸರ್ಕಾರ ಆರಂಭದಲ್ಲಿಯೇ ಬ್ಯಾಂಕ್ ಆಫ್ ಇಂಗ್ಲೆಂಡ್ ಅನ್ನು ಕೇಂದ್ರ ಬ್ಯಾಂಕ್ ಎಂದು ಕಾನೂನು ಮೂಲಕ ಘೋಷಿಸಿತು. ಇದೇ ಮಾದರಿ ಅನುಸರಿಸಿ ದೇಶಕ್ಕೊಂದು ನ್ಯಾಷನಲ್ ಬ್ಯಾಂಕ್ ಅಥವಾ ರಿಸರ್ವ್ ಬ್ಯಾಂಕ್ ರೂಪು ತಳೆಯಿತು. ಇಂತಹ ಬ್ಯಾಂಕುಗಳೇ ಪೇಪರ್

ಭಾಗ 13

ಜಿ.ಎನ್. ನಾಗರಾಜ್



ಹಣದ ಅಡಿಪಾಯವಾದ ಚಿನ್ನದ ದಾಸ್ತಾನು ರಾಷ್ಟ್ರ ಬ್ಯಾಂಕುಗಳ ವಶವಾಯಿತು. ಈ ಚಿನ್ನದ ಪ್ರಮಾಣದ ಆಧಾರದಲ್ಲಿ ನೋಟುಗಳ ಪ್ರಮಾಣ ನಿಗದಿಯಾಯಿತು.

ರಾಷ್ಟ್ರೀಯ ಸಾಲ / ಸಾರ್ವಜನಿಕ ಸಾಲ / ಸರ್ಕಾರದ ಸಾಲ (ನ್ಯಾಷನಲ್ ಡೆಟ್/ಪಬ್ಲಿಕ್ ಡೆಟ್):

ಇತ್ತೀಚೆಗೆ ಭಾರತದ ಸಾಲದ ಹೊರೆ ಬಹಳಷ್ಟು ಹೆಚ್ಚಾಗಿದೆ ಎಂಬ ಮಾತುಗಳನ್ನು ಕೇಳುತ್ತಿದ್ದೇವೆ. ಕೋವಿಡ್ ನಂತರದಲ್ಲಿ ಇಡೀ ವಿಶ್ವದ ರಾಷ್ಟ್ರೀಯ ಸಾಲಗಳು ಬಹಳ ಹೆಚ್ಚಾಗಿವೆ. ವಿಶ್ವದಲ್ಲಿ ಅತ್ಯಂತ ಹೆಚ್ಚು ಸಾಲಗಾರ ರಾಷ್ಟ್ರ ಯಾವುದೆಂಬುದು ಜಗಜ್ಜಾಹೀರು. ಅದೇ ವಿಶ್ವದ ಅತಿ ಶ್ರೀಮಂತ ರಾಷ್ಟ್ರ ಅಮೆರಿಕ.

ಮಾರ್ಕ್ಸ್‌ರವರು "ಬಂಡವಾಳ" ಕೃತಿಯಲ್ಲಿ ಹೇಳಿದಂತೆ ಆಧುನಿಕ ಕಾಲದ ತತ್ವ ಎಂದರೆ "ಯಾವ ದೇಶ ಅತಿ ಹೆಚ್ಚು ಸಾಲಗಾರನೋ ಅದೇ ಅತಿ ಹೆಚ್ಚು ಶ್ರೀಮಂತ ದೇಶ."

ರಾಷ್ಟ್ರೀಯ ಸಾಲಗಳೆಂಬುವು ರಾಜಪ್ರಭುತ್ವಗಳ ಕಾಲದಿಂದ ವಿಶ್ವಾದ್ಯಂತ ಇವೆ. ರಾಜರು ಯುದ್ಧಗಳಿಗಾಗಿ, ಕೋಟೆ ಕೊತ್ತಲ ಕಟ್ಟಿಸುವುದಕ್ಕಾಗಿ, ತಮ್ಮ ವೈಭೋಗಕ್ಕಾಗಿ ತಮ್ಮ ರಾಜ್ಯದ ಶ್ರೀಮಂತರು ಮುಖ್ಯವಾಗಿ ವ್ಯಾಪಾರಿಗಳಿಂದ ಪಡೆಯುತ್ತಿದ್ದರು.

ಯುರೋಪಿನ ಸಾಗರ ಸಾಹಸಗಳ ಕಾಲದಲ್ಲಿ, ಸಾಗರಯಾನಗಳಿಗಾಗಿ, ವಸಾಹತುಗಳ ಆಕ್ರಮಣ ವೆಚ್ಚಗಳಿಗಾಗಿ, ನಾವಿಕ ಶ್ರೇಷ್ಠತೆ ಸಾಧಿಸುವುದಕ್ಕಾಗಿ, ಒಂದರ ಮೇಲೊಂದು ಮೇಲುಗೈ ಸಾಧಿಸುವುದಕ್ಕೆ ಯುದ್ಧ ಮಾಡುವುದಕ್ಕಾಗಿ ಯಥೇಚ್ಛವಾಗಿ ಸಾಲಗಳನ್ನು ಪಡೆಯತೊಡಗಿದರು. ಹೀಗೆ ಪಡೆದ ರಾಷ್ಟ್ರ ಸಾಲಗಳು ವಸಾಹತುಗಳ ಮೂಲಕ, ದೂರ ವಾಣಿಜ್ಯದ ಮೂಲಕ ಬಂಡವಾಳಶಾಹಿಯನ್ನು ಬೆಳೆಸಿದವು. ಕೈಗಾರಿಕಾ ಕ್ರಾಂತಿಗೆ ಚಾಲಕ ಶಕ್ತಿಗಳೂ ಆದವು. ರಾಷ್ಟ್ರೀಯ ಸಾಲಗಳು ಹೀಗೆ ಬಂಡವಾಳದ ಆದಿಮ ಸಂಗ್ರಹಣೆಯ ವಿಧಾನವಾಯಿತು. ಬಂಡವಾಳಶಾಹಿ ಕಾಲಘಟ್ಟದ ಯುಗದ ಮೇಲೆ ತನ್ನ ಮುದ್ರೆಯೊತ್ತಿತು. ಹಾಲಂಡ್ ಇಂತಹ ರಾಷ್ಟ್ರೀಯ ಸಾಲದ ಮೊದಲ ಮಾದರಿಗಳನ್ನು ಮುಂದಿಟ್ಟಿತು. ಇಂತಹ ಉದ್ದೇಶಗಳಿಗಾಗಿ ಸರ್ಕಾರಗಳು ಸಾರ್ವಜನಿಕರಿಂದ ಪಡೆಯಲಾರಂಭಿಸಿದ ಸಾಲಗಳೇ ಈಸ್ಟ್ ಇಂಡಿಯಾ ಕಂಪನಿಗಳಂತಹ ಜಾಯಿಂಟ್ ಸ್ಟಾಕ್ ಕಂಪನಿಗಳ ಸ್ಥಾಪನೆಗೆ ಚಾಲಕ ಶಕ್ತಿಯಾಯಿತು.

ಸಾಲ ಪಡೆಯುವುದಕ್ಕಾಗಿ ಬೆದರಿಕೆ ಹಾಕುತ್ತಿದ್ದ, ಪಡೆದ ಸಾಲ ಕೊಡದೆ ದರ್ಪ ತೋರಿಸುತ್ತಿದ್ದ ಪ್ರಸಂಗಗಳೂ ವಿಪುಲವಾಗಿವೆ. ಈ ಪ್ರಸಂಗಗಳಿಂದ ರಾಜರಿಗೂ ಸಾಲ ಹುಟ್ಟುವುದೇ ಕಠಿಣವಾಗುತ್ತಿತ್ತು. ರಾಜಪ್ರಭುತ್ವಗಳು ಪ್ರಜಾಪ್ರಭುತ್ವಗಳಾಗತೊಡಗಿದ ಮೇಲೆ ರಾಷ್ಟ್ರ ಸಾಲಗಳು ಕಡಿಮೆಯೇನಾಗಲಿಲ್ಲ. ಬದಲಾಗಿ ಹಲವು ಪಟ್ಟು ಹೆಚ್ಚಾಯಿತು. ರಾಜಪ್ರಭುತ್ವಗಳಿಗಿಂತ ಪ್ರಜಾಪ್ರಭುತ್ವ ಸರ್ಕಾರಗಳು ಸಾಲ ತೀರಿಸುವಲ್ಲಿ ಹೆಚ್ಚು ನಿಷ್ಠೆ ತೋರುತ್ತವೆ. ರಾಜರುಗಳಂತೆ ಬೆದರಿಕೆ ದರ್ಪಗಳಿಗೆ ಒಳಗಾಗಬೇಕಾಗಿಲ್ಲ ಎಂಬ ಕಾರಣಕ್ಕಾಗಿ ಪ್ರಜಾಪ್ರಭುತ್ವ ಸರ್ಕಾರ ಹೊಂದಿದ ಬಂಡವಾಳಶಾಹಿ ದೇಶಗಳಿಗೆ ಸಾಲ ನೀಡಲು ಶ್ರೀಮಂತರು ಹೆಚ್ಚು ಆಸ್ಥೆ ತೋರುತ್ತಿದ್ದರು. ಇದು ಬ್ರಿಟನ್‌ನಂತಹ ದೇಶಗಳಿಗೆ ಬಹಳ ಪ್ರಯೋಜನಕಾರಿಯಾಯಿತು. ಈ ಸಾಲಗಳು ಭಾಗಶಃವಾಗಿ ಬಂಡವಾಳಶಾಹಿಯ ಬೆಳವಣಿಗೆಗೆ ಸಾಧಕವಾಗಿ, ರೈಲು ಮಾರ್ಗಗಳು, ಬಂದರುಗಳು, ರಸ್ತೆಗಳು ಇತ್ಯಾದಿ ಮೂಲಭೂತ ಸೌಕರ್ಯಗಳಿಗಾಗಿ, ಕೈಗಾರಿಕೆಗಳಿಗೆ ಸಹಾಯಧನ ಇತ್ಯಾದಿಗಳಿಗೆ ಉಪಯೋಗಿಸ ತೊಡಗಿದರು.

ಬ್ಯಾಂಕ್ ಆಫ್ ಇಂಗ್ಲೆಂಡ್ ಸ್ಥಾಪನೆಯಾದದ್ದು ಇಂತಹ ಸಂದರ್ಭದಲ್ಲಿಯೇ. 1690ರಲ್ಲಿ ಫ್ರೆಂಚ್ ನಾವಿಕ ಸೈನ್ಯದಿಂದ ಬ್ರಿಟಿಷ್ ನಾವಿಕ ಸೈನ್ಯ ಹೀನಾಯವಾಗಿ ಸೋಲಪ್ಪಿದ ಸಮಯ ಅದು. ಈ ಸೋಲಿನಿಂದ ಅಂದಿನ ರಾಜಪ್ರಭುತ್ವ ಕಂಗೆಟ್ಟಿತ್ತು. ಬ್ರಿಟಿಷ್ ನಾವಿಕ ಸೈನ್ಯವನ್ನು ಬಲಪಡಿಸಲು ಅವಶ್ಯವಾದ ಹಡಗು, ಶಸ್ತ್ರಾಸ್ತ್ರಗಳು, ನಾವಿಕ ಸೈನ್ಯ ಇವುಗಳಿಗಾಗಿ ಅಪಾರ ಹಣ ಬೇಕಾಗಿತ್ತು. ಸರ್ಕಾರದ ಬಳಿ ಹಣ ಇರಲಿಲ್ಲವಾದ್ದರಿಂದ ಆ ಹಣ ಸಂಗ್ರಹಣೆಗಾಗಿ ಈ ಬ್ಯಾಂಕ್ ಸ್ಥಾಪಿಸಲ್ಪಟ್ಟಿತು. ಈ ಬ್ಯಾಂಕಿನ ಶೇರುಗಳಲ್ಲಿ ಹಣ ಹೂಡಿದವರು ಹೆಚ್ಚಾಗಿ ಸಾಗರ ವಾಣಿಜ್ಯ,

ಪುಟ 7 ಕ್ಕೆ

ಕುಂಭ ಮೇಳದಲ್ಲಾದ ದುರಂತ: ಯಾರು ಹೊಣೆ?

ಉತ್ತರ ಪ್ರದೇಶದ ಪ್ರಯಾಗ್ರಾಜ್ ನಲ್ಲಿ ನಡೆದ ಮಹಾಕುಂಭಮೇಳದ ವೇಳೆ ನೂಕುನುಗ್ಗಲು ಉಂಟಾಗಿ 30 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಕರ್ನಾಟಕದ ಬೆಳಗಾವಿಯ 4 ಜನ ಅಸು ನೀಗಿದ ವರದಿಗಳಿವೆ.

ಅಧಿಕಾರಿಗಳ ಪ್ರಕಾರ, ಈ ದುರಂತದಲ್ಲಿ ಇನ್ನೂ 60 ಜನರು ಗಾಯಗೊಂಡಿದ್ದಾರೆ. ಅದರಲ್ಲಿ 36 ಜನರು ಇನ್ನೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವರದಿಗಳಿವೆ. ಆದರೆ

ವಾಸ್ತವ ಇನ್ನಷ್ಟೂ ಧಾರುಣವಿದೆ, ಆದ ಅಪಾರ ನಷ್ಟವನ್ನು ಹೊರ ಜಗತ್ತಿಗೆ ಸರಿಯಾಗಿ ವರದಿ ಆಗುತ್ತಿಲ್ಲ ಎನ್ನುತ್ತಿವೆ ಸಾಮಾಜಿಕ ಮಾಧ್ಯಮಗಳು. ಈ ವಿಷಯದಲ್ಲಿ ಪಾರದರ್ಶಕತೆಯ ಕೊರತೆ ಕಾಣುತ್ತಿದೆ.

ಮೌನಿ ಅಮಾವಾಸ್ಯೆಯಂದು ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರೆ ಪುಣ್ಯ ಲಭಿಸುತ್ತದೆ ಎಂಬ ಭಾರೀ ಪ್ರಚಾರ ನಡೆದ ಕಾರಣ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಅಲ್ಲಿ ಸೇರಿದ್ದರು. ಈ ದುರಂತ ಸಂಭವಿಸಿದ್ದು ಅಗತ್ಯ ನಿಯಂತ್ರಣ ಮತ್ತು ನಿರ್ವಹಣೆ ವ್ಯವಸ್ಥೆ ಇಲ್ಲದ ಕಾರಣ ಎಂಬ ಟೀಕೆಗಳು ಹರಿದು ಬರುತ್ತಿವೆ. ಇದಕ್ಕೆ ಹೊಣೆ ಹೊತ್ತಿರುವ ಯೋಗಿ ಆದಿತ್ಯನಾಥ್ ಸರ್ಕಾರ ಕಾಲ್ತುಳಿತ ನಡೆದು 16 ಗಂಟೆಗಳವರೆಗೂ ಅಧಿಕೃತವಾಗಿ ಯಾವುದೇ ಘೋಷಣೆ ಮಾಡಲಿಲ್ಲ. ಇದೇ ವೇಳೆ ಬಿಜೆಪಿ ರಾಜ್ಯ ಸಚಿವರೊಬ್ಬರು 'ಇಷ್ಟು ದೊಡ್ಡ ಕುಂಭಮೇಳ ನಡೆಯುತ್ತಿರುವಾಗ, ಇಂತಹ ಸಣ್ಣ ಘಟನೆಗಳು ನಡೆಯುವುದು ಸಹಜ' ಎಂದು ಪ್ರತಿಕ್ರಿಯಿಸಿರುವುದು ಅಘಾತಕಾರಿ ಹಾಗೂ ಅಮಾನವೀಯವಾಗಿದೆ. ದುರಂತದ ಸಾವು ನೋವುಗಳನ್ನು ಅಂಕೆ ಸಂಖ್ಯೆಗಳಿಂದ ಅಳೆಯಲಾಗುವುದಿಲ್ಲ. ಜೀವ ಹಾನಿ ಎಷ್ಟೇ, ಯಾರದ್ದೇ ಇರಲಿ ಅದು ಗಂಭೀರವಾದುದು, ಸಮರ್ಥನೀಯವಲ್ಲ.

ಸಂಪಾದಕೀಯ

1954, 1986, 2003 ಮತ್ತು 2013ರಲ್ಲಿ ಕುಂಭಮೇಳದಲ್ಲಿ ಕಾಲ್ತುಳಿತ ಮತ್ತು ಭಕ್ತರು ಪ್ರಾಣ ಕಳೆದುಕೊಂಡಿದ್ದರು. ಕಳೆದ ವರ್ಷ ಉತ್ತರಪ್ರದೇಶದ ಹತ್ರಾಸ್ನಲ್ಲಿ ನಡೆದ ಅಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಬೋಲೆಬಾಬಾನ ಪಾದಧೂಳಿಗಾಗಿ ಜನರು ನೆರೆದಿದ್ದ ಕಾಲ್ತುಳಿತದಲ್ಲಿ 121 ಮಂದಿ ಸಾವನ್ನಪ್ಪಿದ್ದರು. ಹಿಂದೊಂದು ಕುಂಭ ಮೇಳದಲ್ಲಿ 900 ರಷ್ಟು ಜನ ಸಾವನ್ನಪ್ಪಿದ ವರದಿಗಳಿವೆ. ಇತ್ತೀಚೆಗಷ್ಟೇ ತಿರುಪತಿಯ ವೈಕುಂಠ ದ್ವಾರದ ದರ್ಶನಕ್ಕೆ ಬಂದಿದ್ದ ಭಕ್ತರ ಕಾಲ್ತುಳಿತದಲ್ಲಿ ಆರು ಮಂದಿ ಮೃತಪಟ್ಟಿದ್ದರು. ಹಜ್ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿ ನೂರಾರು ಮಂದಿ ಪ್ರಾಣ ಕಳೆದುಕೊಂಡ ಘಟನೆಗಳು ನಡೆದಿವೆ. ಧಾರ್ಮಿಕ ನಂಬಿಕೆಗಳು ಅಥವಾ ಇತರ ಕಾರಣಗಳಿಂದ ಸಾವಿರಾರು ಅಥವಾ ಲಕ್ಷಗಟ್ಟಲೆ ಜನರು ಒಂದೇ ಸ್ಥಳದಲ್ಲಿ ಸೇರಿದಾಗ ಅನಿರೀಕ್ಷಿತ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚು. ಅದಕ್ಕೆ ಸೂಕ್ತ ಭದ್ರತೆ, ನಿಯಂತ್ರಣ ವ್ಯವಸ್ಥೆ, ಸೌಲಭ್ಯಗಳನ್ನು ಆಡಳಿತಗಾರರು ಒದಗಿಸಬೇಕಾಗುತ್ತದೆ. ಕುಂಭಮೇಳ, ಪುಷ್ಕರಗಳು, ಹಜ್ ಯಾತ್ರೆಯಂತಹ ದೊಡ್ಡ ಸಭೆಗಳ ಸಂದರ್ಭದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಜನರು ಸೇರಿ ಮತ್ತು ನಂಬಿಕೆಯಿಂದ ಇಂತಹ ಸ್ಥಳಗಳಿಗೆ ಭೇಟಿ ನೀಡಿದರೂ – ಆ ನಂಬಿಕೆಗಳನ್ನು ಮತ್ತಷ್ಟು ಪ್ರೇರೇಪಿಸುವ ಅತಿಕ್ರಮಣಕ್ಕೆ ಆಡಳಿತಗಾರರು ಕಾರಣವಾಗಬಾರದು. ಒಂದು ನಿರ್ದಿಷ್ಟ ದಿನ ಮತ್ತು ನಿರ್ದಿಷ್ಟ ಸಮಯದಲ್ಲಿ ಸ್ನಾನ ಮಾಡಿದರೆ, ದರ್ಶನ ಮಾಡಿದರೆ ಪುಣ್ಯ ದೊರಕುತ್ತದೆ ಎಂದೋ, ತಾವು ಮಾಡಿದ ಪಾಪದಿಂದ ವಿಮುಕ್ತಿಯಾಗುತ್ತಾರೆ ಎಂದೋ ಸುಳ್ಳುಪ್ರಚಾರ ಮಾಡಬಾರದು. ಆದರೆ ಬಿಜೆಪಿ ಆಡಳಿತದಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕುಂಭಮೇಳವನ್ನು ತಮಗೆ ಅನುಕೂಲಕರ ವೇದಿಕೆಯನ್ನಾಗಿ ಮಾಡುವ ಪ್ರಯತ್ನದಲ್ಲಿ ನೇರವಾಗಿ ದೊಡ್ಡ ಮಟ್ಟದ ಪ್ರಚಾರವನ್ನು ಪ್ರಾರಂಭಿಸಿವೆ. ಮತೀಯವಾದವನ್ನೇ ಉಸಿರಾಡುವ ಈ ಪರಿವಾರ ಅತಿ ಧಾರ್ಮಿಕತೆಯನ್ನು ಬೆಳೆಸಿದರೆ ಅದು ಮತ್ತಷ್ಟೂ ಮತೀಯವಾದವನ್ನು ಬೆಳೆಸುತ್ತದೆ, ಕೋಮುವಾದೀ ಫ್ಯಾಸಿಸಮ್ ಬೆಳೆಯಲು ಸಹಾಯಕ ಎಂದು ಭಾವಿಸರಬಹುದು. ಆದ್ದರಿಂದಲೇ ದೇಶದ ವಿವಿಧ ಭಾಗಗಳಿಂದ ಜನರು ತಮ್ಮ ತಮ್ಮ ಗುಂಪುಗಳಿಂದ ಪ್ರಯಾಗ್ರಾಜ್ ಕಡೆಗೆ ಬರುವಂತೆ ಮಾಡುವುದನ್ನು ಅವರು ತಮ್ಮ ಗುರಿಯನ್ನಾಗಿ ಮಾಡಿಕೊಂಡರು. 114 ವರ್ಷಗಳಿಗೊಮ್ಮೆ ಮತ್ತು ಕಾಲ ಕಾಲಕ್ಕೆ ನಡೆವ ನಡೆವ ಕುಂಭ ಮೇಳಗಳ ಬಗ್ಗೆ, ಅಲ್ಲಿಯ ಸಾಧುಗಳ ಬಗ್ಗೆ ಅತಿರಂಜಿತ ಕಥೆಗಳನ್ನು ಮಾಧ್ಯಮಗಳ ಮೂಲಕ ವೈಭವಿಕರಿಸಲಾಯಿತು. ಧಾರ್ಮಿಕ ಮನೋಭಾವವನ್ನು ದುರ್ಬಳಕೆ ಮಾಡಿ ಅಂಧಶ್ರದ್ಧೆ, ಮೂಢನಂಬಿಕೆಗಳನ್ನು ಹರಿಯಬಿಟ್ಟಿದ್ದು ಸರಿಯಲ್ಲ.

ಲಕ್ಷಗಟ್ಟಲೆ ಜನ ಒಂದೇ ಕಡೆ ಸೇರುವಾಗ ವ್ಯವಸ್ಥಿತವಾಗಿ ನದಿ ಸ್ನಾನ ಮಾಡುವ ವ್ಯವಸ್ಥೆ ಮಾಡಬೇಕು. ಕಾಲಕಾಲಕ್ಕೆ ಅಗತ್ಯ ಮಾಹಿತಿ ಹಾಗೂ ಸಹಕಾರ ನೀಡಬೇಕು. ಇಂತಹ ಸಮನ್ವಯದ ಕೊರತೆಯಿಂದಾಗಿ ಮಂಗಳವಾರ ಮಧ್ಯರಾತ್ರಿ ಕಾಲ್ತುಳಿತ ಸಂಭವಿಸಿದೆ. ವಿಐಪಿ ಸಂದರ್ಶಕರಿಗೆ ನೀಡುವ ಗಮನ ಸಾಮಾನ್ಯ ಭಕ್ತರಿಗೆ ತೋರುತ್ತಿಲ್ಲ ಎಂಬ ಟೀಕೆಗಳು ಕೇಳಿ ಬರುತ್ತಿವೆ. ಸ್ನಾನಘಟ್ಟಗಳ ಸಾಮರ್ಥ್ಯದ ಆಧಾರದ ಮೇಲೆ ಭಕ್ತರ ಸಂಖ್ಯೆಯನ್ನು ನಿಯಂತ್ರಿಸುವ ಬದಲು ಸಂಗಮದ ಮುಖಾಂತರ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಬಿಟ್ಟಿದ್ದು ನೂಕುನುಗ್ಗಲು ಉಂಟು ಮಾಡಿತು ಎನ್ನುತ್ತಾರೆ ವೀಕ್ಷಕರು. ಈ ಮಹಾ ಕುಂಭ ಮೇಳದ ಒಟ್ಟು ಉಸ್ತವಾರಿ ಜವಾಬ್ದಾರಿ ವಹಿಸಿಕೊಂಡಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಇಲಾಖೆಯ ಅಧಿಕಾರಿಗಳು ಹೊಣೆ ಹೊರಲೇಬೇಕು. ಅವರ ಮೇಲೆ ಕ್ರಮ ಜರುಗಿಸಬೇಕು. ಆದರೆ ನ್ಯಮಯಾಂಗ ತನಿಖೆಯ ಆದೇಶ ಬಿಟ್ಟರೆ ಇದುವರೆಗೂ ಅಂತಹ ಹೊಣೆಗಾರಿಕೆ ಇದ್ದವರ ಮೇಲೆ ಯಾವುದೇ ಕ್ರಮ ವಹಿಸಲಿಲ್ಲ.

ಈ ಕುಂಭಮೇಳದಲ್ಲಿ ಉತ್ತರ ಪ್ರದೇಶದ ಸರ್ಕಾರ ಕೃತಕ ಬುದ್ದಿಮತ್ತೆ ತಂತ್ರಜ್ಞಾನವನ್ನು ಒಳಗೊಂಡು ಎಲ್ಲಾ ರೀತಿಯ ವೈಜ್ಞಾನಿಕ ಮತ್ತು ತಾಂತ್ರಿಕ ಉಪಕರಣಗಳು ಮತ್ತು ವಿಧಾನಗಳನ್ನು ಬಳಸುತ್ತದೆ ಎಂದು ಘೋಷಿಸಲಾಗಿತ್ತು. ಆಡಳಿತ ಎಷ್ಟು ಅಸಂವೇದನೆಯನ್ನು ಹೊಂದಿತ್ತೆಂದರೆ ಇಲ್ಲಿ ಕಾಲ್ತುಳಿತದಿಂದ ಸಾವು ನೋವುಗಳಲ್ಲಿ ಹಾಹಾಕಾರ ಇದ್ದರೆ ಅತ್ತ ಸಂತರು ಮತ್ತು ಸನ್ಯಾಸಿಗಳ ಮೇಲೆ ಹೂವಿನ ಮಳೆಗರೆಯಲು ಹೆಲಿಕಾಪ್ಟರ್ ಗಳು ಹಾರಾಡಿದವು. ವಾಹನ ದಟ್ಟಣೆಯನ್ನು ಅಂದಾಜು ಮಾಡಲು ಟ್ರ್ಯಾಕಿಂಗ್ ಮತ್ತು ಮಾಹಿತಿ ವ್ಯವಸ್ಥೆಗಳು ಸಹ ಜಾರಿಯಲ್ಲಿವೆ. ಇಷ್ಟೆಲ್ಲ ಮಾಡಲಾಗಿದೆ ಎಂದು ಹೇಳಿಕೊಂಡಿದ್ದರೂ ಕಾಲ್ತುಳಿತ ತಪ್ಪಿಸಲು ಸಾಧ್ಯವಾಗದಿರುವುದು ಒಟ್ಟಾರೆ ಯೋಗಿ ಆದಿತ್ಯನಾಥ ಸರ್ಕಾರದ ವೈಫಲ್ಯವಾಗಿದೆ. ಕುಂಭ ಮೇಳಕ್ಕೆ ಬಂದಿದ್ದ ಅತಿ ಗಣ್ಯರನ್ನು ನಿರ್ವಹಿಸುವುದರತ್ತಲೇ ಎಲ್ಲರ ಗಮನ ನೀಡಿ, ಸಾಮಾನ್ಯನ್ನು ನಿರ್ಲಕ್ಷಿಸಲಾಗಿತ್ತು ಎನ್ನುವ ಟೀಕೆಯನ್ನು ತಳ್ಳಿ ಹಾಕಲಾಗದು.

ಜನವರಿ 13ರಂದು ಆರಂಭವಾದ ಈ ಮಹಾ ಕುಂಭಮೇಳ ಫೆ.26ರವರೆಗೆ ನಡೆಯಲಿದ್ದು, ಯೋಗಿ ಸರಕಾರ ಕೂಡಲೇ ಭದ್ರತಾ ಕ್ರಮಗಳನ್ನು ಬಲಪಡಿಸಬೇಕು. ವಿಪರೀತ ಪ್ರಚಾರ ಮತ್ತು ವಿಐಪಿ ಗೌರವಗಳಿಗೆ ಸಮಯವನ್ನು ಕಡಿಮೆ ಮಾಡಬೇಕು ಮತ್ತು ಹೆಚ್ಚು ಪಾಲ್ಗೊಳ್ಳುವ ಸಾಮಾನ್ಯ ಭಕ್ತರ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು. ಪಾಪ, ಪುಣ್ಯಸ್ನಾನ, ಮಹಿಮೆಯಂತಹ ನಂಬಿಕೆಗಳನ್ನು ಪರಿಗಣಿಸದೇ ವ್ಯವಸ್ಥೆಗಳಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಸರ್ಕಾರಗಳು ಖಚಿತಪಡಿಸಿಕೊಳ್ಳಬೇಕು. ಅದು ಅಲೌಕಿಕ, ನಂಬಿಕೆಗಳ ಆಧ್ಯಾತ್ಮಿಕ ಮಹಾಮೇಳವಾಗಿದ್ದರೂ – ಭಕ್ತರ ರಕ್ಷಣೆ ಮತ್ತು ಭದ್ರತೆಯನ್ನು ಬಲವಾದ ಪ್ರಾಯೋಗಿಕ ಕ್ರಮಗಳ ಮೂಲಕ ಮಾತ್ರವೇ ಒದಗಿಸಲು ಸಾಧ್ಯ.

ದುರ್ಬಲ ವರ್ಗದ ಧ್ವನಿ ವೈ.ಕೆ.ಗಣೇಶ್ ಗೆ ಗೋಣಿಕೊಪ್ಪದಲ್ಲಿ ನುಡಿನಮನ: ಆದಿವಾಸಿ ಮಕ್ಕಳಿಗೆ ಶಿಕ್ಷಣದಿಂದ ಬಲ ತುಂಬಿ: ಕೇರಳ ಸಚಿವ ಓ.ಆರ್.ಕೇಳು ಕರೆ



ನೋವಿನ ಬದುಕು ಸಾಗಿಸುತ್ತಿರುವ ಆದಿವಾಸಿ ಕುಟುಂಬಗಳ ಮಕ್ಕಳಿಗೆ ಸರಕಾರ ಅಗತ್ಯ ಶಿಕ್ಷಣ ನೀಡುವ ಮೂಲಕ ಬಲ ತುಂಬಬೇಕು ಎಂದು ಕೇರಳ ಸರಕಾರದ ಸಮಾಜ ಕಲ್ಯಾಣ ಮತ್ತು ಬುಡಕಟ್ಟು ಖಾತೆ ಸಚಿವ ಓ.ಆರ್. ಕೇಳು ಕರೆ ನೀಡಿದ್ದಾರೆ. ಇತ್ತೀಚೆಗೆ ಅನಾರೋಗ್ಯದಿಂದ ನಿಧನರಾದ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕ ಕೊಡಗಿನ ವೈ.ಕೆ.ಗಣೇಶ್ ಅವರಿಗೆ ವಿವಿಧ ಸಂಘಟನೆಗಳು ಗೋಣಿಕೊಪ್ಪಲಿನಲ್ಲಿ ನುಡಿನಮನದ ಮೂಲಕ ಶ್ರದ್ಧಾಂಜಲಿ ಅರ್ಪಿಸಿದವು.

ರಾಜ್ಯ ಸಹ ಸಂಚಾಲಕಿ ಜೆ.ಆರ್.ಪ್ರೇಮ ಅವರ ಅಧ್ಯಕ್ಷತೆಯಲ್ಲಿ ಎಪಿಎಂಸಿ ಸಭಾಂಗಣದಲ್ಲಿ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವರು ತುಳಿತಕ್ಕೊಳಗಾದವರ ಪರ ಧ್ವನಿ ಎತ್ತುತ್ತಿದ್ದ ವೈ.ಕೆ.ಗಣೇಶ್ ಅವರು ಅನಾರೋಗ್ಯದಿಂದ ಸಣ್ಣ ವಯಸ್ಸಿನಲ್ಲೇ ನಮ್ಮನ್ನು ಅಗಲಿರುವುದು ನೋವಿನ ಸಂಗತಿಯಾಗಿದೆ. ಆದಿವಾಸಿಗಳ ಏಳಿಗೆಗಾಗಿ ಅಪಾರ ಕೊಡುಗೆ ನೀಡಿದ್ದಾರೆ, ದಲಿತರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನ ಮಾಡಿದ್ದಾರೆ ಎಂದರು. ಜಿಲ್ಲೆಯಲ್ಲಿ ಆದಿವಾಸಿಗಳು ಕೂಲಿ ಕೆಲಸ ಮಾಡಿಕೊಂಡು ಸಂಕಷ್ಟದ ಬದುಕು ಸಾಗಿಸುತ್ತಿದ್ದಾರೆ. ಮೂಲಭೂತ ಸೌಲಭ್ಯಗಳ ಕೊರತೆಯಿಂದ ನೋವು ಅನುಭವಿಸುತ್ತಿದ್ದಾರೆ. ಸರಕಾರ ಆದಿವಾಸಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಎಲ್ಲಾ ಸೌಲಭ್ಯಗಳನ್ನು ನೀಡುವ ಮೂಲಕ ಸಮಸ್ಯೆಗಳಿಂದ ಮುಕ್ತಗೊಳಿಸಬೇಕು. ಆದಿವಾಸಿಗಳು ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗಬೇಕು ಎಂದು ತಿಳಿಸಿದರು.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಸಹ ಸಂಚಾಲಕ ಡಾ.ಎಸ್.ವೈ.ಗುರುಶಾಂತ್ ಮಾತನಾಡಿ ಕೊಡಗಿನ ಆದಿವಾಸಿಗಳು ಹಿಂದೆ ಭೂಮಿಯ ಒಡೆಯರಾಗಿ ಜೀವನ ಸಾಗಿಸುತ್ತಿದ್ದರು. ತಮ್ಮ ಸಂಸ್ಕೃತಿ, ಆಚಾರ, ವಿಚಾರವನ್ನು ಅನುಸರಿಸುತ್ತಿದ್ದರು. ಆದರೆ ಇಂದು ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ, ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಬಹಳ ಹಿಂದಿನಿಂದಲೂ ಆದಿವಾಸಿಗಳ ಮೇಲೆ ದೌರ್ಜನ್ಯ ಪ್ರಕರಣಗಳು ನಡೆದಿದೆ,ತಮ್ಮ ಬಾಲ್ಯದ ದಾರುಣ ಅನುಭವಗಳು ತಮಗಾದ ನೋವನ್ನು ವೈ.ಕೆ.ಗಣೇಶ್ ಅವರು ಹಂಚಿಕೊಳ್ಳುತ್ತಿದ್ದರು ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಡಾ.ಕೆ.ಪ್ರಕಾಶ್ ಮಾತನಾಡಿ ಆಹಾರ, ಶಿಕ್ಷಣ ಮತ್ತು ಭೂಮಿಗಾಗಿ ಹೋರಾಟ ನಡೆಸಿದ ಗಣೇಶ್ ಅವರ ಅಗಲಿಕೆ ಅತೀವ ನೋವನ್ನುಂಟು ಮಾಡಿದೆ. ಬಡತನದಿಂದ ಬಂದ ಅವರು ಬಡ ಜನರಿಗೋಸ್ಕರ ಬದುಕಿದರು. ಆದಿವಾಸಿಗಳ ಪರ ಕಾನೂನು ಹೋರಾಟ ನಡೆಸಲು ತನ್ನ ಮಗಳನ್ನು ವಕೀಲೆಯನ್ನಾಗಿ ಮಾಡಬೇಕೆನ್ನುವ ಕನಸನ್ನು ಗಣೇಶ್ ಕಂಡಿದ್ದರು. ಅವರ ಕನಸನ್ನು ನಾವೆಲ್ಲರು ಸೇರಿ ನನಸು ಮಾಡೋಣ, ಅವರ ಕುಟುಂಬದೊಂದಿಗೆ ಸಿಪಿಐ(ಎಂ) ಪಕ್ಷ ಇರಲಿದೆ ಎಂದು ಭರವಸೆ ನೀಡಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ರಮೇಶ್ ಹೆಚ್.ಬಿ ಕುಡಿಯುವ ನೀರು, ರಸ್ತೆ, ಸೇತುವೆ, ಚರಂಡಿ, ಶೌಚಾಲಯ, ರೇಷನ್ ಕಾರ್ಡ್, ಆಧಾರ್ ಕಾರ್ಡ್‌ಗಳಂತಹ ನಾಗರಿಕ ಸೌಲಭ್ಯಗಳನ್ನು ಗಿರಿಜನ ಹಾಡಿಗಳ ಜನರಿಗೆ ಸಿಗುವಂತೆ ಮಾಡುವಲ್ಲಿ ಹೋರಾಟಗಾರ ವೈ.ಕೆ.ಗಣೇಶ್ ಅವರು ಯಶಸ್ವಿಯಾಗಿದ್ದರು. ಕಸ್ತೂರಿರಂಗನ್ ವರದಿ ಅನುಷ್ಠಾನ ಮತ್ತು ಪರಿಸರ ಸೂಕ್ಷ್ಮ ವಲಯಗಳ ನಿರ್ಮಾಣದ ವಿರುದ್ಧ ಧ್ವನಿ ಎತ್ತಿದ್ದರು. ಇತ್ತೀಚೆಗೆ ಭೂಮಿ ಗುತ್ತಿಗೆ ನೀಡುವ ಸರಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಹೋರಾಟ ನಡೆಸಿದ್ದರು. ಗಣೇಶ್ ಅವರ ಹೋರಾಟ ದುರ್ಬಲರ ಮತ್ತು ತುಳುತಕ್ಕೊಳಗಾದವರ ಪರವಾಗಿತ್ತು ಎಂದು ಬಣ್ಣಿಸಿದರು.

ಪುಟ 10 ಕ್ಕೆ



ಕಾನೂನು ಪದವಿ ಓದು, ಜಡ್ಜ್ ಆಗಲು ಅಲ್ಲ

ಆದಿವಾಸಿ ಮಕ್ಕಳು ಉತ್ತಮ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಗುತ್ತಿಲ್ಲ. ಉತ್ತಮ ಬಟ್ಟೆ ಉಡುವುದೂ ಅಸಾಧ್ಯವಾಗುತ್ತಿದೆ. ನೀನು ಕಾನೂನು ಪದವಿ ಪಡೆಯಬೇಕು. ಜಡ್ಜ್ ಆಗಲು ಅಲ್ಲ. ಮಗಳೇ, ವಕೀಲೆಯಾಗಿ ನಮ್ಮ ಆದಿವಾಸಿಗಳಿಗೆ ಆಗುವ ಅನ್ಯಾಯಗಳ ವಿರುದ್ಧ ನ್ಯಾಯಕ್ಕಾಗಿ ಹೋರಾಡಲು ಎಂಬುದನ್ನು ಅಪ್ಪ ಒತ್ತು ಕೊಟ್ಟು ಹೇಳುತ್ತಿದ್ದರು.

–ಮನಸ್ವಿ ವೈ.ಜಿ.



ವಿದ್ಯಾರ್ಥಿ ದೆಸೆಯಿಂದಲೇ ಜೊತೆಗೂಡಿ ಚಳುವಳಿಯ ಒಡನಾಡಿಗಳಾಗಿದ್ದು ದೀರ್ಘಕಾಲದ ಗೆಳೆತನವನ್ನು ಹೊಂದಿದ್ದ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ.

ಆತ್ಮೀಯ ಸಂಗಾತಿ ಪ್ರೀತಿಯ ಗೆಳೆಯ

ಡಾ.ಎಸ್.ವೈ.ಗುರುಶಾಂತ್

'ಬಯ್ಯಾರೆಡ್ಡಿ' ಈ ಹೆಸರು ಕೇಳುತ್ತಲೇ ನನ್ನಲ್ಲಿ ಉಕ್ಕಿ ಬಂದ ನಗುವನ್ನು ತಡೆಯಲಾಗಲಿಲ್ಲ! ಏನಿದು ಹೆಸರು? ಇದೂ ಹೆಸರಾ? ಅಂತ ನೆನಪಿಸಿ ನೆನಪಿಸಿಕೊಂಡು ನಕ್ಕಿದ್ದೆ. ಮುಂದೆ ಹಲವು ಬಾರಿ ಬಯ್ಯಾರೆಡ್ಡಿ ನಾ? ಬೈರೆಡ್ಡಿನಾ? ಎಂದು ಗೊಂದಲಕ್ಕೂ ಒಳಗಾದದ್ದಿದೆ. ಯಾಕೆಂದರೆ ನಮ್ಮಲ್ಲಿ ಇಂತಹ ಹೆಸರು ಊಹಿಸಲೂ ಸಾಧ್ಯವಿರಲಿಲ್ಲ. ಇಂತಹ ಹಲವು ಹೆಸರುಗಳನ್ನು ಕೇಳುತ್ತಾ ಹೋದಂತೆ ನಾಡಿನ ವೈವಿಧ್ಯತೆಯ ಪರಿಚಯವೂ, ಅವುಗಳ ಒಪ್ಪಿಗೆಯೂ ಆಯಿತು. ಆದಾಗ್ಯೂ ಆಗೀಗ ಬಯ್ಯೋ ಧಾಟಿಯಲ್ಲಿ ಮಾತನಾಡಿದಾಗ "ನೋಡಯ್ಯಾ, ನಿನ್ನ ಹೆಸರು ಸ್ವಲ್ಪ ವ್ಯತ್ಯಾಸ ಆಗಿದೆ. ನಿಜ ಹೆಸರು ಬಯ್ಯೋರೆಡ್ಡಿ ಅಂತ ಇರಬೇಕಿತ್ತು" ಅಂತ ಛೇಡಿಸಿದ್ದಿದೆ. ಬಯ್ಯಾರೆಡ್ಡಿಯವರ ಸ್ನೇಹಮಯ ವರ್ತನೆ, ಕಾಳಜಿ, ಅಡ್ವೈಸ್‌ಗಳಿಂದ 'ಬಯ್ಯಾ'(ಸಹೋದರ) ಎಂತಲೂ ಕರೆಯಲಾಯಿತು.

ಅವರ ಹೆಸರು ಕೇಳಿದ್ದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ನ ರಾಜ್ಯ ಸಮಿತಿಯ ಸಭೆಗೆ ನಾನು ಮೊದಲ ಬಾರಿ ಹಾಜರಾದಾಗ. ಬಹುತೇಕ ನಾವು ಏಕ ಕಾಲಕ್ಕೆ ಎಸ್.ಎಫ್.ಐ. ರಾಜ್ಯ ಸಮಿತಿಯ ಸದಸ್ಯರಾದೆವು. ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ.ಎಸ್.ಆರ್. ಆರಾಧ್ಯ ರವರು ಸಮಿತಿಯ ಸಭೆಯಲ್ಲಿ ಪ್ರಾಸಂಗಿಕವಾಗಿ ಪಕ್ಷದ ಹೆಸರು ಪ್ರಸ್ತಾಪಿಸಿದರೆ ಅದನ್ನು ತೀವ್ರವಾಗಿ ಆಕ್ಷೇಪಿಸುತ್ತಿದ್ದುದು ಬಯ್ಯಾರೆಡ್ಡಿ. 'ಏ ಹಂಗಲ್ಲಪ್ಪ..' ಅಂತ ಆರಾಧ್ಯರು ಸಮಜಾಯಿಷಿ ನೀಡಿದರೂ ಆಕ್ಷೇಪದ ಧ್ವನಿ ತಗ್ಗುತ್ತಿರಲಿಲ್ಲ. ಹೀಗಾಗಿ ಅಂತಹ ಪ್ರಸಂಗ ಬಂದರೆ 'ಡೆಮೋಕ್ರಟಿಕ್ ಮೂವ್ ಮೆಂಟ್' ಅಂತ ಒಂದು ಹೊಸ ಪದ ಪ್ರಯೋಗವೂ ಬಳಕೆಗೆ ಬಂತು. ಆವತ್ತು ಅರ್ಥವಾದದ್ದು ಏನಂದ್ರೆ ಚಿಂತಾಮಣಿ ತಾಲೂಕಿನ ಪಕ್ಷದ ನಾಯಕರ ಬಗ್ಗೆ ಬಯ್ಯಾರೆಡ್ಡಿ ಅವರಿಗಿದ್ದ ಕೆಲವು ತಕರಾರುಗಳು! ಮುಂದೆ ಅವನ್ನು ಮೀರಿ ಪಕ್ಷದ ಸದಸ್ಯನಾಗಲು ಒಪ್ಪಿದ್ದು ಬೆಳವಣಿಗೆಯ ಒಂದು ಪ್ರಮುಖ ಹಂತ. ಈ ಬಗ್ಗೆ ಆಕ್ಷೇಪ ಇಟ್ಟುಕೊಂಡೂ ಪಕ್ಷದ ಸದಸ್ಯನಾದ ಬಗ್ಗೆ ಆರಾಧ್ಯರು ಹೇಳಿದ್ದರು.

1980 ರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ವಿಜಯನಗರ ಕಾಲೇಜಿನಲ್ಲಿ ಎಸ್ಎಫ್ಐ ಆರಂಭಿಸಿದೆವು. 1980 ಮತ್ತು 1981ರಲ್ಲಿ ತೀವ್ರ ಪೊಲೀಸ್ ದಬ್ಬಾಳಿಕೆಗಳು ನಡೆದವು. ಇದನ್ನು ಎದುರಿಸಲು ಬಾಂಬೆಯಲ್ಲಿ ನಡೆಯಲಿದ್ದ ಎಸ್.ಎಫ್.ಐ. ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಹೊಸಪೇಟೆಯಲ್ಲಿ 1981ರ ಕೊನೆಯಲ್ಲಿ ರಾಜ್ಯ ಸಮಾವೇಶ ನಡೆಸಲು ನಿರ್ಧರಿಸಲಾಯಿತು. ಹಲವು ಸವಾಲುಗಳ ನಡುವೆ ಅದು ಯಶಸ್ವಿಯಾಯಿತು. ಆ ಸಮಾವೇಶ ಮತ್ತು ಬಾಂಬೆ ಸಮ್ಮೇಳನಕ್ಕೆ ಬಯ್ಯಾರೆಡ್ಡಿ ಭಾಗವಹಿಸಿದ್ದನೋ ನೆನಪಿಲ್ಲ. ಆದರೆ ಮುಂದಿನ ವರ್ಷಗಳಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿಯ ಸಭೆಗಳಲ್ಲಿ ಕಂಡಿದ್ದಿದೆ. ನರಗುಂದ ನವಲಗುಂದ ರೈತರ ಬಂಡಾಯದ ಹಿನ್ನೆಲೆಯಲ್ಲಿ ಚಿಂತಾಮಣಿ ವಿದ್ಯಾರ್ಥಿಗಳ ಮೇಲೆ ನಡೆದ ಲಾಠಿಚಾರ್ಜ್, ಗೋಲಿಬಾರ್ ಘಟನೆಗಳು, ವಿದ್ಯಾರ್ಥಿ ಹುತಾತ್ಮನಾದುದು, ನಡೆದ ತೀವ್ರ ಪ್ರತಿಭಟನೆಗಳು ಇವೆಲ್ಲ ನಮಗೆ ಸ್ಫೂರ್ತಿ ನೀಡಿದವು. ಅದರಲ್ಲಿ ಬಯ್ಯಾರೆಡ್ಡಿ ಸಹ ಸಕ್ರಿಯವಾಗಿ ತೊಡಗಿದ್ದುದು ರಾಜ್ಯ ಸಮಿತಿಯ ಸಭೆಗಳ ವರದಿಯಲ್ಲಿ ತಿಳಿಯಿತು.

ಮುಂದೆ ಬಯ್ಯಾರೆಡ್ಡಿ ಅವಿಭಜಿತ ಕೋಲಾರ ಜಿಲ್ಲೆಯ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷನಾದ. ಜಿಲ್ಲಾ ಸಂಘಟನಾ ಸಮಿತಿಯಿದ್ದ ಅವಿಭಜಿತ ಬಳ್ಳಾರಿಯ ಹರಪನಹಳ್ಳಿಯಲ್ಲಿ ನಡೆದ ಪ್ರಥಮ ಜಿಲ್ಲಾ ಸಮ್ಮೇಳನದಲ್ಲಿ ನಾನು ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದೆ. (ದಿ. ಎಂ.ಉಳ್ಳೇಶ್ವರ್ ಅಧ್ಯಕ್ಷನಾಗಿ).

1984ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಎಸ್.ಎಫ್.ಐ. ನ 4ನೆಯ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ (ಡಾ.ಹೆಚ್.ನರಸಿಂಹಯ್ಯನವರಿಂದ ಉದ್ಘಾಟನೆ) ಬಯ್ಯಾರೆಡ್ಡಿ ರಾಜ್ಯ ಸಹ ಕಾರ್ಯದರ್ಶಿಯಾಗಿ, ನಾನು ಉಪಾಧ್ಯಕ್ಷನಾಗಿ ಆಯ್ಕೆಯಾದೆವು. ಆರ್. ಜಯಕುಮಾರ್ ಅಧ್ಯಕ್ಷರಾಗಿ, ಎಸ್.ಆರ್. ಆರಾಧ್ಯರು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ತಂಡ ಹಲವು ವಿಶಿಷ್ಟತೆಗಳಿಂದ ಕೂಡಿತ್ತು. ಪದಾಧಿಕಾರಿಯಾದ ಕಾರಣದಿಂದಲೂ ಎಲ್ಲರೊಡನೆ ಸಂವಾದಿಸುವ, ರಾಜ್ಯದ ಚಳುವಳಿಯ ಪರಿಚಯ ಪಡೆಯುವ ಅನುಭವದ ಸಾಧ್ಯತೆಗಳು ಉಂಟಾದವು. ಸಂಗಾತಿಗಳೊಂದಿಗೆ ಪ್ರೀತಿಯಿಂದ ಬೆರೆಯುವ ಗುಣವಿದ್ದ ಬಯ್ಯಾರೆಡ್ಡಿಯೊಂದಿಗೆ ಅತಿ ನಿಕಟತೆ, ಆತ್ಮೀಯ ಒಡನಾಟ ಸಾಧ್ಯವಾಯಿತು.

1988ರ ಜನವರಿಯಲ್ಲಿ ಗುಲ್ಬರ್ಗಾದಲ್ಲಿ ನಡೆದ ಎಸ್.ಎಫ್.ಐ.ನ ಐದನೆಯ ರಾಜ್ಯ ಸಮ್ಮೇಳನದಲ್ಲಿ ಕಾಂ.ಬಯ್ಯಾರೆಡ್ಡಿ ಅಧ್ಯಕ್ಷರಾಗಿ, ನಾನು ಕಾರ್ಯದರ್ಶಿಯಾಗಿ ಆಯ್ಕೆಯಾದೆವು. ಮುಖ್ಯ ಪದಾಧಿಕಾರಿಗಳು ರಾಜ್ಯ ಕೇಂದ್ರದಲ್ಲಿ ಇರಬೇಕೆಂದು, ರಾಜ್ಯ ಕೇಂದ್ರ ಬಲಗೊಳಿಸಿ ರಾಜ್ಯದಲ್ಲಿ ಚಳುವಳಿಯನ್ನು ಕಟ್ಟಬೇಕೆಂಬ ತಿಳುವಳಿಕೆ, ನಿರ್ಧಾರದಂತೆ ನಾವಿಬ್ಬರೂ ಜಿಲ್ಲೆಗಳನ್ನು ಬಿಟ್ಟು ಬೆಂಗಳೂರಿಗೆ ಬಂದೆವು. (1988 ಫೆಬ್ರವರಿ 1 ರಿಂದ). ರಾಜ್ಯ ಕೇಂದ್ರಕ್ಕೆ ಬಂದ ನಮ್ಮ ಮುಂದೆ ಹಲವು ಪ್ರಶ್ನೆಗಳಿದ್ದವು. ರಾಜ್ಯದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಬಲಪಡಿಸಬೇಕಾದರೆ ಪ್ರಮುಖವಾಗಿ ರಾಜಧಾನಿಯೂ ಆಗಿರುವ ಬೆಂಗಳೂರು ನಗರ ಮತ್ತು ಜಿಲ್ಲೆಯಲ್ಲಿ ಚಳುವಳಿ ಮತ್ತು ಸಂಘಟನೆಯನ್ನು ಬಲಿಷ್ಠಗೊಳಿಸಬೇಕಾಗಿತ್ತು. ಚಳುವಳಿಯನ್ನು ಕಟ್ಟಬೇಕಾದಲ್ಲಿ ಮೊದಲನೆಯದಾಗಿ, ತುಲನಾತ್ಮಕವಾಗಿ ದುರ್ಬಲವಾಗಿರುವ ಸಂಘಟನೆಯನ್ನು ಬಲಗೊಳಿಸಲು ಸ್ಥಳೀಯವಾಗಿ ಸಂಪರ್ಕಗಳನ್ನು ಸಾಧಿಸಿ, ಕಾರ್ಯಕರ್ತರ ತಂಡವನ್ನು ರಚಿಸಬೇಕಿತ್ತು. ಅಲ್ಲದೆ ಸ್ಥಳೀಯ ಸಂಗಾತಿಗಳೊಂದಿಗೆ ಸೌಹಾರ್ದಯುತ ಮತ್ತು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಾಗಿತ್ತು. ಈ ಕರ್ತವ್ಯವನ್ನು ಯಶಸ್ವಿಯಾಗಿ ನಡೆಸಬೇಕಾದಲ್ಲಿ ರಾಜ್ಯ ಪದಾಧಿಕಾರಿಗಳಾಗಿರುವ ನಾವಿಬ್ಬರೂ ಬೆಂಗಳೂರಿನ ಸಂಗಾತಿಗಳ ಜೊತೆಯಲ್ಲಿ ಬೆರೆತು, ಅವರಲ್ಲಿ ಕಾರ್ಯಕರ್ತರಾಗಿ ಸಮನ್ವಯದಿಂದ ಶ್ರಮಿಸುವುದೆಂದು, ಇಲ್ಲಿ ಎಸ್ಎಫ್ಐ ಸಂಘಟನೆ ಮತ್ತು ಚಳುವಳಿಯನ್ನು ಕಟ್ಟಬೇಕಾದ ಒಂದು ಮುಖ್ಯ ಗುರಿ ಇರಿಸಿಕೊಂಡೆವು. ಇನ್ನು ಎರಡನೆಯ ಪ್ರಶ್ನೆ, ರಾಜ್ಯ ಕೇಂದ್ರದ ಪ್ರಮುಖ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸುವ ನಾವು ನಮ್ಮ ನಡುವೆ ಇರಬೇಕಾದ ಪರಸ್ಪರ ತಿಳುವಳಿಕೆ ಮತ್ತು ಕೆಲಸದ ವಿಧಾನಗಳ ಬಗ್ಗೆ. ಈ ನೆಲೆಯಲ್ಲಿ ಅಧ್ಯಕ್ಷ, ಕಾರ್ಯದರ್ಶಿಯಾಗಿರುವ ನಾವು ನಮ್ಮ ನಡುವೆ ಒಂದು ಪರಸ್ಪರ ಸರಿಯಾದ ತಿಳುವಳಿಕೆ ಮತ್ತು ಗೌರವವನ್ನು ಕಾಪಾಡಿಕೊಳ್ಳುವುದು ಅಗತ್ಯ. ಹಾಗೆಯೇ ಹಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳು ಖಂಡಿತಕ್ಕೂ ಇರಬಹುದಾದರೂ, ಇಟ್ಟುಕೊಳ್ಳಬಹುದಾದ ಇಬ್ಬರ ನಡುವೆ ವ್ಯಕ್ತಿಗತವಾದ ಯಾವುದೇ ಅಂತರ, ಕಹಿ ಭಾವನೆಗಳು ಹೊಂದಬಾರದು. ಮತ್ತೊಂದು ಅಂಶ ಎಸ್ಎಫ್ಐ ಸಂಘಟನೆಯಲ್ಲಿ ನಾವು ಸಕ್ರಿಯವಾಗಿರುವವರೆಗೆ ಮದುವೆ ಆಗಬಾರದು. ಅದರಲ್ಲೂ ಸಂಘಟನೆಯಲ್ಲಿ ಬರುವ ಕಾರ್ಯಕರ್ತರನ್ನು ಈ ಅವಧಿಯಲ್ಲಿ ಮದುವೆ ಆಗಬಾರದು ಎಂಬ ಒಂದು ಪರಸ್ಪರ ಒಪ್ಪಂದಕ್ಕೆ ಬಂದೆವು. (ಯಾಕೆಂದರೆ ವಿದ್ಯಾರ್ಥಿ ಸಂಘಟನೆಗೆ ಬರುವ ವಿದ್ಯಾರ್ಥಿನಿಯರನ್ನು ಅವರ ತಂದೆ ತಾಯಿಗಳು ಸಂಘಟನೆಯಿಂದ ದೂರಗೊಳಿಸಬಾರದು ಎನ್ನುವ ಉದ್ದೇಶದಿಂದ)

ಬಹುತೇಕವಾಗಿ ನಾವು ಈ ಒಟ್ಟು ಅಂಶಗಳಲ್ಲಿ ಅತ್ಯಂತ ಸಮನ್ವಯ ಮತ್ತು ಸಂಗಾತಿತನದ ಸ್ಫೂರ್ತಿಯಿಂದ ಎಲ್ಲವನ್ನು ನಿಭಾಯಿಸಿದ್ದೇವೆ ಎಂದು ನಿಸ್ಸಂಕೋಚದಿಂದ ಹೇಳಬಹುದು.

ರಾಜ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ನಾವು ಅಖಿಲ ಭಾರತ ಸಂಘಟನಾ ಕಣ್ಣೋಟವನ್ನು ಆಧಾರವಾಗಿಟ್ಟುಕೊಂಡು ರಾಜ್ಯದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಬೆಳೆಸುವುದರತ್ತ ಚಿಂತಿಸಿದೆವು. ಬೆಂಗಳೂರಿನಲ್ಲಿ ಶಾಲಾ ಕಾಲೇಜುಗಳಿಗೆ ಇಲ್ಲಿಯ ಸ್ಥಳೀಯ ಕಾರ್ಯಕರ್ತರಾಗಿದ್ದ ಆರ್.ಮೋಹನ್, ಶ್ರೀಧರ ಮೂರ್ತಿ, ಎನ್.ಪ್ರಭ, ಎನ್.ರಾಜಣ್ಣ, ಎಸ್. ಆರ್.ಲೀಲಾ, ತೇಜಸ್ವಿನಿ ಮುಂತಾದವರೊಂದಿಗೆ ಓಡಾಡಿದೆವು. ಹೈಸ್ಕೂಲ್ ವಿದ್ಯಾರ್ಥಿಗಳ ಸಮಾವೇಶ, ಐಟಿಐ ವಿದ್ಯಾರ್ಥಿಗಳ ರಾಜ್ಯ ಸಮಾವೇಶ (ಐಟಿಐ ವಿದ್ಯಾರ್ಥಿಗಳನ್ನು ನಾವು ಬಳ್ಳಾರಿಯಲಿರುವಾಗ ಎಸ್.ಪ್ರಸನ್ನಕುಮಾರ್, ಎ.ಜಿ.ಗಂಗಾಧರ, ಲೋಕೇಶ್ ಧನ್ನೂರ್, ಉಮೇಶ್, ಬಿಂದು ಮಾಧವ, ಸಿ.ರಘುನಾಥ್ ಮತ್ತು ಇತರೆ ಸಂಗಾತಿಗಳು ಜೊತೆಗೂಡಿ ನಾವು ಐಟಿಐ, ಹಾಸ್ಟೆಲ್ ಸಮಸ್ಯೆಗಳ ಪರಿಹಾರಕ್ಕೆ ಸಮಾವೇಶ ನಡೆಸಿ ಹೋರಾಟ ನಡೆಸಿದ್ದೆವು.) ರೇಷ್ಮೆ ಪದವಿ ವಿದ್ಯಾರ್ಥಿಗಳ ಸಮಾವೇಶ ಅಲ್ಲದೆ ರಾಜೀವ್ ಗಾಂಧಿ ತರಲು ಹೊರಟಿದ್ದ ನೂತನ ಶಿಕ್ಷಣ ನೀತಿಯ ವಿರುದ್ಧದ ಸಮಾವೇಶ ಹೀಗೆ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಂಘಟನೆಯನ್ನು ವಿಸ್ತರಿಸುವ ಕಣ್ಣೋಟದೊಂದಿಗೆ ಕೆಲಸ ಮಾಡಿದುದರ ಪರಿಣಾಮವಾಗಿ ಸಂಘಟನೆ ರಾಜ್ಯದಲ್ಲಿ ವಿಸ್ತರಿಸಲು ಸಾಧ್ಯವಾಯಿತು. ಅಷ್ಟು ಮಾತ್ರವಲ್ಲ ರಾಜ್ಯದಲ್ಲಿ ಸ್ವಯಂ ಸ್ಫೂರ್ತಿಯಿಂದ ಎಲ್ಲೇ ವಿದ್ಯಾರ್ಥಿಗಳ ಚಳುವಳಿ ನಡೆದರೂ ಅಲ್ಲಿ ಎಸ್ಎಫ್ಐನ ಪರವಾಗಿ ಭೇಟಿಕೊಟ್ಟು ವಿದ್ಯಾರ್ಥಿಗಳಿಗೆ ಬೆಂಬಲಿಸಿ, ಆ ಹೋರಾಟದ ಯಶಸ್ವಿಗೆ ಕೈಜೋಡಿಸಿದ್ದು ಇನ್ನೊಂದು ಅನುಭವ. ಹೀಗೆ ಮಾಡುವಾಗ ಕಾರ್ಯಕರ್ತರ ತಂಡವನ್ನು ರಚಿಸಿಕೊಳ್ಳಲು ಬೆಂಗಳೂರಿನಲ್ಲಿ ಸಂಪರ್ಕಕ್ಕೆ ಬರುವ ವಿದ್ಯಾರ್ಥಿಗಳನ್ನು ಕಾರ್ಯಕರ್ತರಾಗಿಸಲು ಅಧ್ಯಯನ ವೃಂದವನ್ನು–ಸ್ಟಡಿ ಸರ್ಕಲ್ ಅನ್ನು ನಿರಂತರವಾಗಿ ನಡೆಸುತ್ತಾ ಬರಲಾಗುತ್ತಿತ್ತು. ಪರಿಣಾಮವಾಗಿ, ಕೆ.ಪ್ರಕಾಶ್, ಅನಂತ, ಮೀನಾಕ್ಷಿ ಸುಂದರಂ, ಮುಂತಾದ ಇಂದಿನ ಹಲವಾರು ನಾಯಕರು ಅಂತಹ ಅಧ್ಯಯನ ವೃಂದಗಳಲ್ಲಿ ತೊಡಗುವ ಮೂಲಕ ತಾತ್ವಿಕವಾಗಿ ಗಟ್ಟಿಗೊಳ್ಳಲು ಸಹಾಯಕವಾಗಿದೆ. ಹೀಗಾಗಿ ರಾಜ್ಯ ಕೇಂದ್ರದಲ್ಲಿ ಸಂಘಟನೆಯನ್ನು ಮತ್ತು ಚಳುವಳಿಯನ್ನು ಬಲಗೊಳಿಸುವುದರ ಜೊತೆ ಜೊತೆಯಲ್ಲೇ ರಾಜ್ಯದಲ್ಲಿಯೂ ಸಂಘಟನೆ ಒಂದು ಹೊಸ ಚೇತರಿಕೆ ಮತ್ತು ವಿಸ್ತರಣೆಯನ್ನು ಕಂಡುಕೊಂಡಿತು ಮತ್ತು ವಿದ್ಯಾರ್ಥಿ ಚಳುವಳಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆಯಿತು. ಬೆಂಗಳೂರಿನಲ್ಲಿ ಸಂಜೆ ಕಾಲೇಜು ವಿದ್ಯಾರ್ಥಿಗಳ ಸಮಸ್ಯೆಗಳು, ಹಾಗೆಯೇ ಇತರೆ ಸಾಮಾನ್ಯ ಪ್ರಶ್ನೆಗಳಿಗಾಗಿ ವಿವಿಧ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಐಕ್ಯತೆಯಿಂದ ಚಳುವಳಿಗಳನ್ನು ನಡೆಸಿದ್ದು ಮತ್ತೊಂದು ಪ್ರಧಾನ ಅಂಶ. ಹಾಗೆಯೇ ಅಖಿಲ ಭಾರತ ಮಟ್ಟದಲ್ಲಿ ಬೆಳೆದು ಬರುತ್ತಿದ್ದ ಜಂಟಿ ಹೋರಾಟಗಳಲ್ಲಿ ಪ್ರಮುಖವಾಗಿ ಎಡ ಮತ್ತು ಪ್ರಜಾಸತಾತ್ಮಕ ವಿದ್ಯಾರ್ಥಿ–ಯುವಜನ ಚಳುವಳಿಗಳೊಂದಿಗೆ ಎಸ್ಎಫ್ಐನ ಸಕ್ರಿಯ ಭಾಗವಹಿಸುವಿಕೆ ಮತ್ತು ಮುತುವರ್ಜಿ ಕೂಡ ಗುರುತಿಸುವಂಥದ್ದು (ಆರ್.ವಿ.ಹರೀಶ್, ಅಶೋಕ ನವಲಗುಂದ ಇತರರು.)

ಹೀಗೆ ನಿರಂತರವಾಗಿ ಚಳುವಳಿ ಮತ್ತು ಚಟುವಟಿಕೆಗಳು ಹಾಗೂ ಸೈದ್ಧಾಂತಿಕವಾದ ತರಗತಿಗಳು ವಿಭಿನ್ನ ಕಾರ್ಯಕ್ರಮಗಳ ಮೂಲಕವಾಗಿ ಸಂಘಟನೆ ರಾಜ್ಯದ ಚಳುವಳಿಯಲ್ಲಿ ಕೇಂದ್ರದ ಒಂದು ಸ್ಥಾನವನ್ನು ಪಡೆಯಿತು. ಇದರಲ್ಲಿ ರಾಜ್ಯ ಕೇಂದ್ರದಲ್ಲಿ ಕೆಲಸ ಮಾಡುವಾಗ ಗಮನಿಸಿದ್ದೆಂದರೆ ಬಯ್ಯಾರೆಡ್ಡಿಯಲ್ಲಿದ್ದ ಬದ್ಧತೆ, ಪ್ರಾಮಾಣಿಕತೆ, ಶಿಸ್ತು ಮತ್ತು ಮುನ್ನುಗ್ಗುವ ಗುಣ, ಗತ್ತು ಮತ್ತು ಆತ್ಮೀಯತೆ. ಮುಂದೆಯೂ ಇಡೀ ಅವಧಿಯಲ್ಲಿ ಕಾರ್ಯಕರ್ತರನ್ನ ಗುರುತಿಸುವುದು ಅವರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಲು ಪ್ರಯತ್ನಿಸುವುದು ಮತ್ತು ಚಳುವಳಿಗೆ ತೊಡಗಲು ಪ್ರೇರೇಪಿಸುವುದು ಬಯ್ಯಾರೆಡ್ಡಿ ಅವರಲ್ಲಿದ್ದ ವಿಶೇಷ ಗುಣ. ಅವರ ತಂದೆಯವರು ಹೇಳುತ್ತಿದ್ದ ಹಲವು ಪ್ರಾಯೋಗಿಕ ಮಾತುಗಳನ್ನು ಆಗಾಗ ಬಯ್ಯಾರೆಡ್ಡಿ ನೆನಪುಸಿಕೊಳ್ಳುತ್ತಿದ್ದರು. ಅವರ ತಂದೆಯವರು ಸ್ವಾತಂತ್ರ್ಯ ಹೋರಾಟಗಾರರು ಎನ್ನುವುದು ನಮಗೆ ಅತ್ಯಂತ ಹೆಮ್ಮೆಯ ಭಾವ ಹುಟ್ಟಿಸುತ್ತಿತ್ತು.

ಪುಟ 10 ಕ್ಕೆ

ಜಿ.ಸಿ. ಬಯ್ಯಾರೆಡ್ಡಿಯವರಿಗೆ ನುಡಿನಮನ

ಜನ ಚಳುವಳಿಗೆ ಕೊಡುಗೆಗಳ ಸ್ಮರಣೆ



ಜೂನ್ 4, 2025 ರಂದು ಸಿಪಿಐ(ಎಂ) ನಾಯಕ, ರೈತ ಚಳುವಳಿಯ ಮುಂದಾಳು ಜಿ.ಸಿ. ಬಯ್ಯಾರೆಡ್ಡಿಯವರಿಗೆ 'ನುಡಿನಮನ' ಕಾರ್ಯಕ್ರಮವು ಜೂನ್ 31, 2025 ರಂದು ಸಂಜೆ ಬೆಂಗಳೂರು ಕಬ್ಬನ್ ಪಾರ್ಕಿನ ಸಚಿವಾಲಯ ನೌಕರರ ಸಭಾಂಗಣದಲ್ಲಿ ನಡೆಯಿತು. ನಾನಾ ಜನಚಳುವಳಿಗಳ ಹಾಗೂ ವಿವಿಧ ರಾಜಕೀಯ ಪಕ್ಷಗಳ ನಾಯಕರು, ನಾನಾ ಕ್ಷೇತ್ರಗಳ ಗಣ್ಯರು, ಕಮ್ಯೂನಿಸ್ಟ್ ಕಾರ್ಯಕರ್ತರು ಅಗಲಿದ ಸಂಗಾತಿಗಳಿಗೆ ನುಡಿನಮನ ಸಲ್ಲಿಸಿದರು. ಒಂದು ವರದಿ.

ಕಾಂ.ಕೆ.ಎಸ್.ಲಕ್ಷ್ಮಿ ಮತ್ತು ಸಂಗಾತಿಗಳು ಹಾಡಿದ 'ನೀನು ನನ್ನಯ ಸಂಗಾತಿ', ಹಾಗೂ ಪಿಚ್ಚಳ್ಳಿ ಶ್ರೀನಿವಾಸ್ ಅವರ 'ತನುವಿನೊಳಗನುದಿನವಿದ್ದು.." ಎಂಬ ಹಾಡಿಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಮೊದಲಿಗೆ ವಿವಿಧ ಸಂಗಾತಿಗಳು ಬರೆದ ಲೇಖನಗಳುಳ್ಳ 'ಜನಚಳವಳಿಗಳ ನಾಯಕ ಪ್ರೀತಿಯ ಸಂಗಾತಿ ಜಿ.ಸಿ.ಬಯ್ಯಾರೆಡ್ಡಿ' ಎಂಬ ಕಿರು ಹೊತ್ತಿಗೆಯನ್ನು ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ರವರು ಬಿಡುಗಡೆ ಮಾಡಿದರು.

ನೈತಿಕ ನಿಷ್ಠಾವಂತ, ತಾತ್ವಿಕ ಹೃದಯವಂತ
-ಪ್ರೊ. ಬರಗೂರು

ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪನವರು ಮಾತನಾಡಿ ಬಯ್ಯಾರೆಡ್ಡಿಯವರು ಆರಂಭದ ದಿನಗಳಿಂದ ಕೊನೆಯ ದಿನಗಳವರೆಗೆ ಬದ್ಧತೆಯಿಂದ ಬದುಕಿದವರು. ಕಡೆ ಉಸಿರು ಇರುವವರೆಗೂ ಹೋರಾಟವನ್ನೇ ಧ್ಯಾನಿಸಿದವರು. ತಾವು ವಹಿಸಿಕೊಂಡ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದರು. ರೈತ ಚಳುವಳಿಯಲ್ಲಿ ಸಂಯುಕ್ತ ಹೋರಾಟ ಸಮಿತಿಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದರು. ಅವರು ನೈತಿಕ ನಿಷ್ಠಾವಂತ, ತಾತ್ವಿಕ ಹೃದಯವಂತ. ಹೃದಯವಂತಿಕೆ ಇಲ್ಲವಾದರೆ ತಾತ್ವಿಕತೆ ಶುಷ್ಕವಾಗುತ್ತದೆ. ಜಡವಾಗುತ್ತದೆ. ತಾತ್ವಿಕತೆ ಮೆದುಳಿಗೆ ಸಂಬಂಧಿಸಿದ್ದು. ಮಾನವೀಯತೆ ಮನಸ್ಸಿಗೆ ಸಂಬಂಧಿಸಿದ್ದು. ಬಯ್ಯಾರೆಡ್ಡಿ ಅವರಲ್ಲಿ ತಾತ್ವಿಕತೆ ಹೃದಯಸ್ತವಾಗಿತ್ತು. ಅವರು ಪ್ರಾಂತ ರೈತ ಸಂಘದ ಮುಖಂಡರಾಗಿ ಹೆಚ್ಚು ಜನಪ್ರಿಯರಾದರು. ಭೂಮಿಗೆ ಸಾಂಸ್ಕೃತಿಕ, ಭಾವನಾತ್ಮಕ ಆಯಾಮಗಳಿವೆ. ಭೂಮಿ ಹೋರಾಟಗಳ ಮೂಲಕ ಅವರು 'ಭೂಮಿಬದ್ಧ ಬಯ್ಯಾರೆಡ್ಡಿ' ಎನಿಸಿಕೊಂಡರು ಎಂದರು.



'ದುಡಿಯುವ ವರ್ಗದ ದತ್ತು ಪುತ್ರ'
-ಎಂ.ಎ. ಬೇಬಿ

ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯರಾದ ಎಂ.ಎ.ಬೇಬಿ ಮಾತನಾಡಿ, ತಾವು ವಿದ್ಯಾರ್ಥಿ ಮುಖಂಡರಾಗಿದ್ದಾಗ ಕರ್ನಾಟಕದಲ್ಲಿ ಎಸ್.ಆರ್.ಆರಾಧ್ಯ, ಎಸ್.ವೈ. ಗುರುಶಾಂತ್, ಬಯ್ಯಾರೆಡ್ಡಿಯವರ ಜೊತೆ ಕೆಲಸ ಮಾಡಿದ ನೆನಪುಗಳು ಹಸಿರಾಗಿವೆ ಎಂದರು. ಬಯ್ಯಾರೆಡ್ಡಿಯವರು ಜೀವನಪರ್ಯಂತ ಭೂಮಿಯಿಲ್ಲದ ಶೋಷಿತ ಜನರಿಗೆ ಭೂಮಿ ದಕ್ಕಬೇಕೆಂದು ಹೋರಾಟ ಮಾಡಿದರು. ಅವರು ಭೂಮಾಲಿಕರ ಕುಟುಂಬಕ್ಕೆ ಸೇರಿದವರಾಗಿದ್ದರು, ಆದರೆ ಅದನ್ನು ಬಿಟ್ಟು ಅವರು 'ದುಡಿಯುವ ವರ್ಗದ ದತ್ತು ಪುತ್ರ'ರಾದರು. ಗ್ಯಾಟ್ ಡಂಕೆಲ್, ವಿಶ್ವ ವ್ಯಾಪಾರ ಸಂಘಟನೆಯ ಷರತ್ತುಗಳ ವಿರುದ್ಧ ತೀವ್ರವಾದ ಹೋರಾಟಗಳನ್ನು ನಡೆಸಿದ್ದರು ಎಂದರು.

'ನಿಲೋನಾ' ಹೆಸರು ಬದ್ಧತೆಗೆ ಸಾಕ್ಷಿ
- ನ್ಯಾ. ವಿ. ಗೋಪಾಲಗೌಡ

ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರು ಮಾತನಾಡಿ, ಬಯ್ಯಾರೆಡ್ಡಿಯವರ ತಂದೆ ಸ್ವಾತಂತ್ರ್ಯ ಹೋರಾಟಗಾರರು, ಆದರೆ ಮಾರ್ಕ್ಸ್‌ವಾದಿಯಾಗಿರಲಿಲ್ಲ. ಬಯ್ಯಾರೆಡ್ಡಿಯವರು ವಿದ್ಯಾರ್ಥಿ ಚಳುವಳಿಯ ಮೂಲಕ ಮಾರ್ಕ್ಸ್‌ವಾದಿ ಚಳುವಳಿಗೆ ಸೇರಿದರು. ವಿದ್ಯಾರ್ಥಿಗಳಿಗಾಗಿ ರೈತರಿಗಾಗಿ ಹೋರಾಡಿದರು. ತಮ್ಮ ಮಗಳಿಗೆ ಮ್ಯಾಕ್ಸಿಂ ಗೋರ್ಕಿಯವರ ವಿಶ್ವವಿಖ್ಯಾತ ಕಾದಂಬರಿ 'ತಾಯಿ' ಒಂದು ಪಾತ್ರದ 'ನಿಲೊನಾ' ಎಂಬ ಹೆಸರನ್ನು ಇಟ್ಟಿರುವುದು ಅವರ ಬದ್ಧತೆಗೆ ಸಾಕ್ಷಿ ಎಂದರು.

ಅಪ್ಪನ ದಾರಿಯಲ್ಲಿ
ನಡೆಯಲು ಪ್ರಯತ್ನಿಸುವೆ-ನಿಲೊನಾ

ಬಯ್ಯಾರೆಡ್ಡಿಯವರ ಮಗಳು ನಿಲೊನಾ ಮಾತನಾಡಿ, ಕಮ್ಯೂನಿಸ್ಟ್ ಸಿದ್ಧಾಂತ, ಸಿಪಿಐ(ಎಂ) ಪಕ್ಷ ಅಪ್ಪನ ಜೀವನದ ಭಾಗವಾಗಿತ್ತು. ಅವರು ಕುಟುಂಬಕ್ಕಿಂತ ಪಕ್ಷವನ್ನು ಆಯ್ಕೆ ಮಾಡಿಕೊಂಡರು. ಅದರ ಬಗೆಗೆ ನಮಗೆ ಬೇಜಾರಿಲ್ಲ. ಅಪ್ಪನಷ್ಟು ಎತ್ತರಕ್ಕೆ ನಾನು ಏರುತ್ತೇನೋ ನನಗೆ ಗೊತ್ತಿಲ್ಲ. ಆದರೆ ಅವರ ದಾರಿಯಲ್ಲಿ ಸಾಧ್ಯವಾದಷ್ಟು ನಡೆಯಲು ಪ್ರಯತ್ನಿಸುತ್ತೇನೆ. ಅಪ್ಪ, ತಮ್ಮ ಶ್ವಾಸಕೋಶ ಕೇವಲ ಶೇ.30 ರಷ್ಟು ಮಾತ್ರ ಕೆಲಸ ಮಾಡುತ್ತಿದ್ದುದನ್ನು ತಿಳಿದುಕೊಂಡು, ಅದನ್ನು ನಿಬಾಯಿಸಿಕೊಂಡು ಕೆಲಸ ಮಾಡುತ್ತಿದ್ದರು. ಪರಿಸರ ಮಾಲ್ಯಿನ್ಯ, ಹವಾಮಾನ ವೈಪರೀತ್ಯಗಳು ಈಗಿನ ದೊಡ್ಡ ಸಮಸ್ಯೆಗಳಾಗಿವೆ. ನಮ್ಮದೇ ಆದ ಸಣ್ಣ ರೀತಿಯಲ್ಲಿ ಕೆಲಸ ಮಾಡೋಣ. ನಮ್ಮ ನಗರ, ದೇಶವನ್ನು ಸ್ವಚ್ಛವಾಗಿಡೋಣ ಎಂದರು.

ಜಮೀನ್ದಾರರ ಮಕ್ಕಳು ಕಮ್ಯೂನಿಸ್ಟರಾಗುವುದು
ವಿಶೇಷ-ಎಲ್.ಹನುಮಂತಯ್ಯ

ಕವಿ, ಮಾಜಿ ಸಂಸದ ಎಲ್. ಹನುಮಂತಯ್ಯನವರು ಮಾತನಾಡಿ, ನಾನು ಎಸ್.ಎಫ್.ಐ. ಬೆಂಗಳೂರು ಜಿಲ್ಲಾ ಅಧ್ಯಕ್ಷನಾಗಿ ಬಯ್ಯಾರೆಡ್ಡಿಯವರೊಂದಿಗೆ ಕೆಲಸ ಮಾಡಿದ್ದೇನೆ. ಕಮ್ಯೂನಿಸ್ಟ್ ಚಳುವಳಿಯ ಅನೇಕ ನಾಯಕರು ಜಮೀನ್ದಾರರು ಅಥವಾ ಶ್ರೀಮಂತರ ಮಕ್ಕಳಾಗಿರುವುದು ಕಂಡು ಬರುತ್ತದೆ. ದಲಿತರು ಕಮ್ಯೂನಿಸ್ಟರಾಗುವುದು ನನಗೆ ವಿಶೇಷ ಅನಿಸುವುದಿಲ್ಲ. ಇದು ವಿಶೇಷ ಎಂದರು. ಬಯ್ಯಾರೆಡ್ಡಿಯವರು ದಲಿತ ಚಳುವಳಿ, ಕಮ್ಯೂನಿಸ್ಟ್ ಚಳುವಳಿಯ ನಡುವೆ ಸಮನ್ವಯಗಾರರಾಗಿದ್ದರು. ವಿವಿಧ ಸಂಘಟನೆಗಳ ನಡುವೆ ನೆಯ್ಗೆ ಮಾಡಿ ಜೋಡಿಸುವ, ಅವರನ್ನು ಒಟ್ಟು ಸೇರಿಸುವ ದೊಡ್ಡ ಗುಣ ಅವರಲ್ಲಿತ್ತು ಎಂದರು. ಕಾಂಗ್ರೆಸ್ ಸರಕಾರ ಜನರಿಗಾಗಿ ಏನು ಮಾಡಬಹುದು ಎಂದು ನನ್ನೊಂದಿಗೆ ಚರ್ಚಿಸುತ್ತಿದ್ದರು ಎಂದ ಹನುಮಂತಯ್ಯನವರು, ಕೋಮುವಾದಿಗಳನ್ನು ಅಧಿಕಾರದಿಂದ ದೂರವಿಡಲು, ದೇಶವನ್ನು ಉಳಿಸಲು ಕಮ್ಯೂನಿಸ್ಟ್ ಪಕ್ಷಗಳು ಕಾಂಗ್ರೆಸ್ ಜೊತೆಗೆ ಸೇರಿ ಕೆಲಸ ಮಾಡುವ ಪರಿಸ್ಥಿತಿ ಈಗ ಬಂದಿದೆ. ಆದರೆ ಸರಕಾರ ಯಾವುದಾದರೂ ಇರಲಿ ಜನಾಂದೋಲನ ಬೆಳೆಯಲಿ ಎಂದರು.

ಕೊನೆಯ ದಿನಗಳಲ್ಲೂ ಕೂಡ...
-ಕೆ.ಎಚ್. ಮುನಿಯಪ್ಪ

ಅವಿಭಜಿತ ಕೋಲಾರ ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಹೋರಾಟ ಬಹಳ ಎತ್ತರದ್ದು ಎಂದು ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು ರಾಜ್ಯದ ಸಚಿವ ಕೆ.ಎಚ್. ಮುನಿಯಪ್ಪ ಅವರು. 1952 ರಲ್ಲಿಯೇ ಕಮ್ಯೂನಿಸ್ಟ್ ನಾಯಕ ಮಳ್ಳೂರು ಪಾಪಣ್ಣ, ಆಗಿನ ದ್ವಿಕ್ಷೇತ್ರದಿಂದ ಆಯ್ಕೆಯಾಗಿದ್ದರು. ನಂತರದಲ್ಲಿ ಕಮ್ಯೂನಿಸ್ಟರು, ಇತರ ಕಾಂಗ್ರೆಸ್ ವಿರೋಧಿ ಪಕ್ಷಗಳೂ ಸೇರಿ 'ಸಂಯಕ್ತ ರಂಗ' ಕಟ್ಟಿಕೊಂಡು ಜಿಲ್ಲೆಯಲ್ಲಿ ಬಾಗೇಪಲ್ಲಿ ಕ್ಷೇತ್ರ ಬಿಟ್ಟು ಎಲ್ಲ 11 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿದ್ದರು ಎಂದರು. ಮಳ್ಳೂರು ಪಾಪಣ್ಣ ಬಹಳ ದೊಡ್ಡ ಜಮೀನ್ದಾರರ ಕುಟುಂಬದವರು. ಅವರ ಅಣ್ಣ ಪಿಳ್ಳೇಗೌಡ 4-5 ಊರಿಗೆ ಜಮೀನ್ದಾರರು. ಆದರೆ ಪಾಪಣ್ಣನವರು ಸಮಾಜದಲ್ಲಿ ಸಮಾನತೆ ಬರಬೇಕು, ಜಾತಿ-ಧರ್ಮ ಮುಖ್ಯ ಅಲ್ಲ ಎಂಬ ಧೋರಣೆಯಲ್ಲಿ ಕೆಲಸ ಮಾಡಿದರು. ಪಾಪಣ್ಣನವರು ತಾವು ಮಾಧ್ಯಮಿಕ ಶಾಲೆಯಲ್ಲಿ ಇರುವಾಗ, ತಮ್ಮನ್ನು "ನಿಮ್ಮ ಊರಿನ ಗೌಡರು ಬಡವರಿಗೆ ಸಹಾಯ ಮಾಡ್ತಾರಾ? ಇಲ್ಲಾ ಅವರ ಜಮೀನು ಕಿತ್ಕೊಂಡು ಬಿಡ್ತಾರ ?" ಎಂದು ತಮ್ಮನ್ನು ಕೇಳಿದ್ದರು ಎಂದು ನೆನಪಿಸಿಕೊಂಡರು.

ಇಂತಹ ಪರಂಪರೆಯ ಹಿನ್ನೆಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿಯ ನಾಯಕರಾಗಿ ಬೆಳೆದು ಬಂದ ಬಯ್ಯಾರೆಡ್ಡಿಯವರು ಕೊನೆಯ ದಿನಗಳಲ್ಲೂ ಕೂಡ ದೇವನಹಳ್ಳಿ ತಾಲ್ಲೂಕಿನ ಚೆನ್ನರಾಯಪಟ್ಟಣದ ಹೋರಾಟನಿರತ ರೈತರ ಪರವಾಗಿ ಮುಖ್ಯಮಂತ್ರಿಗಳಲ್ಲಿ ರೈತರನ್ನು ಉಳಿಸಬೇಕು ಎಂದು ಒತ್ತಾಯಿಸಿದ್ದರು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ನೀಲಾ ಅವರು ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ 1,200 ದಿನಗಳಿಗಿಂತಲೂ ಹೆಚ್ಚು ದಿನಗಳಲ್ಲಿ ಹೋರಾಟದಲ್ಲಿರುವ ಚೆನ್ನರಾಯಪಟ್ಟಣದ ರೈತರ ಭೂಮಿಯನ್ನು ಅವರಿಗೆ ಬಿಟ್ಟು ಕೊಡಬೇಕು ಎಂದು ಒತ್ತಾಯಿಸಿದರು.

ಪುಟ 14 ಕ್ಕೆ



ಮೋಸ ವಂಚನೆ ಆದಾಗ ಯಾರೇ ಆದರೂ ಎದುರು ಹಾಕಿಕೊಳ್ಳುವ ಧೈರ್ಯ ಇತ್ತು - ಡಾ.ಕೆ.ಪ್ರಕಾಶ್

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ. ಕೆ. ಪ್ರಕಾಶ್ ಅವರು ಮಾತನಾಡಿ, ಕಾರ್ಯಕರ್ತರನ್ನು ಕಮ್ಯೂನಿಸ್ಟ್ ಕಾರ್ಯಕರ್ತರಾಗಿ ರೂಪಿಸುವ ವಿಶೇಷ ಸಾಮರ್ಥ್ಯ ಅವರಿಗಿತ್ತು. ಸಮಾಜದಲ್ಲಿನ ಭ್ರಷ್ಟಾಚಾರ, ಅಸಮಾನತೆ, ಅನ್ಯಾಯಗಳ ಬಗೆಗೆ ಅಸಮಾಧಾನವಿದ್ದವರನ್ನು ಪ್ರಭಾವಿಸಿ ಕಮ್ಯೂನಿಸ್ಟ್ ಕಾರ್ಯಕರ್ತರನ್ನಾಗಿಸುತ್ತಿದ್ದರು ಎಂದರು. ಮೋಸ ವಂಚನೆ, ಅನ್ಯಾಯ ಆದಾಗ ಯಾರೇ ಆದರೂ ಅವರನ್ನು ವಿರೋಧಿಸಿ ಎದುರು ಹಾಕಿಕೊಳ್ಳುವ ಗುಣ, ಧೈರ್ಯ ಅವರಲ್ಲಿತ್ತು. ಹಣದ ಲೆಕ್ಕಚಾರಗಳನ್ನು ಇಡುವುದರಲ್ಲಿ, ಸಮಯ ಪಾಲಿಸುವುದರಲ್ಲಿ ಶಿಸ್ತುಬದ್ಧವಾಗಿದ್ದರು.

ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ದಲಿತರ ಸಜೀವ ದಹನ ಆದಾಗ, ಅದು ಇಡೀ ತಾಲ್ಲೂಕಿನಲ್ಲಿ ರೆಡ್ಡಿ ಮತ್ತು ದಲಿತ ಜಾತಿಯ ಜನರ ನಡುವೆ ವಿಭಜನೆಯಾಗಿದ್ದ ಕಾಲವಾಗಿತ್ತು. ಇಂತಹ ಪರಿಸ್ಥಿತಿಯಲ್ಲೂ ರೆಡ್ಡಿ ಜಾತಿಯ ಹಿನ್ನೆಲೆಯಿಂದ ಬಂದ ಬಯ್ಯಾರೆಡ್ಡಿಯವರು ಪಕ್ಷದ ನಾಯಕರಾಗಿ ದಲಿತ ಸಮುದಾಯದೊಂದಿಗೆ ದೃಢವಾಗಿ ನಿಂತರು. ತಮ್ಮ ವಿರುದ್ಧ ಎಷ್ಟೇ ಕೆಟ್ಟ ಅಪಪ್ರಚಾರಗಳು, ನಿಂದನೆ ನಡೆದರೂ ಅವರು ವಿಚಲಿತರಾಗಲಿಲ್ಲ. ಹಾಗೆಯೇ ಸಿಪಿಐ(ಎಂ) ಮುಖಂಡರಾದ ಪಿ. ರಾಮಚಂದ್ರರಾವ್ ಅವರು ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿದ್ದ ಸಂದರ್ಭದಲ್ಲಿ ಮಂಗಳೂರು ಕ್ಷೇತ್ರದ ಭಾಗವಾಗಿದ್ದ ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನ ಬಸ್ ಸ್ಟಾಂಡಿನಲ್ಲಿ ನಡೆಯುತ್ತಿದ್ದ ಪಕ್ಷದ ಬಹಿರಂಗ ಸಭೆಯ ಮೇಲೆ ಬಿಜೆಪಿ-ಆರ್.ಎಸ್.ಎಸ್.ನ ಕೋಮುವಾದಿ ಗೂಂಡಾಗಳು ದಾಳಿ ಮಾಡಿದ್ದರು. ಆಗ ಬಯ್ಯಾರೆಡ್ಡಿಯವರು ಒಂದು ಕೈಯಲ್ಲಿ ದಾಳಿ ಮಾಡಿದವನ ಕೊರಳ ಪಟ್ಟಿ ಹಿಡಿದುಕೊಂಡೇ, ಭಾಷಣ ಮುಂದುವರಿಸಿದ್ದರು. ಕರ್ನಾಟಕದಲ್ಲಿ ಪಕ್ಷವನ್ನು ಕಾಪಾಡಿ, ಎಲ್ಲ ಶ್ರಮ ಹಾಕಿ ಪಕ್ಷವನ್ನು ಕಟ್ಟಿ ಎಂಬ ಕಾಂ. ಸೂರಿಯವರ ಮಾತನ್ನು ಬದುಕಿನ ಕೊನೆಯ ಕ್ಷಣಗಳಲ್ಲೂ ನೆನಪಿಸಿಕೊಳ್ಳುತ್ತಿದ್ದರು. ಇದನ್ನು ಸಾಧಿಸುವುದು ಆ ಮೂಲಕ ಬಲಿಷ್ಠ ಎಡ, ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟುವುದೇ ನಾವು ಅವರಿಗೆ ಕೊಡುವ ಗೌರವ ಎಂದರು.

‘ಫ್ಯೂರರ್’ ಟ್ರಂಪ್ ಪ್ರಪಂಚದ ಮೇಲೆ ಮತ್ತು ಕಾರ್ಮಿಕ ವರ್ಗದ ಮೇಲೆ ಘೋಷಿಸಿದ ಯುದ್ಧ

ಡೊನಾಲ್ಡ್ ಟ್ರಂಪ್ ಅವರ ಅಧಿಕಾರ ಸ್ವೀಕಾರ ಸಮಾರಂಭವು ಅಸಹ್ಯಕರವಾದ ಫ್ಯಾಸಿಸ್ಟ್ ಘಟನೆಯಾಗಿ ಇತಿಹಾಸದಲ್ಲಿ ದಾಖಲಾಗುತ್ತದೆ. ಹಣದ ಹಸಿವಿನಿಂದ ಬಳಲುತ್ತಿರುವ ವಿಶ್ವದ ಅತಿ ಶ್ರೀಮಂತರ ಪ್ರತಿನಿಧಿಯಾಗಿ ಟ್ರಂಪ್ ಶ್ವೇತಭವನವನ್ನು ಪ್ರವೇಶಿಸುತ್ತಾರೆ, ಇದು ನಿಜವಾದ ಸಾಮಾಜಿಕ ನೆಲೆಗೆ ನೇರ ವಿರುದ್ಧವಾಗಿದೆ. “ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿಯನ್ನು ರಕ್ಷಿಸಲು, ಲಾಭ ಮತ್ತು ಅಪರಿಮಿತ ಸಂಪತ್ತನ್ನು ಪಡೆಯಲು, ಅಮೆರಿಕದ ಆಡಳಿತ ವರ್ಗವು ಜರ್ಮನಿಯಲ್ಲಿ ಹಿಟ್ಲರ್ ಮಾಡಿದಂತೆ ‘ರಾಷ್ಟ್ರೀಯತೆ’ಯ ಹೆಸರಿನಲ್ಲಿ ಕ್ರೌರ್ಯವನ್ನು ಹೇರಲಾಗುವುದು ಎಂದು ಪ್ರಸಿದ್ಧ ಅಮೇರಿಕನ್ ಬರಹಗಾರ ಸಿಂಕ್ಲೇರ್ ಲೂಯಿಸ್ 1935ರಲ್ಲಿ ಬರೆದ ಫ್ಯಾಸಿಸ್ಟ್ ವಿರೋಧಿ ಕಲ್ಪಿತ ಕಾದಂಬರಿ ``It Can't Happen Here'' ನಲ್ಲಿ ಎಚ್ಚರಿಸಿದ್ದರು. ಆ ರಾಜಕೀಯ ಕಾದಂಬರಿಯ ಕಾಲ್ಪನಿಕ ಕಥೆ 90 ವರ್ಷಗಳ ನಂತರ ಇಲ್ಲಿ ಈಗ ರಿಯಾಲಿಟಿ ಆಗಿಬಿಟ್ಟಿದೆ.

ಪೆಟ್ರಿಕ್ ಮಾರ್ಟಿನ್, ಡೇವಿಡ್ ನಾರ್ತ್

ಪ್ರಸಿದ್ಧ ಅಮೇರಿಕನ್ ಬರಹಗಾರ ಸಿಂಕ್ಲೇರ್ ಲೂಯಿಸ್ ಅವರ ಫ್ಯಾಸಿಸ್ಟ್ ವಿರೋಧಿ ಕಾದಂಬರಿ "ಇಟ್ ಕ್ಯಾನ್ಟ್ ಹ್ಯಾಪನ್ ಹಿಯರ್" (It Can't Happen Here)ನಲ್ಲಿ ಕಲ್ಪಿಸಲಾದ ಕ್ರೂರ, ಮಾಧ್ಯಮ ವಂಚಕ ಮತ್ತು ಪ್ರಚಾರ ನಾಯಕ ಅಧ್ಯಕ್ಷ "ಬಜ್" ವಿಂಡ್ರಿಪ್ ಅವರ ಅವತಾರವಾಗಿ ಇಂದು ಟ್ರಂಪ್ ಕಾಣಿಸಿಕೊಂಡರು. ಲೂಯಿಸ್ ಅವರ 1935ರ ಡಿಸ್ಟೋಪಿಯನ್ ರಾಜಕೀಯ ಕಾದಂಬರಿಯಾಗಿದೆ. ಇದನ್ನು ಅಮೆರಿಕದಲ್ಲಿ ಫ್ಯಾಸಿಸಂನ ಉದಯದ ವಿರುದ್ಧ ಎಚ್ಚರಿಕೆಯಾಗಿ ನೋಡಲಾಯಿತು. 1930ರ ದಶಕದ ಯುನೈಟೆಡ್ ಸ್ಟೇಟ್ಸ್ ನ ಕಾಲ್ಪನಿಕ ಆವೃತ್ತಿಯಲ್ಲಿ ಹೊಂದಿಸಲಾದ, ಅಮೆರಿಕನ್ ರಾಜಕಾರಣಿ ಬೆರ್ಜೆಲಿಯಸ್ "ಬಜ್" ವಿಂಡ್ರಿಪ್ ಅವರನ್ನು ಇದು ಅನುಸರಿಸುತ್ತದೆ, ಅವರು ಬೇಗನೆ ಅಧಿಕಾರಕ್ಕೆ ಏರಿ ದೇಶದ ಮೊದಲ ಸಂಪೂರ್ಣ ಸರ್ವಾಧಿಕಾರಿಯಾಗುತ್ತಾರೆ. ಆ ರಾಜಕೀಯ ಕಾದಂಬರಿಯ ಕಾಲ್ಪನಿಕ ಕಥೆ ಇಲ್ಲಿ ಈಗ ರಿಯಾಲಿಟಿ ಆಗಿಬಿಟ್ಟಿದೆ. ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿಯನ್ನು ರಕ್ಷಿಸಲು, ಲಾಭ ಮತ್ತು ಅಪರಿಮಿತ ಸಂಪತ್ತನ್ನು ಪಡೆಯಲು, ಅಮೆರಿಕದ ಆಡಳಿತ ವರ್ಗವು ಜರ್ಮನಿಯಲ್ಲಿ ಹಿಟ್ಲರ್ ಮಾಡಿದಂತೆ –‘ರಾಷ್ಟ್ರೀಯತೆ’ಯ ಹೆಸರಿನಲ್ಲಿ ಕ್ರೌರ್ಯವನ್ನು ಹೇರಲಾಗುವುದು ಎಂದು ಕಾದಂಬರಿ ಎಚ್ಚರಿಸಿದೆ. ತೊಂಬತ್ತು ವರ್ಷಗಳ ನಂತರ, ಜನವರಿ 20, 2025ರಂದು ನಡೆದ ಅದ್ಧೂರಿ ಉದ್ಘಾಟನಾ ಸಮಾರಂಭವು ಲೂಯಿಸ್ ಅವರ ಎಚ್ಚರಿಕೆಯನ್ನು ಸಾಬೀತುಪಡಿಸಿದೆ.

ಹಿಟ್ಲರನ ಪುನರ್ಜನ್ಮದಂತೆ...

ತಮ್ಮ ಅಧಿಕಾರ ಸ್ವೀಕಾರದಲ್ಲಿನ ಭಾಷಣದ ಫ್ಯಾಸಿಸ್ಟ್ ಸ್ಫೂರ್ತಿಯನ್ನು ಮರೆಮಾಡಲು ಟ್ರಂಪ್ ಯಾವುದೇ ಪ್ರಯತ್ನ ಮಾಡಲಿಲ್ಲ. ಜರ್ಮನ್ ಅಧ್ಯಕ್ಷ ಹುದ್ದೆಗೆ ಏರಿದ ಎರಡು ದಿನಗಳ ನಂತರ, ಫೆಬ್ರವರಿ 1, 1933 ರಂದು ಹಿಟ್ಲರ್ ಮಾಡಿದ ಮೊದಲ ರೇಡಿಯೋ ಭಾಷಣದ ಧ್ವನಿ ಮತ್ತು ವಿಷಯದ ಮಾದರಿಯನ್ನು ಈಗ ಟ್ರಂಪ್ ಅವರ ಭಾಷಣವು ಸ್ಪಷ್ಟವಾಗಿ ಹೊಂದಿದೆ. ಆ ದಿನದ ಹಿಟ್ಲರ್ ಭಾಷಣವು ವೀಮರ್ ಗಣರಾಜ್ಯ ಮತ್ತು ಅದರ ನಾಯಕರನ್ನು ಕಟುವಾಗಿ ಖಂಡಿಸುವುದಕ್ಕೆ ಮೀಸಲಾಗಿತ್ತು, ಅವರು ಪವಿತ್ರವಾದ ಜರ್ಮನ್ "ವೋಕ್"ಗೆ ದ್ರೋಹ ಬಗೆದಿದ್ದಾರೆ ಎಂದು ಆರೋಪಿಸಿದರು. ಎಲ್ಲಾ ದೇಶದ್ರೋಹಿಗಳನ್ನು ನಿರ್ಮೂಲನೆ ಮಾಡಲಾಗುತ್ತದೆ ಮತ್ತು ಜರ್ಮನಿ ಮತ್ತೆ ಶ್ರೇಷ್ಠತೆಯನ್ನು ಪಡೆಯುತ್ತದೆ ಎಂದು ಹಿಟ್ಲರ್ ಹೇಳಿದನು.

ಯಾರ ಸುವರ್ಣಯುಗ?

ಟ್ರಂಪ್, ಹಿಟ್ಲರನ "ಸಾವಿರ ವರ್ಷಗಳ ರೀಚ್" ಕಲ್ಪನೆಯನ್ನು ತೆಗೆದುಕೊಂಡು ಅದನ್ನು ಅಮೆರಿಕದ "ಸುವರ್ಣಯುಗ" ಎಂದು ಮರುರೂಪಿಸಿದ್ದಾರೆ. ಆದರೆ ಈ "ಸುವರ್ಣಯುಗ" ಟ್ರಂಪ್ ಮತ್ತು ಅವರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿದ್ದ ಬಿಲಿಯನೇರ್‌ಗಳಾದ ಎಲೋನ್ ಮಸ್ಕ್, ಜೆಫ್ ಬೆಜೋಸ್ ಮತ್ತು ಮಾರ್ಕ್ ಜುಕರ್ ಬರ್ಗ್‌ರಿಗೆ ಮಾತ್ರ ಅನ್ವಯಿಸುತ್ತದೆ. ಅವರೊಂದಿಗೆ ಇಟಾಲಿಯನ್ ಪ್ರಧಾನಿ ಜಾರ್ಜಿಯಾ ಮೆಲೋನಿ ಮತ್ತು ಅರ್ಜೆಂಟೀನಾದ ಅಧ್ಯಕ್ಷ ಜೇವಿಯರ್ ಮಿಯೆಲಾ ಅವರಂತಹ ಅಂತರರಾಷ್ಟ್ರೀಯ ಫ್ಯಾಸಿಸ್ಟ್ ಸ್ನೇಹಿತರು ಸೇರಿಕೊಂಡರು.

ರಾಜಕೀಯ ಧೈರ್ಯ ಇಲ್ಲದ ವಿರೋಧ ಪಕ್ಷಗಳು

ನಿರ್ಗಮಿತ ಅಧ್ಯಕ್ಷ ಜೋ ಬಿಡನ್, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಮಾಜಿ ಅಧ್ಯಕ್ಷರಾದ ಕ್ಲಿಂಟನ್, ಒಬಾಮಾ ಮತ್ತು ಚಾರ್ಲ್ಸ್ ಶುಮರ್, ಬರ್ನಿ ಸ್ಯಾಂಡರ್ಸ್, ಹಕೀಮ್ ಜೆಫ್ರಿಸ್ ಸೇರಿದಂತೆ ಮಾಜಿ ಮತ್ತು ಹಾಲಿ ಡೆಮಾಕ್ರಟಿಕ್ ಪಕ್ಷದ ನಾಯಕರು ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರನ್ನು ಟ್ರಂಪ್ ಸಾರ್ವಜನಿಕವಾಗಿ ಅವಮಾನಿಸಿದಾಗಲೂ, ಅವರು ಶಾಂತವಾಗಿ ಮತ್ತು ಗೌರವದಿಂದ ಆಲಿಸಿದರು. ಅವರಲ್ಲಿ ಯಾರಿಗೂ ಇತಿಹಾಸದ ಪ್ರಜ್ಞೆ ಅಥವಾ ಪ್ರಜಾಪ್ರಭುತ್ವ ತತ್ವಗಳಿಗೆ ಬದ್ಧತೆ ಇಲ್ಲ. ಫ್ಯಾಸಿಸ್ಟ್ ಅಧ್ಯಕ್ಷರ ಪದಗ್ರಹಣವನ್ನು ಸಾರ್ವಜನಿಕವಾಗಿ ಪ್ರತಿಭಟಿಸಿ ಸಮಾರಂಭದಿಂದ ಹೊರನಡೆಯುವ ರಾಜಕೀಯ ಧೈರ್ಯವೂ ಅವರಿಗೆ ಇರಲಿಲ್ಲ. ಬದಲಾಗಿ, ಅವರು ಅಮೆರಿಕಾದ ಇತಿಹಾಸದಲ್ಲಿ ಅತ್ಯಂತ ಪ್ರತಿಗಾಮಿ ಸರ್ಕಾರಕ್ಕೆ "ಶಾಂತಿಯುತ ಅಧಿಕಾರ ಪರಿವರ್ತನೆ"ಯನ್ನು ಶ್ಲಾಘಿಸಿದರು.



ಯುದ್ಧೋತ್ಸಾಹದ ಹುಚ್ಚುತನ

ಅಮೆರಿಕದ ವಿಸ್ತರಣೆಯ ಯೋಜನೆಗಳನ್ನು ಟ್ರಂಪ್ ಪುನರುಚ್ಚರಿಸಿದರು. ಅವರು ಪನಾಮ ಕಾಲುವೆಯನ್ನು "ಮರುಸ್ವಾಧೀನಪಡಿಸಿಕೊಳ್ಳುವುದಾಗಿ" ಘೋಷಿಸಿದರು. ಮೆಕ್ಸಿಕೋ, ಎಲ್ ಸಾಲ್ವಡಾರ್ ಮತ್ತು ವೆನೆಜುವೆಲಾದ ಕ್ರಿಮಿನಲ್ ಗ್ಯಾಂಗ್‌ಗಳನ್ನು ಐಸಿಸ್ ಮತ್ತು ಅಲ್–ಖೈದಾಗೆ ಸಮಾನವಾಗಿ "ವಿದೇಶಿ ಭಯೋತ್ಪಾದಕ ಸಂಘಟನೆಗಳು" ಎಂದು ಘೋಷಿಸುವುದಾಗಿ ಅವರು ಹೇಳಿದರು. ಇದು ಆ ದೇಶಗಳ ಮೇಲೆ ದಾಳಿ ಮಾಡಲು ಅಮೆರಿಕಕ್ಕೆ ಕಾನೂನುಬದ್ಧ ನೆಪವಾಗಿ ಕಾರ್ಯನಿರ್ವಹಿಸುತ್ತದೆ. 1897–1901ರ ಸ್ಪ್ಯಾನಿಷ್–ಅಮೆರಿಕನ್ ಯುದ್ಧದಲ್ಲಿ ಕ್ಯೂಬಾ, ಪೋರ್ಟೊ ರಿಕೊ, ಗುವಾಮ್ ಮತ್ತು ಫಿಲಿಪ್ಪೈನ್ಸ್‌ಗಳನ್ನು ವಶಪಡಿಸಿಕೊಂಡ ಅಧ್ಯಕ್ಷ ವಿಲಿಯಂ ಮೆಕಿನ್ಲೆ ಅವರ ಸಾಧನೆಗಳನ್ನು ಟ್ರಂಪ್ ಶ್ಲಾಘಿಸಿದರು. ಉತ್ತರ ಅಮೆರಿಕದ ಅತಿ ಎತ್ತರದ ಪರ್ವತವಾದ ಅಲಾಸ್ಕಾದ ಡೆನಾಲಿಗೆ ಮೆಕಿನ್ಲೆ ಹೆಸರಿಡುವುದಾಗಿ ಅವರು ಭರವಸೆ ನೀಡಿದರು. ಅವರು ಮೆಕ್ಸಿಕೋ ಕೊಲ್ಲಿಯನ್ನು "ಅಮೆರಿಕದ ಕೊಲ್ಲಿ" ಎಂದು ಮರುನಾಮಕರಣ ಮಾಡುವುದಾಗಿ ಘೋಷಿಸಿದರು. ಇತ್ತೀಚಿನ ವಾರಗಳಲ್ಲಿ ಅವರು ಗ್ರೀನ್ ಲ್ಯಾಂಡ್ ಅನ್ನು ಅಮೆರಿಕಕ್ಕೆ ಸೇರಿಸಿಕೊಳ್ಳಬೇಕು ಮತ್ತು ಕೆನಡಾವನ್ನು 51ನೇ ರಾಜ್ಯವಾಗಿ ಸೇರಿಸಿಕೊಳ್ಳಬೇಕು ಎಂಬ ಕರೆಗಳನ್ನು ಸ್ಪಷ್ಟವಾಗಿ ಹೇಳಲಾಗಿಲ್ಲ, ಆದರೆ ಅವುಗಳನ್ನು ಸೂಚ್ಯವಾಗಿ ಅರ್ಥಮಾಡಿಕೊಳ್ಳಲಾಗಿದೆ.

ವಲಸಿಗರಿಗೆ ಗುರುತು

ಅಮೆರಿಕ–ಮೆಕ್ಸಿಕೋ ಗಡಿಯಲ್ಲಿ ತಕ್ಷಣವೇ "ರಾಷ್ಟ್ರೀಯ ತುರ್ತುಸ್ಥಿತಿ" ಘೋಷಿಸುವುದಾಗಿ ಮತ್ತು "ವಿದೇಶಿ ಆಕ್ರಮಣ"ವನ್ನು ತಡೆಯಲು ಮಿಲಿಟರಿಯನ್ನು ನಿಯೋಜಿಸುವುದಾಗಿ ಟ್ರಂಪ್ ಘೋಷಿಸಿದರು. ವಲಸೆ ವಿರೋಧಿ ಆದೇಶಗಳ ಪ್ಯಾಕೇಜ್‌ನ ಭಾಗವಾಗಿ, ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿ ಆಶ್ರಯ ಪಡೆಯುವ ಎಲ್ಲರನ್ನು ಗಡೀಪಾರು ಮಾಡುವ "ಮೆಕ್ಸಿಕೊದಲ್ಲಿಯೇ ಉಳಿಯಿರಿ" ನೀತಿಯನ್ನು ಟ್ರಂಪ್ ಪುನಃ ಜಾರಿಗೆ ತರಲಿದ್ದಾರೆ.

ವಲಸಿಗರು ವಾಸಿಸುವ ಮತ್ತು ಕೆಲಸ ಮಾಡುವ ಪ್ರದೇಶಗಳಲ್ಲಿ ತಪಾಸಣೆಗಳನ್ನು ಹೆಚ್ಚಿಸಲು ಪೊಲೀಸ್–ಮಿಲಿಟರಿ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ. ಇದು ನೂರಾರು ಸಾವಿರ, ಅಂತಿಮವಾಗಿ ಲಕ್ಷಾಂತರ ಕಾರ್ಮಿಕರ ಬಂಧನಕ್ಕೆ ಕಾರಣವಾಗುತ್ತದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಈ ದಾಳಿಯು ಶೀಘ್ರದಲ್ಲೇ ಇಡೀ ವಲಸಿಗ ಮತ್ತು ದೇಶೀಯ ಕಾರ್ಮಿಕ ವರ್ಗದ ಮೇಲೆ ಪರಿಣಾಮ ಬೀರುತ್ತದೆ. 2017ರಲ್ಲಿ ಶ್ರೀಮಂತರಿಗೆ ತೆರಿಗೆ ಕಡಿತಗಳನ್ನು ವಿಸ್ತರಿಸುವುದು; ಅಮೆರಿಕದ ಮಿಲಿಟರಿ ಯಂತ್ರದ ಬೃಹತ್ ವಿಸ್ತರಣೆಗೆ ಹಣಕಾಸು ಒದಗಿಸಲು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತಗೊಳಿಸುವ ಅವರ ವ್ಯಾಪಕ ಯೋಜನೆಯ ವಿರುದ್ಧದ ಎಲ್ಲಾ ವಿರೋಧಗಳನ್ನು ಹತ್ತಿಕ್ಕಲು ಟ್ರಂಪ್ ಪ್ರಯತ್ನಿಸುತ್ತಿದ್ದಾರೆ.

ಸಾಮಾನ್ಯ ಜನರು ವಿದೇಶಿ ಶತ್ರುಗಳು!

1798ರ ‘ಏಲಿಯನ್ ಎನಿಮೀಸ್ ಆಕ್ಟ್’ ಅನ್ನು ಸಾಮೂಹಿಕ ಬಂಧನ ಮತ್ತು ಗಡೀಪಾರು ಕಾರ್ಯಕ್ರಮಗಳಿಗಾಗಿ ಬಳಸುವುದಾಗಿ ಟ್ರಂಪ್ ಘೋಷಿಸಿದರು. ಯುದ್ಧ ಮತ್ತು ಬಡತನದಿಂದ ಪಲಾಯನ ಮಾಡುತ್ತಿದ್ದ ಲಕ್ಷಾಂತರ ವಲಸಿಗರನ್ನು ಅವರು ‘ಆಕ್ರಮಣಕಾರಿ ಸೈನ್ಯ’ ಎಂದು ಬಿಂಬಿಸಿದರು. ಈ ಕಾನೂನನ್ನು ಕೊನೆಯ ಬಾರಿಗೆ ಎರಡನೇ ಮಹಾಯುದ್ಧದ ಸಮಯದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಾಸಿಸುತ್ತಿದ್ದ ಜರ್ಮನ್, ಇಟಾಲಿಯನ್ ಮತ್ತು ಜಪಾನೀಸ್ ವಲಸಿಗರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಳ್ಳಲು ಬಳಸಲಾಯಿತು. ಆ ಕಾನೂನಿನ ಪ್ರಕಾರ, ಬೆದರಿಕೆಯ ಮಟ್ಟವನ್ನು ಆಧರಿಸಿ ಈ ವ್ಯಕ್ತಿಗಳನ್ನು ನೋಂದಾಯಿಸಲಾಗಿದೆ, ನಿಗಾ ವಹಿಸಲಾಗಿದೆ, ಮೇಲ್ವಿಚಾರಣೆ ಮಾಡಲಾಗಿದೆ, ವರ್ಗಾವಣೆ ಮಾಡಲಾಗಿದೆ ಅಥವಾ ಅವರನ್ನು ಜೈಲಿಗೆ ಹಾಕಲಾಗಿದೆ. ವಲಸೆ ಸಮುದಾಯಗಳಿಗೆ ಬೆದರಿಕೆ ಹಾಕುವುದು, ಕಾರ್ಮಿಕ ವರ್ಗವನ್ನು ವಿಭಜಿಸುವುದು ಮತ್ತು ಮತ್ತಷ್ಟು ದಬ್ಬಾಳಿಕೆಗೆ ವಾತಾವರಣವನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿದೆ.

ದೇವ ದೂತನ “manifest destiny”

ಕಳೆದ ಬೇಸಿಗೆಯಲ್ಲಿ ನಡೆದ ಹತ್ಯೆ ಪ್ರಯತ್ನದಿಂದ ಬದುಕುಳಿದಿರುವುದು – "ಅಮೆರಿಕವನ್ನು ಮತ್ತೆ ಶ್ರೇಷ್ಠಗೊಳಿಸಲು ದೇವರು ನನ್ನನ್ನು ರಕ್ಷಿಸಿದನು" ಎಂದು ಅವರು ಅದನ್ನು ದೇವದೂತರ ರೀತಿಯಲ್ಲಿ ವಿವರಿಸಿದರು. ಅಧಿಕಾರ ಪದಗ್ರಹಣದ ಸಮಾರಂಭವು ಟ್ರಂಪ್ ಅವರನ್ನು ದೇವರು ಆರಿಸಿಕೊಂಡ ಕ್ರಿಶ್ಚಿಯನ್ ರಾಷ್ಟ್ರೀಯವಾದಿ ಎಂದು ಚಿತ್ರಿಸುವ ಧಾರ್ಮಿಕ ಮತ್ತು ಮಿಲಿಟರಿ ಪದಗಳು ಮತ್ತು ಸಂಕೇತಗಳಿಂದ ತುಂಬಿತ್ತು.

ಮಂಗಳ ಗ್ರಹಕ್ಕೆ ಮೊದಲ ಗಗನಯಾತ್ರಿಗಳನ್ನು ಕಳುಹಿಸುವುದು ಮತ್ತು ಇನ್ನೊಂದು ಗ್ರಹದಲ್ಲಿ ಅಮೆರಿಕದ ಧ್ವಜವನ್ನು ನೆಡುವುದು ಅಮೆರಿಕದ “manifest destiny” ಎಂದು ಟ್ರಂಪ್ ಘೋಷಿಸಿದರು. ಪ್ರಪಂಚದಾದ್ಯಂತದ ಸರ್ಕಾರಗಳು, ವಿಶೇಷವಾಗಿ ಲ್ಯಾಟಿನ್ ಅಮೆರಿಕ ಮತ್ತು ಕೆನಡಾದಲ್ಲಿ, ಈ ಭಾಷೆಯನ್ನು ಗಮನಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

"ಮ್ಯಾನಿಫೆಸ್ಟ್ ಡೆಸ್ಟಿನಿ" ಎಂಬ ಘೋಷಣೆಯು, ದುರ್ಬಲ ನೆರೆಹೊರೆಯವರ ವೆಚ್ಚದಲ್ಲಿ ವಿಸ್ತರಿಸಲು ಯುನೈಟೆಡ್ ಸ್ಟೇಟ್ಸ್‌ಗೆ ದೇವರು ನೀಡಿದ ಹಕ್ಕನ್ನು ಸೂಚಿಸುತ್ತದೆ, ಇದನ್ನು ಮೊದಲು 1844ರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷವು ಮುಂದಿಟ್ಟಿತು, ನಂತರ ದಕ್ಷಿಣದ ಗುಲಾಮರ ಮಾಲೀಕರ ಪ್ರಾಬಲ್ಯದಲ್ಲಿತ್ತು. ಪೆಸಿಫಿಕ್ ವಾಯುವ್ಯದಲ್ಲಿ ಕೆನಡಾದೊಂದಿಗಿನ ಗಡಿ ವಿವಾದದ ಬಗ್ಗೆ ಆಕ್ರಮಣಕಾರಿ ಯುಎಸ್ ನಿಲುವಿಗೆ "ಮ್ಯಾನಿಫೆಸ್ಟ್ ಡೆಸ್ಟಿನಿ" ಸಮರ್ಥನೆಯಾಗಿತ್ತು, ನಂತರ 1845ರಲ್ಲಿ ಟೆಕ್ಸಾಸ್ ಅನ್ನು ಗುಲಾಮ ರಾಜ್ಯವಾಗಿ ಸ್ವಾಧೀನಪಡಿಸಿಕೊಂಡಿತು ಮತ್ತು ಅಂತಿಮವಾಗಿ 1846–1848ರ ಯುದ್ಧದಲ್ಲಿ ಯುಎಸ್ ಮೆಕ್ಸಿಕೊದ ಅರ್ಧಭಾಗವನ್ನು ವಶಪಡಿಸಿಕೊಂಡು ಸ್ವಾಧೀನಪಡಿಸಿಕೊಂಡಿತು. ಅಬ್ರಹಾಂ ಲಿಂಕನ್ ಆ ಘೋಷಣೆಯನ್ನು ವಿಸ್ತರಣಾವಾದಿ ಗುಲಾಮರ ಶಕ್ತಿಯ ಯುದ್ಧ ಕೂಗು ಎಂದು ನಿರಾಕರಿಸಿದರು. ಟ್ರಂಪ್ ಇದನ್ನು ಬಂಡವಾಳಶಾಹಿ ಒಲಿಗಾರ್ಕಿಯ ಯುದ್ಧ ಕೂಗು ಎಂದು ಸ್ವೀಕರಿಸುತ್ತಾರೆ.

ಅಹಂಕಾರದ ಪರಮಾವಧಿ

ಫ್ಯೂರರ್ ಟ್ರಂಪ್ ಅವರ ಉದ್ಘಾಟನಾ ಭಾಷಣದ ಸ್ವಯಂ ವೈಭವೀಕರಣದ ಪಾತ್ರವು ನಿಸ್ಸಂದೇಹವಾಗಿತ್ತು. ಅವರು ತಮ್ಮನ್ನು ನಿರ್ದೇಶನ ಶಕ್ತಿಯಾಗಿ ರೂಪಿಸಿಕೊಂಡರು, ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಘೋಷಣೆಗಳ ಸೋಗಿನಲ್ಲಿ ಏಕಪಕ್ಷೀಯವಾಗಿ ಜಾರಿಗೆ ತರಬೇಕಾದ ವ್ಯಾಪಕ ಕ್ರಮಗಳನ್ನು ಘೋಷಿಸಿದರು. ರೂಸ್‌ವೆಲ್ಟ್‌ರ "100 ದಿನಗಳು" ಗಿಂತ ಭಿನ್ನವಾಗಿ, ಹೊಸ ಒಪ್ಪಂದವಾಗಿ ಕಾನೂನಾಗಿ ಜಾರಿಗೆ ತರಲಾದ ಶಾಸನಕ್ಕಾಗಿ ಕಾಂಗ್ರೆಸ್‌ಗೆ ಪ್ರಸ್ತಾವನೆಗಳನ್ನು ಒಳಗೊಂಡಿತ್ತು, ಟ್ರಂಪ್ ತಮ್ಮದೇ ಆದ ಅಧಿಕಾರದ ಮೇಲೆ ಹೊರಡಿಸಲಾದ "100 ಆದೇಶಗಳಿಗೆ" ಕರೆ ನೀಡಿದರು. ಅವರ ಭಾಷಣವು ಕಾಂಗ್ರೆಸ್ ಅಥವಾ ರಿಪಬ್ಲಿಕನ್ ಪಕ್ಷವನ್ನು ಉಲ್ಲೇಖಿಸಲಿಲ್ಲ, ಬದಲಿಗೆ ಅವರ ವಿಶಿಷ್ಟ ಪಾತ್ರವನ್ನು ಒತ್ತಿ ಹೇಳಿದರು.

ದೊಡ್ಡ ಸಂಘರ್ಷ ಪ್ರಾರಂಭವಾಗುತ್ತದೆ

ಆದರೆ ರಾಷ್ಟ್ರೀಯತಾವಾದಿ ಬಡಾಯಿ ಕೊಚ್ಚಿಕೊಳ್ಳುವಿಕೆ, ಡೆಮೋಕ್ರಾಟ್‌ಗಳ ಹೇಡಿತನ ಮತ್ತು ಜಟಿಲತೆಯ ಹೊರತಾಗಿಯೂ, ಟ್ರಂಪ್ ಅವರ ಭಾಷಣವು ಅಮೆರಿಕನ್ ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಅತಿಯಾಗಿ ಅಂದಾಜು ಮಾಡಿದೆ ಮತ್ತು ಟ್ರಂಪ್ ಮತ್ತು ರಿಪಬ್ಲಿಕನ್ನರ ಫ್ಯಾಸಿಸ್ಟ್ ಕಾರ್ಯಕ್ರಮವು ಯುನೈಟೆಡ್ ಸ್ಟೇಟ್ಸ್ ಒಳಗೆ ಮತ್ತು ಜಾಗತಿಕ ಮಟ್ಟದಲ್ಲಿ ಪ್ರಚೋದಿಸುವ ಪ್ರತಿರೋಧವನ್ನು ಕಡಿಮೆ ಅಂದಾಜು ಮಾಡಿದೆ.

ಟ್ರಂಪ್ ವಿಲಿಯಂ ಮೆಕಿನ್ಲಿಯನ್ನು ಮೆಚ್ಚಬಹುದು. ಆದರೆ, 1897 ರಿಂದ 1901 ರವರೆಗೆ, ಸಾಮ್ರಾಜ್ಯಶಾಹಿ ಯುಗದ ಆರಂಭದಲ್ಲಿ, ಅಮೆರಿಕ ವಿಶ್ವ ಶಕ್ತಿಯಾಗಿ ಏರುತ್ತಿದ್ದ ಸಮಯದಲ್ಲಿ ಮೆಕಿನ್ಲೆ ಅಧ್ಯಕ್ಷರಾಗಿದ್ದರು. ಟ್ರಂಪ್ ಅವರ ಇಂದಿನ ಅಧ್ಯಕ್ಷ ಪದವಿಯು, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ➚

ಹಿಂಬಾಗಿಲಿನಿಂದ ದ್ವೇಷಿತ ಕೃಷಿ ಕಾನೂನುಗಳ ಕಳ್ಳ ಸಾಗಾಟ

ಕಾರ್ಪೊರೇಟ್ ಕಂಪನಿಗಳ ಲಾಭವನ್ನು ಗರಿಷ್ಠಗೊಳಿಸಲು ರೈತರ ಹಿತಾಸಕ್ತಿ ಬಲಿಕೊಡಲು ಕೇಂದ್ರ ಸರ್ಕಾರ ಮುಂದಾಗಿದೆ. ಎಪಿಎಂಸಿ ಗಳನ್ನು ದುರ್ಬಲಗೊಳಿಸಿ ಸಣ್ಣ–ಮಧ್ಯಮ ರೈತರನ್ನು ವಾಣಿಜ್ಯದ ಜಾಲದ ಶೋಷಣೆಗೆ ತುತ್ತಾಗಿಸುವುದು ಕಂಡು ಕಾನೂನಿನ ಉದ್ದೇಶ, ಅದರ ವಿಶ್ಲೇಷಣೆ ಇಲ್ಲಿ.

ಪ್ರಕಾಶ್ ಕಾರತ್

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಇತ್ತೀಚೆಗೆ ಹೊರಡಿಸಿರುವ 'ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ನೀತಿ ಚೌಕಟ್ಟು' ಕರಡು, ಆರ್‌ಎಸ್‌ಎಸ್–ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಕುತ್ಸಿತ ಉದ್ದೇಶಗಳನ್ನು ಬಹಿರಂಗಪಡಿಸಿದೆ. ಅದು ರೈತರ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್ ಕಂಪನಿಗಳ ಲಾಭವನ್ನು ಗರಿಷ್ಠಗೊಳಿಸುವ ಒಂದು ಹುನ್ನಾರವಾಗಿದೆ.

ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕಾನೂನುಬದ್ಧಗೊಳಿಸುವುದು, ಕೃಷಿ ಕ್ಷೇತ್ರದಲ್ಲಿ ಸರಕಾರಿ ಹೂಡಿಕೆಯನ್ನು ಹೆಚ್ಚಿಸುವುದು, ರೈತ–ಪರ ಸಾಲ ಸೌಲಭ್ಯಗಳ ಜಾರಿ ಮುಂತಾಗಿ, ಹೋರಾಟ ನಡೆಸುತ್ತಿರುವ ರೈತರ ಗಂಭೀರ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರಕಾರ ಯಾವುದೇ ಕ್ರಮಕೈಗೊಂಡಿಲ್ಲ ಎನ್ನುವುದನ್ನು ಈ ಕರಡು ಬಹಿರಂಗಗೊಳಿಸಿದೆ. ಕೃಷಿ ಮಾರುಕಟ್ಟೆಯು ಸಂವಿಧಾನದ 246ನೇ ಆರ್ಟಿಕಲ್ ಅನ್ವಯ ರಾಜ್ಯದ ವಿಷಯ ಎಂದು ಬಾಯುಪಚಾರಕ್ಕೆ ಈ ಕರಡು ಹೇಳುತ್ತಿದೆಯಾದರೂ ಒಕ್ಕೂಟ ತತ್ವ ಮತ್ತು ರಾಜ್ಯ ಸರಕಾರಗಳ ಅಧಿಕಾರಗಳ ಮೇಲೆ ದಾಳಿ ಮಾಡುವುದು, ರಾಜ್ಯ–ಬೆಂಬಲಿತ ಮಾರುಕಟ್ಟೆ ಮೂಲಸೌಕರ್ಯವನ್ನು ತೆಗೆದು ಹಾಕುವುದು ಮತ್ತು ಎಪಿಎಂಸಿಗಳ ಪಾತ್ರವನ್ನು ದುರ್ಬಲಗೊಳಿಸಿ ಸಣ್ಣ ಹಾಗೂ ಮಧ್ಯಮ ರೈತರನ್ನು ಖಾಸಗಿ ವಾಣಿಜ್ಯ ಜಾಲದ ಶೋಷಣೆಗೆ ತುತ್ತಾಗುವಂತೆ ಮಾಡುವುದು ವಾಸ್ತವವಾಗಿ ಈ ಕರಡಿನ ಉದ್ದೇಶವಾಗಿದೆ.

ಖಾಸಗಿ ಸಗಟು ಮಾರುಕಟ್ಟೆಗಳ ಸ್ಥಾಪನೆ, ಕಾರ್ಪೊರೇಟ್ ಸಂಸ್ಕರಣೆದಾರರು ಮತ್ತು ರಫ್ತುದಾರರು ನೇರವಾಗಿ ಹೊಲಗಳಲ್ಲೇ ಖರೀದಿಸುವುದು, ಸಾಂಪ್ರದಾಯಿಕ ಮಾರ್ಕೆಟ್ ಯಾರ್ಡ್‌ಗಳ ಸ್ಥಾನದಲ್ಲಿ ಕಾರ್ಪೊರೇಟ್ ನಿಯಂತ್ರಿತ ಗೋದಾಮುಗಳ ಸ್ಥಾಪನೆ, ಮತ್ತು ಏಕೀಕೃತ ರಾಜ್ಯವ್ಯಾಪಿ ಮಾರುಕಟ್ಟೆ ಶುಲ್ಕ ಮತ್ತು ವಾಣಿಜ್ಯ ಲೈಸೆನ್ಸ್ ವ್ಯವಸ್ಥೆಯನ್ನು ಪರಿಚಯಿಸುವುದು ಇವೇ ಮೊದಲಾದವು ಕರಡಿನಲ್ಲಿ ಸಲಹೆ ಮಾಡಲಾಗಿರುವ ಪ್ರಮುಖ ಸುಧಾರಣೆಗಳಾಗಿವೆ. ಬೃಹತ್ ಕಾರ್ಪೊರೇಟ್ ಕಂಪನಿಗಳು ಎಪಿಎಂಸಿ ಯಾರ್ಡ್‌ಗಳನ್ನು ಧಿಕ್ಕರಿಸಿ ರೈತರಿಂದ ನೇರವಾಗಿ ಉತ್ಪನ್ನಗಳನ್ನು ಖರೀದಿಸುವ ಪ್ರಸ್ತಾಪನೆ ಈ ಕರಡಿನಲ್ಲಿದೆ. ರಿಲಯನ್ಸ್ ಮತ್ತು ಅದಾನಿಯಂಥ ದೊಡ್ಡ ಉದ್ಯಮ ಸಮೂಹಗಳು ಹರ್ಯಾಣದ ಸಿರ್ಸಾ ಮತ್ತು ಪಂಜಾಬ್‌ನ ಲೂಧಿಯಾನಾದಲ್ಲಿ ವ್ಯಾಪಕವಾದ ಗೋದಾಮು ಮೂಲಸೌಕರ್ಯ ಹಾಗೂ ಖಾಸಗಿ ರೈಲ್ವೆ ಜಾಲವನ್ನು ನಿರ್ಮಿಸಿವೆ.

ಲಾಭಬಡುಕರ ಹುನ್ನಾರ

ಕಾರ್ಪೊರೇಟ್ ಲಾಬಿ ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಎಂಎಸ್‌ಪಿಗೆ ಬದ್ಧ ವಿರೋಧಿಯಾಗಿವೆ. ಅತ್ಯಂತ ಕಡಿಮೆ ದರಕ್ಕೆ ಕೃಷಿ ಉತ್ಪನ್ನಗಳನ್ನು ಖರೀದಿಸಿ ಮೌಲ್ಯವರ್ಧನೆ ಮಾಡಿ ಬ್ರ್ಯಾಂಡ್‌ಗೊಳಿಸಿ ಅತಿ ಹೆಚ್ಚು ಲಾಭಕ್ಕೆ ಮಾರಾಟ ಮಾಡುವುದು ಅವುಗಳ ತಂತ್ರವಾಗಿರುವುದರಿಂದ ಎಂಎಸ್‌ಪಿಯನ್ನು ವಿರೋಧಿಸುತ್ತವೆ. ಈ ರೀತಿಯಾಗಿ ದೊಡ್ಡ ಉದ್ಯಮ ಸಂಸ್ಥೆಗಳು ರೈತರನ್ನು ಮಾತ್ರವಲ್ಲದೆ ಗ್ರಾಹಕರನ್ನು ಕೂಡ ಶೋಷಿಸುತ್ತವೆ. ಮಾರುಕಟ್ಟೆ ದಕ್ಷತೆಯ ಹೆಸರಿನಲ್ಲಿ ಕೇಂದ್ರ ಸರಕಾರವು ಕೃಷಿಯ ಕಾರ್ಪೊರೇಟ್ ಲೂಟಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುತ್ತಿದೆ.

ಪ್ರಾಥಮಿಕ ಉತ್ಪಾದಕರಿಂದ ಅಂದರೆ ರೈತರಿಂದ ಹೆಚ್ಚುವರಿಯಾಗಿ ಪಡೆದಿದ್ದರಲ್ಲಿ ನಿರ್ದಿಷ್ಟ ಶೇಕಡಾವಾರನ್ನು ಕಚ್ಚಾ ಸಾಮಗ್ರಿಗೆ ನ್ಯಾಯಯುತ ಬೆಲೆ ಎಂದು ಅವುಗಳನ್ನು ಪೂರೈಸುವ ರೈತರಿಗೆ ಕಾರ್ಪೊರೇಟ್ ಕೈಗಾರಿಕೆಗಳು ಮತ್ತು ವರ್ತಕರು ಹಂಚುವುದಕ್ಕೆ ಸಂಬಂಧಿಸಿ ಕರಡಿನಲ್ಲಿ ಯಾವುದೇ ನಿಯಮವನ್ನು ನಮೂದಿಸಿಲ್ಲ. ಈ ರೀತಿಯಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು ರೈತರ ಹಿತಗಳನ್ನು ಕಾರ್ಪೊರೇಟ್ ಹಿತಗಳಿಗೆ ಶರಣಾಗಿಸುತ್ತಿದೆ. ರೈತರ ಆತ್ಮಹತ್ಯೆ ಮತ್ತು ಸಾಲಗಳನ್ನು ಶಾಶ್ವತಗೊಳಿಸುತ್ತಿದೆ. ರೈತಾಪಿ ಸಮುದಾಯ ದಿವಾಳಿಯಾಗಲು ನೆರವಾಗುತ್ತಿದೆ.

ಸ್ವಯಂ–ವಿರೋಧಾಭಾಸ

ಸ್ವಯಂ–ವಿರೋಧಾಭಾಸ ಎನ್ನುವಂತೆ, ಎಪಿಎಂಸಿ ಕಾನೂನು ವಾಪಸ್ ಪಡೆದ ನಂತರ ಬಿಹಾರ ಮಂಡಿಗಳ ದಯನೀಯ ಪರಿಸ್ಥಿತಿಯನ್ನು ಈ ಕರಡು ದಾಖಲೀಕರಿಸಿದೆ ಎನ್ನುವುದು ಇಲ್ಲಿ ಮಹತ್ವದ್ದಾಗಿದೆ. ದೆಹಲಿ ರೈತರ ಲೆಜೆಂಡರಿ ಹೋರಾಟವು ಉತ್ತುಂಗದಲ್ಲಿದ್ದಾಗ, ಎಪಿಎಂಸಿ ಕಾನೂನನ್ನು ಬಿಹಾರ ರದ್ದುಪಡಿಸಿದ್ದು ಕೃಷಿ ಮಾರುಕಟ್ಟೆಗಳನ್ನು ನಿಯಂತ್ರಣದಿಂದ ಹೊರ ತರುವುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ ಎಂಬ ಸಂಕಥನವನ್ನು ಆರೆಸ್ಸೆಸ್–ಬಿಜೆಪಿ ನಾಯಕರು ಮತ್ತು ಕೇಂದ್ರ ಸರಕಾರಕ್ಕೆ ಆಪ್ತವಾಗಿರುವ ಕಾರ್ಪೊರೇಟ್ ಹಿತಾಸಕ್ತರು ಹರಡಿದ್ದರು ಎನ್ನುವ ಕಾರಣಕ್ಕೆ ಇದು ಸ್ವಯಂ–ವಿರೋಧಾಭಾಸವಾಗಿದೆ.

ಕೃಷಿಯನ್ನು ಕಾರ್ಪೊರೇಟೀಕರಣಗೊಳಿಸಬೇಕೆಂಬುದು ಈ ಕರಡಿನ ಉದ್ದೇಶ ಎಂಬುದು ಸ್ಫಟಿಕದಷ್ಟೇ ಸ್ಪಷ್ಟವಾಗಿದೆ. ಕೃಷಿಯನ್ನು 'ಸುಧಾರಿಸಲು' ಉಳಿದಿರುವ ಮಾರ್ಗ ಇದೊಂದೇ ಎಂದು ಅದು ಬಿಂಬಿಸಿದೆ. ಉದಾಹರಣೆಗೆ, ಮೋದಿಯ ಮುದ್ದಿನ ಯೋಜನೆಯಾದ ಹೆಚ್ಚು ಪ್ರಚಾರದ ಎಫ್‌ಪಿಒ ಯೋಜನೆಯನ್ನು ಕಾರ್ಪೊರೇಟ್‌ಗಳು ಕೃಷಿ ವಲಯಕ್ಕೆ ಇನ್ನಷ್ಟು ಪ್ರವೇಶಿಸಲು ಇರುವ ಸಾಧನವೆಂದು ಕರಡು ಚಿತ್ರಿಸಿದೆ. ಕೃಷಿ ಕ್ಷೇತ್ರದಲ್ಲಿರುವ ವಾಣಿಜ್ಯ ಸಂಸ್ಥೆಗಳೊಂದಿಗೆ ಗುತ್ತಿಗೆ ಕೃಷಿ (ಕಾಂಟ್ರಾಕ್ಟ್ ಫಾರ್ಮಿಂಗ್) ಒಪ್ಪಂದ ಮಾಡಿಕೊಳ್ಳಲು ಕ್ಲಸ್ಟರ್ ಆಧಾರಿತ ಎಫ್‌ಪಿಒಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಮೂಲಕ ಇದನ್ನು ಮಾಡಲಾಗುತ್ತದೆ.

ಎಫ್‌ಪಿಒ ಯೋಜನೆಯ ಬೆಂಬಲಕ್ಕೆ ಸಿಐಐ ಮತ್ತು ಎಫ್‌ಐಸಿಸಿಐ (ಫಿಕ್ಕಿ) ಮುಂತಾದ ಕಾರ್ಪೊರೇಟ್ ಗುಂಪುಗಳು ಅತ್ಯಾಸಕ್ತಿ ತೋರಿಸಿದ್ದರ ನಿಜವಾದ ವರ್ಗ ಹಿತಾಸಕ್ತಿ ಈಗ ಅನಾವರಣಗೊಳ್ಳುತ್ತಿದೆ.

ಫ್ಯೂಚರ್ಸ್ ಮತ್ತು ಆಪ್ಶನ್ ಮಾರ್ಕೆಟ್‌ಗಳ ಮೂಲಕ ಹಣಕಾಸೀಕರಣವನ್ನು ಆಳಗೊಳಿಸಲು ಮಾಡಿರುವ ಸಲಹೆಗಳು ಕೂಡ ದೊಡ್ಡ ಉದ್ಯಮ ಸಮೂಹಗಳ ಹಿಡಿತಕ್ಕೆ ಸಾಕ್ಷಿಯಾಗಿದೆ. ದೇಶೀಯ ಆಹಾರ ಕೈಗಾರಿಕೆಯಲ್ಲಿ ಮೇಲುಗೈ ಸಾಧಿಸಲು ಹಾಗೂ ನಿಯಂತ್ರಿಸಲು ಎಂಎನ್‌ಸಿಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಕೂಡ ಅದು ಅನುಮತಿ ನೀಡುತ್ತದೆ. ಇದರಿಂದ ಭಾರತದ ಜನತೆಯ ಆಹಾರದ ಭದ್ರತೆ ಅಸ್ತವ್ಯಸ್ತಗೊಳ್ಳಲಿದೆ.

ತೀಕ್ಷ್ಣ ಪ್ರತಿರೋಧ

ಈ ಕರಡಿಗೆ ಬಲವಾದ ಪ್ರತಿರೋಧ ವ್ಯಕ್ತವಾಗಲು ಆರಂಭವಾಗಿದೆ. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) 2024 ಡಿಸೆಂಬರ್ 23ರಂದು ದೇಶದಾದ್ಯಂತ ಹತ್ತಾರು ಸಾವಿರ ರೈತರ ಪ್ರತಿಭಟನೆಗಳನ್ನು ಆಯೋಜಿಸಿ ಕರಡಿನ ಪ್ರತಿಗಳನ್ನು ಸುಟ್ಟಿದೆ. ಇದೇ ಜನವರಿ 26ರಂದು ಟ್ರ್ಯಾಕ್ಟರ್/ವಾಹನ ರ್‍ಯಾಲಿಗಳನ್ನು ನಡೆಸಿದೆ. ಹರ್ಯಾಣದ ತೊಹಾನಾ ಮತ್ತು ಪಂಜಾಬ್‌ನ ಮೋಗಾದಲ್ಲಿ ಡಿಸೆಂಬರ್‌ನಲ್ಲಿ ಆಯೋಜಿಸಿದ್ದ ಎರಡು ಬೃಹತ್ ಕಿಸಾನ್ ಪಂಚಾಯತ್‌ಗಳಲ್ಲಿ 75,000ಕ್ಕೂ ಅಧಿಕ ಅನ್ನದಾತರು ಭಾಗವಹಿಸಿದ್ದರು. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಎಸ್‌ಕೆಎಂ ರಾಷ್ಟ್ರೀಯ ಸಭೆಗಳು ಹೋರಾಟವನ್ನು ತೀವ್ರಗೊಳಿಸಲು ಸಂಕಲ್ಪ ತೊಟ್ಟಿವೆ. ಭಾರತೀಯ ಕೃಷಿಯ ಹಿತವನ್ನು ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಹರಿವಾಣದಲ್ಲಿಟ್ಟು ಶರಣಾಗಿಸಲು ಬಿಜೆಪಿ–ಆರೆಸ್ಸೆಸ್ ಸರಕಾರ ನಡೆಸುತ್ತಿರುವ ಪ್ರಯತ್ನಗಳನ್ನು ಎಲ್ಲ ವಿಭಾಗಗಳ ಜನರು ಪ್ರಬಲವಾಗಿ ಪ್ರತಿರೋಧಿಸಬೇಕಿದೆ.

ಅನು: ವಿಶ್ವ

ಬಂಡವಾಳಶಾಹಿಯು ಅಂತ್ಯಗೊಂಡಿರುವ ಸಮಯದಲ್ಲಿ ಬಂದಿದೆ. ಟ್ರಂಪ್ ಅವರ ದೃಷ್ಟಿಕೋನವು ಒಂದು ಭ್ರಮೆ. ಆದರೆ ಅದು ಕಡಿಮೆ ಅಪಾಯಕಾರಿ ಅಲ್ಲ. ಇತರ ಬಂಡವಾಳಶಾಹಿ ಸರ್ಕಾರಗಳಿಂದ ಅನಿವಾರ್ಯ ವಿರೋಧದ ಹೊರತಾಗಿಯೂ, ವಿಶೇಷವಾಗಿ ದೇಶ ಮತ್ತು ವಿದೇಶಗಳಲ್ಲಿ ಲಕ್ಷಾಂತರ ಕಾರ್ಮಿಕರು ಮತ್ತು ಜನರ ವಿರೋಧದಿಂದಾಗಿ, ಅವರದೇ ಸರ್ಕಾರಗಳು ಕ್ರೂರ ಮತ್ತು ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಈ ಅಪಾಯಗಳ ಬಗ್ಗೆ ಪ್ರಜಾಪ್ರಭುತ್ವವಾದಿಗಳಿಗೆ ಚೆನ್ನಾಗಿ ತಿಳಿದಿದೆ.

ರಾಜೀನಾಮೆ ನೀಡುವ ಮೊದಲು ತಮ್ಮ ಕೊನೆಯ ಕ್ಷಣಗಳಲ್ಲಿ, ಅಧ್ಯಕ್ಷ ಬಿಡೆನ್ ಅವರು ತಮ್ಮ ಕುಟುಂಬದ ಸದಸ್ಯರು, ನಿವೃತ್ತ ಜನರಲ್ ಮಾರ್ಕ್ ಮಿಲ್ಲಿ, ಮಾಜಿ ಸಾರ್ವಜನಿಕ ಆರೋಗ್ಯ ನಿರ್ದೇಶಕ ಡಾ. ಆಂಥೋನಿ ಫೌಸಿ ಮತ್ತು ಜನವರಿ 6, 2021 ರಂದು ಟ್ರಂಪ್ ಅವರ ದಂಗೆ ಪ್ರಯತ್ನವನ್ನು ಮೇಲ್ವಿಚಾರಣೆ ಮಾಡಿದ ಸದನದ ಸದಸ್ಯರು ಮತ್ತು ಸಿಬ್ಬಂದಿಯನ್ನು ಕ್ಷಮೆ ಕೇಳಿದರು. ಟ್ರಂಪ್ ಆಡಳಿತವು ತಮ್ಮ ರಾಜಕೀಯ ವಿರೋಧಿಗಳ ವಿರುದ್ಧ ಪ್ರತೀಕಾರದ ಮೊಕದ್ದಮೆಗಳನ್ನು ಹೂಡುತ್ತದೆ ಎಂಬ ಭಯವನ್ನು ಅವರು ವ್ಯಕ್ತಪಡಿಸಿದರು.

ಟ್ರಂಪ್ ಅವರ ಕೋಪದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಬಗ್ಗೆ ಡೆಮೋಕ್ರಾಟ್‌ಗಳು ಚಿಂತಿತರಾಗಿದ್ದಾರೆ. ಆದರೆ ದಾಳಿಗೆ ಒಳಗಾದ ಲಕ್ಷಾಂತರ ವಲಸಿಗರು ಮತ್ತು ಕಾರ್ಮಿಕ ವರ್ಗದ ಜನರನ್ನು ರಕ್ಷಿಸಲು ಅವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇನ್ನು ಮುಂದೆಯೂ ತೆಗೆದುಕೊಳ್ಳಲಾರರು. ವಿಶ್ವದ ಹಣದ ಹಸಿವಿನಿಂದ ಬಳಲುತ್ತಿರುವ ಅತಿ ಶ್ರೀಮಂತರ ಪ್ರತಿನಿಧಿಯಾಗಿ ಟ್ರಂಪ್ ಶ್ವೇತಭವನವನ್ನು ಪ್ರವೇಶಿಸುತ್ತಾರೆ, ಇದು ನಿಜವಾದ ಸಾಮಾಜಿಕ ನೆಲೆಗೆ ನೇರ ವಿರುದ್ಧವಾಗಿದೆ. ಉದ್ಘಾಟನಾ ಸಮಾರಂಭವನ್ನು, ಕ್ಯಾಪಿಟಲ್ ಕಟ್ಟಡದ ಹೊರಗೆ ಸಾರ್ವಜನಿಕರ ಸಮ್ಮುಖದಲ್ಲಿ ನಡೆಸದೆ, ಕ್ಯಾಪಿಟಲ್ ರೊಟುಂಡಾ ಒಳಗೆ ನಡೆಸಲಾಗಿದೆ ಎಂಬ ಅಂಶವು ಅಮೇರಿಕನ್ ಆಡಳಿತ ವರ್ಗದ ನಿಜವಾದ ಪ್ರತ್ಯೇಕತೆಯನ್ನು ತೋರಿಸುತ್ತದೆ. ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾರದೆ ಎಲೋನ್ ಮಸ್ಕ್ ಎರಡು ಕಾಡು ಹಿಟ್ಲರ್ ಸೆಲ್ಯೂಟ್ ಮಾಡಿದರು. ಆದರೆ ದುಡಿಯುವ ವರ್ಗ ಶ್ರೀಮಂತರ ಸರ್ವಾಧಿಕಾರದ ಹಿತಾಸಕ್ತಿಯನ್ನು ಒಪ್ಪಿಕೊಳ್ಳುವುದಿಲ್ಲ. ಜನವರಿ 20, 2025 ಅಮೆರಿಕದ ಇತಿಹಾಸದಲ್ಲಿ ಹಿಂದೆಂದೂ ಕಂಡಿಲ್ಲದ ವರ್ಗ ಸಂಘರ್ಷದ ಅವಧಿಯ ಆರಂಭವನ್ನು ಸೂಚಿಸುತ್ತದೆ.

(ಲೇಖಕರಾದ Patrick Martin, David North ಅವರು World Socialist Web Site ನಲ್ಲಿ ಬರೆದ ಲೇಖನ)

ಕನ್ನಡಕ್ಕೆ: ಸಿ.ಸಿದ್ದಯ್ಯ

ಬ್ಯಾಂಕುಗಳ ಉಗಮ, ಸಾಲಗಳು........ ಪುಟ 2 ರಿಂದ

ಒಳನಾಡಿನ ವ್ಯಾಪಾರದಲ್ಲಿ ತೊಡಗಿದ್ದವರು. ಹಲವು ಕೆಳಹಂತದ ಪಾಳೆಯಗಾರರ ಜೊತೆಯಲ್ಲಿ ರಾಜ, ರಾಣಿಯರೂ ಸೇರಿದ್ದರು. ಕೆಲ ಕುಶಲ ಕರ್ಮಿಗಳೂ ಶೇರುದಾರರಾಗಿದ್ದರು.

ಬ್ಯಾಂಕುಗಳ ಸ್ಥಾಪನೆಯಾದ ಮೇಲೆ ಸರ್ಕಾರಗಳು ಬ್ಯಾಂಕುಗಳಿಂದ ಸಾಲ ಪಡೆಯತೊಡಗಿದರು. ಕಾಗದದ ಹಣ ಚಲಾವಣೆಗೆ ಬಂದು ರಾಷ್ಟ್ರೀಯ ಅಥವಾ ಕೇಂದ್ರ ಬ್ಯಾಂಕ್‌ಗಳನ್ನು ಅಂಗೀಕರಿಸಿದ ಮೇಲೆ ರಾಷ್ಟ್ರ ಬ್ಯಾಂಕ್‌ಗಳಿಂದ ರಾಷ್ಟ್ರೀಯ ಸಾಲಗಳನ್ನು ಪಡೆಯತೊಡಗಿದರು.

ಇಂತಹ ಪ್ರಕ್ರಿಯೆಯಲ್ಲಿ ಕಾಗದ ರೂಪದ ಹಣವಾದ ನೋಟುಗಳ ಮುದ್ರಣ ಸರ್ಕಾರಗಳು ತಮ್ಮ ಅಗತ್ಯಗಳಿಗೆ ತಕ್ಕಂತೆ ಮುದ್ರಣ ಮಾಡುವ ಪ್ರಸಂಗಗಳು ಬರಲಾರಂಭಿಸಿದವು. ಚಿನ್ನದ ಆಧಾರ ಎಂಬ ಸೂತ್ರವನ್ನು ಹಲವು ಬಾರಿ ಕೈಬಿಟ್ಟ ಪ್ರಸಂಗಗಳು ಉಂಟಾಗಿವೆ. ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಸಂಪತ್ತಿನ ಅಡಿಪಾಯವಿಲ್ಲದೆ ಮುದ್ರಣ ಮಾಡುವ ಕಾಗದದ ಹಣ ಹಣದುಬ್ಬರಕ್ಕೆ, ಬೆಲೆ ಏರಿಕೆಗೆ ಕಾರಣವಾಗತೊಡಗಿತು.

ಅಂತರ ರಾಷ್ಟ್ರೀಯ ಸಾಲಗಳು:

ರಾಷ್ಟ್ರೀಯ ಸಾಲಗಳೊಂದಿಗೆ ಅಂತರರಾಷ್ಟ್ರೀಯ ಸಾಲ ವ್ಯವಸ್ಥೆಯೂ ಆರಂಭವಾಯಿತು. ಆದಿಮ ಬಂಡವಾಳ ಸಂಗ್ರಹಣೆಯ ಮೂಲಗಳನ್ನು ಜನರಿಂದ ಮುಚ್ಚಿಡಲು ಈ ಸಾಲಗಳು ನೆರವಾದವು ಎಂದು ಮಾರ್ಕ್ಸ್ ವಿವರಿಸಿದ್ದಾರೆ. ಬಂಡವಾಳಶಾಹಿ ಬೆಳೆಯಲಾರಂಭಿಸಿ ನಂತರ ಇಳಿಮುಖಗೊಂಡ ದೇಶಗಳಿಂದ ಅಲ್ಲಿಯ ಬಂಡವಾಳ ಬಂಡವಾಳಶಾಹಿ ವೇಗವಾಗಿ ಬೆಳೆಯುತ್ತಿದ್ದ ದೇಶಗಳಿಗೆ ಆ ದೇಶಗಳ ರಾಷ್ಟ್ರೀಯ ಸಾಲವಾಗಿ ಹರಿಯಿತು. ವೆನಿಸ್‌ನಿಂದ ಅನೀತಿಯುತ ಮಾರ್ಗಗಳಿಂದ ಕದಿಯಲ್ಪಟ್ಟ ದೊಡ್ಡ ಪ್ರಮಾಣದಲ್ಲಿ ಹಾಲಂಡ್ ಗೆ ಹರಿಯಿತು. ಅದೇ ರೀತಿ 18ನೆಯ ಶತಮಾನದಲ್ಲಿ ಹಾಲಂಡಿನ ಕೈಗಾರಿಕಾ ಉತ್ಪಾದನೆ ಹಿಂದೆ ಬಿದ್ದು, ಅದು ವಾಣಿಜ್ಯ, ಕೈಗಾರಿಕಾ ಉತ್ಪಾದನೆಯಲ್ಲಿ ಪ್ರಧಾನ ಸ್ಥಾನ ಕಳೆದುಕೊಂಡಿತು. ಆಗ 1701 ರಿಂದ 1707 ರವರೆಗೆ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹಾಲಂಡ್ನ ಮುಖ್ಯ ಪ್ರತಿಸ್ಪರ್ಧಿಯಾಗಿದ್ದ ಇಂಗ್ಲೆಂಡ್ಗೆ ಹರಿಯಿತು. ಈಗ ಇಂಗ್ಲೆಂಡಿನ ಮಕ್ಕಳ ರಕ್ತದಿಂದ ಬಸಿದ ಬಂಡವಾಳ ಅಮೇರಿಕದತ್ತ ಹರಿಯುತ್ತಿದೆ ಎಂದು ಮಾರ್ಕ್ಸ್ ವಿವರಿಸಿದ್ದಾರೆ.

ಈ ರಾಷ್ಟ್ರೀಯ ಸಾಲಗಳನ್ನು ತೀರಿಸುವವರು ಯಾರು ಮತ್ತು ಹೇಗೆ?

ಮೈಕ್ರೋ ಫೈನಾನ್ಸ್ ವ್ಯವಸ್ಥೆಯ ಕರಾಳಮುಖ: ಗ್ರಾಮೀಣ ಕರ್ನಾಟಕದ ಸಂಕಟ

ಭೀಮನಗೌಡ ಸುಂಕೇಶ್ವರಹಾಳ
ವಕೀಲರು, ಬೆಂಗಳೂರು

ಆರ್ಥಿಕವಾಗಿ ಹಿಂದುಳಿದವರು ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಿಗೆ ನೆರವು ನೀಡಲು ಮೈಕ್ರೋ ಫೈನಾನ್ಸ್ (ಕಿರು ಸಾಲಗಳು) ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಯಾವುದೇ ಒಂದು ಗ್ರಾಮೀಣ ಕುಟುಂಬದ ಒಟ್ಟು ವಾರ್ಷಿಕ ಆದಾಯ ಗರಿಷ್ಟ 1,25,000 ರೂ. ಹಾಗೂ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿನ ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ರೂಗಳಿಗೆ ಮೀರಿರಬಾರದು ಎಂಬ ನಿಯಮವಿದೆ.

ಭಾರತದ ಪ್ರಮುಖ ಖಾಸಗಿ ಬ್ಯಾಂಕುಗಳನ್ನು 1969 ಇಸ್ವಿಯಲ್ಲಿ ರಾಷ್ಟ್ರೀಕರಣ ಗೊಳಿಸಲಾಯಿತು. 1976ರಲ್ಲಿ ಗ್ರಾಮೀಣ ಬ್ಯಾಂಕ್ ಅಧಿನಿಯಮ ಅಂಗೀಕರಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಬಲಪಡಿಸಲು ಮತ್ತು ವಿಸ್ತರಿಸಲು ಸಹಕಾರಿಯಾಯಿತಾದರೂ, ನಂತರದಲ್ಲಿ 1990ರಲ್ಲಿ ತಂದಂತಹ ಉದಾರೀಕರಣ ನೀತಿಗಳು ಖಾಸಗಿ ಮೈಕ್ರೋ ಫೈನಾನ್ಸ್ ಕಂಪನಿಗಳು ಗ್ರಾಮೀಣ ಪ್ರದೇಶಕ್ಕೆ ಲಗ್ಗೆ ಇಡಲು ಕಾರಣವಾಯಿತು.

ಅತಿ ಹೆಚ್ಚು ಬಡ್ಡಿ

ಸಾಮಾನ್ಯವಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳು ಸಾರ್ವಜನಿಕ ಹಾಗೂ ಖಾಸಗಿ ಬ್ಯಾಂಕುಗಳಿಂದ ಸಾಲಗಳನ್ನು ಪಡೆದು, ಅವರು ಪಡೆದ ಬಡ್ಡಿಯ ಸಾಲದ ಬಡ್ಡಿ ದರಕ್ಕಿಂತ ಪ್ರತಿಶತ 10ರಿಂದ 15ರಷ್ಟು ಹೆಚ್ಚುವರಿ ಬಡ್ಡಿಯನ್ನು ವಿಧಿಸಿ ಮೈಕ್ರೋ ಫೈನಾನ್ಸಿಂಗ್ ಮೂಲಕ ಗ್ರಾಮೀಣ ಭಾಗದ ಜನರಿಗೆ ಸಾಲವನ್ನು ಒದಗಿಸುತ್ತಿದ್ದವು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಕಿರು ಸಾಲಗಳನ್ನು ನೀಡುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳಲು, ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಅನುಕೂಲವಾಗಲಿ ಎನ್ನುವ ಕಾರಣಕ್ಕೆ ಹುಟ್ಟಿಕೊಂಡಿದ್ದಾದರೂ, ವಾಸ್ತವದಲ್ಲಿ ಈ ಸಾಲಗಳು ಅತಿ ಹೆಚ್ಚು ಬಡ್ಡಿಯನ್ನು ಹೊಂದಿಸಿ ಮತ್ತು ಕಠಿಣ ನಿರ್ಬಂಧನೆಗಳನ್ನು ಹೇರಿ ಮರುಪಾವತಿ ಪಡೆಯುತ್ತಿದ್ದಾರೆ.

ಚೆಕ್‌ಗಳನ್ನು ಬೌನ್ಸ್ ಮಾಡಿ ಕೇಸು ದಾಖಲಿಸುತ್ತಿವೆ

ಅಡಮಾನವಿಡಲು ಯಾವುದೇ ದಾಖಲೆಗಳು ಇಲ್ಲವೆನ್ನುವ ಕಾರಣಕ್ಕೆ ರಾಷ್ಟ್ರೀಯ ಬ್ಯಾಂಕುಗಳು ಸಾಲ ನೀಡುವುದಿಲ್ಲ ಎಂಬ ಕಾರಣಕ್ಕೆ ಮೈಕ್ರೋ ಫೈನಾನ್ಸ್ ನಂತಹ ಕಂಪನಿಗಳು ಬಂದಿವೆಯಾದರೂ, ಈ ಮೈಕ್ರೋ ಫೈನಾನ್ಸ್ ಕಂಪನಿಗಳು ಗ್ರಾಹಕರ ಅನಿವಾರ್ಯತೆಯನ್ನು ಆಯುಧವಾಗಿ ಮಾಡಿಕೊಂಡಿವೆ. ಗ್ರಾಹಕರಿಂದ ಖಾಲಿ ಚೆಕ್ಕುಗಳಲ್ಲಿ ಸಹಿ ಪಡೆದು ಅವುಗಳನ್ನು ತಮ್ಮಲ್ಲಿ ಇಟ್ಟುಕೊಳ್ಳುತ್ತಿವೆ. ಸಾಲ ಮರುಪಾವತಿ ವಿಳಂಬವಾದಲ್ಲಿ ಚೆಕ್‌ಗಳನ್ನು ಬೌನ್ಸ್ ಮಾಡಿ, ಬೆಂಗಳೂರಿನಲ್ಲಿ ಕೇಸು ದಾಖಲಿಸಿ, ಅವರನ್ನು ಪೊಲೀಸರ ಸಹಾಯದಿಂದ ಬಂಧಿಸಿ ಜೈಲಿಗೆ ಹಾಕುತ್ತಿದ್ದಾರೆ. ಜೈಲಿಗೆ ಹೋದ ಗ್ರಾಹಕರು ಶ್ಯೂರಿಟಿ ನೀಡಿ ಹೊರಬರಲು ಯಾವುದೇ ಆಸ್ತಿ ಇಲ್ಲದೆ 10–13 ದಿನಗಳು ಜೈಲಿನಲ್ಲಿದ್ದು, ಕೊನೆಗೆ ಜೈಲಾಧಿಕಾರಿಗಳು ನೀಡುವ ಬಾಂಡ್‌ಗಳಿಗೆ ಸಹಿ ಹಾಕಿ ಹೊರಬಂದು, ಅವರು ವಾಸಿಸುವ ದೂರದ ಹಳ್ಳಿಗಳಿಂದ ಬೆಂಗಳೂರಿನ ಕೋರ್ಟ್‌ಗಳಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗುತ್ತಿದೆ.

ಆಂಧ್ರ ಪ್ರದೇಶದಲ್ಲಿ 'ಮಳೆಗಾಂ ಸಮಿತಿ' ಶಿಫಾರಸ್ಸುಗಳು

ಇತ್ತೀಚಿನ ದಿನಗಳಲ್ಲಿ ಸುದ್ದಿಯಾಗುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳ ಕ್ರೌರ್ಯದಿಂದ ನಿರಂತರವಾಗಿ ನಡೆಯುತ್ತಿರುವ ಆತ್ಮಹತ್ಯೆಗಳಂತ ಪ್ರಕರಣಗಳು ಕರ್ನಾಟಕ ರಾಜ್ಯದಲ್ಲಿ ಹೊಸದಿರಬಹುದು. ಆದರೆ ಇಂತಹ ಘಟನೆಗಳು ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಂಭವಿಸಿವೆ. ಮೈಕ್ರೋ ಫೈನಾನ್ಸಿಂಗ್ ಕಂಪನಿಗಳ ಒತ್ತಡ ಹಾಗೂ ಬಲವಂತದ ವಸೂಲಿ ಕ್ರಮಗಳಿಂದ ಹಿಂದೆ ಆಂಧ್ರಪ್ರದೇಶದಲ್ಲಿ ನಿರಂತರವಾಗಿ ಆತ್ಮಹತ್ಯೆಗಳು ನಡೆದಾಗ, ಆರ್‌ಬಿಐ ಕೂಡಲೇ ಮಧ್ಯಪ್ರವೇಶಿಸಿ ಮೈಕ್ರೋ ಫೈನಾನ್ಸ್ ಕಂಪನಿಗಳ ಬಗ್ಗೆ ಅಧ್ಯಯನ ಮಾಡಲು ಹಾಗೂ ಜನರ ಮೇಲೆ ವಿಧಿಸುವ ಬಡ್ಡಿದರ ಹಾಗೂ ಅದರ ಕಾರ್ಯವೈಖರಿಯ ಬಗ್ಗೆ ಅಧ್ಯಯನ ಮಾಡಲೆಂದು 2010ರಲ್ಲಿ ವೈ.ಹೆಚ್. ಮಳೆಗಾಂ ಅವರ ಅಧ್ಯಕ್ಷತೆಯಲ್ಲಿ 'ಮಳೆಗಾಂ ಸಮಿತಿ' ಯನ್ನು ರಚನೆಮಾಡಿತು.

ಈ ಸಮಿತಿಯು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡಿ, ಮೈಕ್ರೋ ಫೈನಾನ್ಸ್ ಸಂಸ್ಥೆಗಳು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನಿಯಂತ್ರಣಕ್ಕೆ ಒಳಪಡಬೇಕು, ಗ್ರಾಹಕರ ಮೇಲೆ ಅತಿಯಾದ ಬಡ್ಡಿದರ ಹೇರಕೂಡದು, ಒಬ್ಬ ವ್ಯಕ್ತಿಗೆ ಹಲವಾರು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲವನ್ನು ನೀಡಕೂಡದು, ಒಂದು ಕುಟುಂಬಕ್ಕೆ ಏಕಕಾಲದಲ್ಲಿ ಗರಿಷ್ಠ 50 ಸಾವಿರ ರೂಪಾಯಿಗೆ ಸಾಲವನ್ನು ಮಿತಿಗೊಳಿಸಬೇಕು, ಸಾಲದ ವಸೂಲಾತಿ ಸಮಯದಲ್ಲಿ ಬೆದರಿಕೆಗಳನ್ನು ಹಾಕಕೂಡದು, ಅವಾಚ್ಯ ಶಬ್ದಗಳಿಂದ ನಿಂದಿಸಬಾರದು ಹಾಗೂ ಗ್ರಾಹಕರಿಗೆ ಪಾರದರ್ಶಕ ಮತ್ತು ಗೌರವಯುತ ವಹಿವಾಟು ಮಾಡಲು ಕ್ರಮ ಕೈಗೊಳ್ಳಬೇಕು, ಸಾಲವನ್ನು ಪಡೆಯುವ ಗ್ರಾಹಕರಿಗೆ ಹಣಕಾಸಿನ ಶಿಸ್ತಿನ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ ವ್ಯವಹಾರದಲ್ಲಿ



ಪಾರದರ್ಶಕತೆಯನ್ನು ಪ್ರದರ್ಶಿಸಬೇಕು, ಸಾಲ ನೀಡುವ ಉದ್ದೇಶವೂ ಅವರ ಸ್ವಾವಲಂಬನೆಯ ಬದುಕಿಗೆ ಸಹಕಾರಿಯಾಗುವಂತೆ ಇರಬೇಕು ಎಂಬಿತ್ಯಾದಿ ಶಿಫಾರಸ್ಸುಗಳನ್ನು ಮಾಡಿತು.

ಸಡಿಲಗೊಂಡ ಆರ್‌ಬಿಐ ನಿಯಮಗಳು

'ಮಳೆಗಾಂ ಸಮಿತಿಯ ಈ ಶಿಫಾರಸ್ಸುಗಳನ್ನು ಆರ್‌ಬಿಐ ಆರಂಭದಲ್ಲಿ ಅನುಸರಿಸಿತ್ತಾದರೂ, 2022ರಲ್ಲಿ ಆರ್‌ಬಿಐ ಮೇಲೆ ಒತ್ತಡಗಳನ್ನು ತಂದು ಈ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ನಿಯಮಗಳ ಸಡಲಿಕೆಗಳಿಂದ ಮೈಕ್ರೋ ಫೈನಾನ್ಸಿಂಗ್ ಕಂಪನಿಗಳು ಗ್ರಾಮೀಣ ಭಾರತದಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತುತ್ತಿವೆ. ಹಾಗೆಯೇ 70–80 ಪ್ರತಿಶತದಷ್ಟು ಬಡ್ಡಿಯನ್ನು ವಿಧಿಸಿ ಜನರಿಗೆ ಮದುವೆ, ಗೃಹಪ್ರವೇಶದಂತಹ ಕಾರ್ಯಕ್ರಮಗಳಿಗೂ ಸಾಲ ಪಡೆದುಕೊಳ್ಳುವಂತೆ ಆಕರ್ಷಿಸುತ್ತಿವೆ.

ಹಾಗೆಯೇ 2022ಕ್ಕಿಂತ ಮುಂಚಿತವಾಗಿ ಮೈಕ್ರೋ ಫೈನಾನ್ಸ್ ಕಂಪನಿಯನ್ನು ಆರಂಭಿಸಲು ಎರಡು ಕೋಟಿ ಬಂಡವಾಳ ಅವಶ್ಯಕತೆಯಾಗಿತ್ತು. ಈಗ ಅದು 5 ಕೋಟಿಗೆ ಏರಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಬಂಡವಾಳದ ಪ್ರಮಾಣ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ವರ್ಷದಿಂದ ವರ್ಷಕ್ಕೆ ಮೈಕ್ರೋ ಫೈನಾನ್ಸ್ ಕಂಪನಿಗಳು ದೊಡ್ಡ ದೊಡ್ಡ ಬಂಡವಾಳದಾರರ ಹಿಡಿತದಲ್ಲಿ ಸಿಲುಕುತ್ತಿವೆ.

ನಿಯಮ ಉಲ್ಲಂಘಿಸಿ ವಸೂಲಿ ಏಜೆಂಟ್ ಗಳ ನೇಮಕ

ಸಾಲ ವಸೂಲಿಗೆ ಸಂಬಂಧಿಸಿದಂತೆ ಮಳೆಗಾಂ ಸಮಿತಿ ಹಾಗೂ ಆರ್‌ಬಿಐನ ಹೊಸ ನಿಯಮಗಳ ಪ್ರಕಾರ ಗ್ರಾಹಕರ ಮೇಲೆ ಯಾವುದೇ ರೀತಿಯ ಬೆದರಿಕೆ ಹುಟ್ಟುಹಾಕುವ, ಮಾನಸಿಕ ಹಿಂಸೆ ನೀಡುವ ಮೂಲಕ ಬಲವಂತ ಮಾಡದೆ ಸಾಲ ವಸೂಲಿ ಪ್ರಕ್ರಿಯೆ ನಡೆಸಬೇಕು. ಬೆಳಗ್ಗೆ 8 ಗಂಟೆ ನಂತರ ಮತ್ತು ಸಂಜೆ 7 ಗಂಟೆಯ ಮುಂಚೆ ಗ್ರಾಹಕರನ್ನು ಸಂಪರ್ಕಿಸಬೇಕು, ಗ್ರಾಹಕರ ಗೌರವವನ್ನು ಕಾಪಾಡಬೇಕು ಹಾಗೂ ಗ್ರಾಹಕರ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಬೇಕು. ಗ್ರಾಹಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅವಹೇಳನ, ಅಪಮಾನ ಮಾಡದೇ ಸಾಲ ವಸೂಲಿ ಪ್ರಕ್ರಿಯೆಯು ಮಾನವೀಯ ಮೌಲ್ಯಗಳಿಂದ ಕೂಡಿರಬೇಕು ಎಂಬಂತಹ ಹಲವಾರು ನಿಯಮಗಳಿದ್ದರೂ, ಅವೆಲ್ಲವುಗಳನ್ನು ಗಾಳಿಗೆ ತೂರಿ ಮೈಕ್ರೋ ಫೈನಾನ್ಸ್ ಕಂಪನಿಗಳು ಸಾಲ ವಸೂಲಿ ಮಾಡಲು ಹೊರಗುತ್ತಿಗೆ ನೀಡಿ, ವಸೂಲಿ ಏಜೆಂಟ್‌ಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಆ ಏಜೆಂಟರು ಗ್ರಾಮೀಣ ಭಾಗದ ಮಹಿಳೆಯರನ್ನು ಅಮಾನವೀಯವಾಗಿ ನಡೆಸಿಕೊಂಡು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಅವರ ಮೇಲೆ ದೈಹಿಕ ಹಾಗೂ ಮಾನಸಿಕ ದೌರ್ಜನ್ಯ ಎಸಗಿರುವ ಎಷ್ಟೋ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಹಾಗೆಯೇ ರಾಮನಗರ ಜಿಲ್ಲೆಯಲ್ಲಿ, ಚಾಮರಾಜನಗರದಲ್ಲಿ, ಚಿತ್ರದುರ್ಗದ ತಿಪಟೂರಿನ ಮಹಿಳೆಯರ ಆತ್ಮಹತ್ಯೆ, ರಾಯಚೂರಿನಲ್ಲಿ ರೈತನ ಆತ್ಮಹತ್ಯೆ ಇವುಗಳು ರಾಜ್ಯದಾದ್ಯಂತ ಸುದ್ದಿಯಾಗಿವೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಜನರು ಬೇಸತ್ತು ಅವಮಾನಕ್ಕೆ ಅಂಜಿ ಊರುಗಳನ್ನು ತೊರೆಯುತ್ತಿದ್ದಾರೆ.

ಸ್ಥಳೀಯ ಪೊಲೀಸ್ ಠಾಣೆಗಳಿಂದ ಅನುಮತಿ ಪಡೆಯಬೇಕು

ಮೈಕ್ರೋ ಫೈನಾನ್ಸ್‌ಗಳಿಂದ ಹೊರಗುತ್ತಿಗೆ ಪಡೆದ ಸಾಲ ವಸೂಲಾತಿ ಏಜೆಂಟ್‌ಗಳು ತಮ್ಮ ಕಾರ್ಯಾಚರಣೆಯನ್ನು ಮಾಡುವ ಮುಂಚೆ ಕಡ್ಡಾಯವಾಗಿ ಸ್ಥಳೀಯ ಪೊಲೀಸ್ ಠಾಣೆಗಳಿಂದ ಅನುಮತಿ ಪಡೆಯಬೇಕು. ವಸೂಲಿ ಮಾಡುವ ಏಜೆಂಟರು ತಮ್ಮ ವೈಯಕ್ತಿಕ ಮಾಹಿತಿಯನ್ನು ಪೊಲೀಸ್ ಠಾಣೆಗಳಿಗೆ ನೀಡಿ, ತಮಗೆ ಯಾವುದೇ ಅಪರಾಧ ಹಿನ್ನೆಲೆ ಇಲ್ಲವೆಂದು ಖಚಿತಪಡಿಸಿಕೊಳ್ಳಬೇಕು ಹಾಗೂ ಪೊಲೀಸ್ ಠಾಣೆಗಳಿಂದ ಅನುಮತಿ ಪತ್ರ ಪಡೆದ ನಂತರವೇ ಗ್ರಾಹಕರ ಮನೆಗೆ ಅಥವಾ ಸ್ಥಳಗಳಿಗೆ ಭೇಟಿ ನೀಡಬೇಕು. ಆದರೆ ಏಜೆಂಟರು ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮನಸ್ಸೋ ಇಚ್ಛೆ ವರ್ತಿಸುತ್ತಿದ್ದಾರೆ.

ಮಹಿಳಾ ಗ್ರಾಹಕರು ತಮ್ಮ ಮೇಲಾಗುತ್ತಿರುವ ಹಿಂಸೆ ಹಾಗೂ ದೌರ್ಜನ್ಯಗಳನ್ನು ಸ್ಥಳೀಯ ಪೊಲೀಸ್ ಠಾಣೆಗೆ ತಿಳಿಸಿದರೂ ಎಷ್ಟೋ ಪೊಲೀಸರು ಫೈನಾನ್ಸ್ ಸಂಸ್ಥೆಗಳ ಏಜೆಂಟರ ಬೆಂಬಲಿಗರಂತೆ ವರ್ತಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಸಾಲ ತೀರಿಸಲು ಮತ್ತೊಂದು ಸಾಲ

ಗ್ರಾಹಕರು ಒಂದು ಮೈಕ್ರೋ ಫೈನಾನ್ಸ್ ಕಂಪನಿಯ ಸಾಲ ತೀರಿಸಲು ದಿನವೆಲ್ಲ ದುಡಿದರೂ ಬಡ್ಡಿ ಕಟ್ಟಲು ಸಾಕಾಗದೇ ಇರುವಾಗ, ಆ ಸಾಲ ತೀರಿಸಲು ಮತ್ತೊಂದು ಮೈಕ್ರೋ ಫೈನಾನ್ಸ್ ಕಂಪನಿಗಳು ನೀಡುವ ಸಾಲಗಳಿಗೆ ಮುಖ ಮಾಡುತ್ತಿದ್ದಾರೆ. ಯಾವುದೇ ಕಂಪನಿಗಳು ಸಾಲ ನೀಡುವ ಸಂದರ್ಭದಲ್ಲಿ 8 ರಿಂದ 10 ಜನ ಮಹಿಳೆಯರ ಗುಂಪುಗಳನ್ನು ಮಾಡಿ, ಆ ಗುಂಪಿನ ಯಾವುದೇ ಸದಸ್ಯರಿಗೆ ಸಾಲ ಕೊಡಬೇಕಾದರೂ ಇಡೀ ಗುಂಪಿನ ಒಪ್ಪಿಗೆಯನ್ನು ಪಡೆಯುತ್ತವೆ. ಆ ಗುಂಪಿನ ಯಾರಾದರೂ ಮಹಿಳೆ ಸಾಲ ವಾಪಸ್ಸಾತಿ ಮಾಡದೇ ಇದ್ದರೆ, ಆ ಸಾಲದ ಒಟ್ಟು ಹಣವನ್ನು ಆ ಗುಂಪಿನ ಪ್ರತಿ ಸದಸ್ಯರು ನೀಡಬೇಕೆಂದು ಮುಂಚಿತವಾಗಿ ಒಪ್ಪಿಗೆ ಪಡೆದಿರುತ್ತವೆ. ಹಾಗೆಯೇ ತೆಗೆದುಕೊಂಡ ಸಾಲವನ್ನು ವಾಪಸ್ಸು ನೀಡದ ಮಹಿಳೆಯರ ಮನೆ ಬಾಗಿಲಿಗೆ ನೋಟೀಸ್‌ಗಳನ್ನು ಹಾಕುವುದು, ಎಲ್ಲರ ಮುಂದೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸುವುದು, ವೇಶ್ಯಾವಾಟಿಕೆಗೆ ಪ್ರಚೋದಿಸುವುದು ಸರ್ವೇಸಾಮಾನ್ಯ ಎನಿಸಿದೆ. ಇವೆಲ್ಲವುಗಳಿಂದ ಬೇಸತ್ತು ಅವಮಾನ ತಾಳಲಾರದೆ ಮನೆಯ ಹಸು ಕರುಗಳನ್ನು, ಪಾತ್ರೆಗಳು, ಮಾಂಗಲ್ಯವನ್ನು ಮಾರಿಕೊಳ್ಳುವ ಹಾಗೂ ಊರುಗಳನ್ನು ಬಿಡುವ ಸ್ಥಿತಿಗೆ ಬಂದಿದ್ದಾರೆ.

ಪೊಲೀಸರ ಬಳಿ ದೂರು ದಾಖಲಿಸಲು ಹಕ್ಕು

ಯಾವುದೇ ಮೈಕ್ರೋ ಫೈನಾನ್ಸಿಂಗ್ ಸಂಸ್ಥೆಗಳು ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸಿದಾಗ, ಹಿಂಸಾತ್ಮಕ ವಸೂಲಿ ಮತ್ತು ಬೆದರಿಕೆ ಪ್ರಕರಣವನ್ನು ಪೊಲೀಸರ ಬಳಿ ದೂರು ದಾಖಲಿಸಲು ಗ್ರಾಹಕರು ಹಕ್ಕು ಹೊಂದಿರುತ್ತಾರೆ. ಪೊಲೀಸರು ಭಾರತೀಯ ನ್ಯಾಯ ಸಂಹಿತೆ ಕಲಂ 308(1) ಬಲಾದ್ಗ್ರಹಣ, ಕಲಂ 351(1) ಅಪರಾಧಿಕ ಭಯೋತ್ಪಾದನೆ, ಕಲಂ 316 ಅಪರಾಧಿಕ ನಂಬಿಕೆ ದ್ರೋಹ, ಕಲಂ 120(1) & 120(2) ಬಲವಂತ ಮಾಡಿ ತಪ್ಪೊಪ್ಪಿಗೆಯನ್ನು ಪಡೆಯಲು ಅಥವಾ ಸ್ವತ್ತನ್ನು ಹಿಂದಕ್ಕೆ ಕೊಡುವಂತೆ ಒತ್ತಾಯಿಸಲು ಗಾಯವನ್ನು

ಪುಟ 10 ಕ್ಕೆ

ಆರ್‌ಬಿಐ ನಿಯಮಗಳ ಸಡಿಲಿಕೆಯಿಂದ ಮೈಕ್ರೋ ಫೈನಾನ್ಸಿಂಗ್ ಕಂಪನಿಗಳು ಗ್ರಾಮೀಣ ಭಾರತದಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತುತ್ತಿವೆ. ಸಾಲದ ಮೇಲೆ 70–80 ಪ್ರತಿಶತದಷ್ಟು ಬಡ್ಡಿ ವಿಧಿಸುತ್ತಿವೆ. ಸಾಲ ವಸೂಲಿ ಮಾಡಲು ಹೊರಗುತ್ತಿಗೆ ನೀಡಿ, ವಸೂಲಿ ಏಜೆಂಟ್‌ಗಳ ಮೂಲಕ ದೈಹಿಕ ಹಾಗೂ ಮಾನಸಿಕ ದೌರ್ಜನ್ಯ ಎಸಗಿರುವ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಇದರ ವಿರುದ್ಧ ಪೊಲೀಸರ ಬಳಿ ದೂರು ದಾಖಲಿಸಲು ಗ್ರಾಹಕರು ಹಕ್ಕು ಹೊಂದಿರುತ್ತಾರೆ. ಇಂತಹ ಅಪರಾಧಗಳಿಗೆ 5 ವರ್ಷಗಳವರೆಗೆ ಶಿಕ್ಷೆ ಅಥವಾ ದಂಡ ವಿಧಿಸಬಹುದಾಗಿದೆ. ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗೆ ಸ್ವ ಸಹಾಯ ಸಂಘಗಳ ಮೂಲಕ ಅತಿ ಕಡಿಮೆ ಬಡ್ಡಿ ದರದಲ್ಲಿ ಪರ್ಯಾಯ ಅರ್ಥಿಕ ಸೌಲಭ್ಯಗಳನ್ನು ಒದಗಿಸಿ ಸ್ತ್ರೀ ಸಬಲೀಕರಣಕ್ಕೆ ಮುಂದಾಗಬೇಕೆ ವಿನಃ ಖಾಸಗಿ ಬಂಡವಾಳಗಾರರ ಪರ ನಿಲ್ಲಬಾರದು.

ಕೇಂದ್ರ ಬಜೆಟ್ 2025–26: ಭಾರತೀಯ ಜನತೆಗೆ ಕ್ರೂರ ವಿಶ್ವಾಸದ್ರೋಹ

–ವಿಫಲ ಆರ್ಥಿಕ ನೀತಿಯ ಇತ್ತೀಚಿನ ಕಂತು–ಸಿಪಿಐ(ಎಂ) ಪೊಲಿಟ್‌ಬ್ಯೂರೊ ಕಟು ಟೀಕೆ

2025–26ರ ಕೇಂದ್ರ ಬಜೆಟ್ ಭಾರತದ ಜನರ ಅವಶ್ಯಕತೆಗಳಿಗೆ ಮಾಡಿದ ಕ್ರೂರ ವಿಶ್ವಾಸ ದ್ರೋಹವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ತೀವ್ರವಾಗಿ ಖಂಡಿಸಿದೆ. ಇದು ಶ್ರೀಮಂತರಿಂದ ಶ್ರೀಮಂತರಿಗಾಗಿ ಇರುವ ಬಜೆಟ್ ಆಗಿದೆ. ಒಕ್ಕೂಟ ತತ್ವವನ್ನು ದುರ್ಬಲಗೊಳಿಸುವ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ದಾಳ ನಡೆಸುವ ನಿಲುವನ್ನು ಇದು ಬಿಂಬಿಸುತ್ತದೆ. ಮೋದಿ ಸರ್ಕಾರದ ದಿವಾಳಿತನವನ್ನು ಬಿಂಬಿಸುವ ಈ ಬಜೆಟ್ ದೇಶದ ಅರ್ಥವ್ಯವಸ್ಥೆಯನ್ನು ನಿಭಾಯಿಸುವಲ್ಲಿ ಅದು ಹೀನಾಯವಾಗಿ ವಿಫಲವಾಗಿರುವ ಅದರ ನೀತಿಯ ಇತ್ತೀಚಿನ ಕಂತು ಎಂದು ಕಟುವಾಗಿ ಟೀಕಿಸಿದೆ. ಅದರ ವಿಶ್ಲೇಷಣೆ ಇಲ್ಲಿದೆ.

ಅರ್ಥವ್ಯವಸ್ಥೆಯ ಹಲವು ವಲಯಗಳು ಎದುರಿಸುತ್ತಿರುವ ಬೇಡಿಕೆಯ ಸಮಸ್ಯೆಯ ಮೂಲ ಕಾರಣವನ್ನು, ಸಾಮೂಹಿಕ ನಿರುದ್ಯೋಗ ಮತ್ತು ಕುಗ್ಗುತ್ತಿರುವ ಸಂಬಳಗಳಿಂದಾಗಿ ದೊಡ್ಡಸಂಖ್ಯೆಯ ಜನವಿಭಾಗಗಳ ಕೈಯಲ್ಲಿ ಖರೀದಿ ಶಕ್ತಿಯ ಕೊರತೆಯಿರುವುದನ್ನು ಪರಿಹರಿಸುವ ಬದಲು, ಮೋದಿ ಸರ್ಕಾರವು ಬಜೆಟ್ ಮೂಲಕ ಒಂದೆಡೆಯಲ್ಲಿ ವೆಚ್ಚಗಳನ್ನು ಕಡಿತಗೊಳಿಸುತ್ತಲೇ, ಆರ್ಥಿಕತೆಯನ್ನು ಉತ್ತೇಜಿಸಲೆಂದು ಹೆಚ್ಚಿನ ಆದಾಯ ಹೊಂದಿರುವ ಒಂದು ಸಣ್ಣ ವಿಭಾಗಕ್ಕೆ ತೆರಿಗೆ ಕಡಿತಗಳನ್ನು ಕೊಡಮಾಡಲು ಪ್ರಯತ್ನಿಸಿದೆ.

ಶ್ರೀಮಂತರಿಂದ ಶ್ರೀಮಂತರಿಗಾಗಿ ಬಜೆಟ್

ಆರ್ಥಿಕ ಸಮೀಕ್ಷೆ ಕಳೆದ ಐದು ವರ್ಷಗಳಲ್ಲಿ ಗಳಿಕೆಯಲ್ಲಿ ಇಳಿಕೆಯಾಗಿದೆ ಎಂದು ಎತ್ತಿ ತೋರಿಸುವ ಮೂಲಕ ಭಾರತದ ಶ್ರಮಿಕರ ಹತಾಶ ಸ್ಥಿತಿಯನ್ನು ತೋರಿಸುತ್ತಿರುವಾಗ, ಈ ಬಜೆಟ್ ಶ್ರೀಮಂತರಿಗೆ ರಿಯಾಯಿತಿಗಳನ್ನು ನೀಡುತ್ತಲೇ ಸರ್ಕಾರಿ ವೆಚ್ಚಗಳನ್ನು ಕಡಿತಗೊಳಿಸುವತ್ತ ಒತ್ತು ನೀಡಿ ಭಾರತದಲ್ಲಿನ ಬೃಹತ್ ಅಸಮಾನತೆಗಳನ್ನು ಮತ್ತಷ್ಟು ಉಲ್ಬಣಗೊಳಸುತ್ತದೆ. ಶ್ರೀಮಂತರು ಮತ್ತು ದೊಡ್ಡ ಕಾರ್ಪೊರೇಟ್ ಗಳ ಮೇಲೆ ತೆರಿಗೆ ವಿಧಿಸುವ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸುವ ಬದಲು, ಮತ್ತು ಉದ್ಯೋಗ ಸೃಷ್ಟಿಸಲು ಮತ್ತು ನಮ್ಮ ಜನರಿಗೆ ಕನಿಷ್ಠ ವೇತನವನ್ನು ಖಚಿತಪಡಿಸಲು ಸಹಾಯ ಮಾಡುವ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಬದಲು, ತದ್ವಿರುದ್ಧ ಕ್ರಮಗಳನ್ನೇ ಈ ಸರಕಾರ ಆರಿಸಿಕೊಂಡಿದೆ. ಖಾಸಗಿ ಹೂಡಿಕೆಯನ್ನು ಉತ್ತೇಜಿಸುವ ಮೂಲಕ, ಸಾರ್ವಜನಿಕ ಆಸ್ತಿಗಳು ಮತ್ತು ಸಾರ್ವಜನಿಕ ವೆಚ್ಚವನ್ನು ಕೂಡ ಖಾಸಗಿಯವರ ಸೇವೆಗೆ ಸಲ್ಲಿಸುವ ಮೂಲಕ ಶ್ರೀಮಂತರು ಇನ್ನಷ್ಟು ಹೆಚ್ಚಿನ ಸಂಪತ್ತು ಸಂಗ್ರಹಣೆಯನ್ನು ಮಾಡಲು ಈ ಬಜೆಟ್ ಅನುವು ಮಾಡಿಕೊಡುತ್ತಿದೆ. ಈ ಬಜೆಟ್‌ನಲ್ಲಿ ಸರ್ಕಾರವು ವಿಮಾ ವಲಯದಲ್ಲಿ 100 ಶೇ. ಎಫ್‌ಡಿಐ ಗೆ ಅವಕಾಶ ಮತ್ತು ವಿದ್ಯುತ್ ವಲಯದ ಖಾಸಗೀಕರಣವನ್ನು ಪ್ರಸ್ತಾಪಿಸುತ್ತದೆ. ಆದ್ದರಿಂದ ಇದು ಶ್ರೀಮಂತರಿಂದ ಶ್ರೀಮಂತರಿಗಾಗಿ ಬಜೆಟ್ ಆಗಿದೆ.

2020–21 ರಿಂದ ಪ್ರತಿ ವರ್ಷವೂ ನಡೆಯುತ್ತಿರುವಂತೆ, ಸರಕಾರ ಮಾಡುವ ವೆಚ್ಚಗಳ ಪ್ರಮಾಣ ಜಿಡಿಪಿಯ ಶೇಕಡಾವಾರಾಗಿ ಈ ಬಾರಿಯೂ ಕಡಿಮೆಯಾಗಲಿದೆ–2024–25 ರಲ್ಲಿ 14.6% ಇದ್ದದ್ದು 2025–26 ರಲ್ಲಿ 14.2% ಕ್ಕೆ ಇಳಿಯುತ್ತದೆ. ಸರಕಾರ ದೊಡ್ಡದಾಗಿ ಏನೇ ಹೇಳಿಕೊಂಡಿದ್ದರೂ, ಅದು ಕಳೆದ ವರ್ಷದಲ್ಲಿ ವಾಸ್ತವವಾಗಿ ಬಜೆಟ್ ಭರವಸೆ ನೀಡಿದ್ದಕ್ಕಿಂತ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಕಡಿಮೆ ಖರ್ಚು ಮಾಡಿದೆ ಎಂದು ಬಜೆಟ್ ಕಾಗದಗಳು ಬಹಿರಂಗಪಡಿಸುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸರಕಾರದ ಹಿಂದಿನ ದಾಖಲೆಯನ್ನು ನೋಡಿದರೆ, ಈ ಬಜೆಟಿನಲ್ಲಿ ಮಾಡಿರುವ ಅಸಮರ್ಪಕ ಹಂಚಿಕೆಗಳನ್ನು ಕೂಡ ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ, ಏಕೆಂದರೆ ಸರ್ಕಾರವು ಬಜೆಟಿನಲ್ಲಿ ತಾನು ಭರವಸೆ ನೀಡಿದ ಮೊತ್ತವನ್ನು ಕೂಡ ಖರ್ಚು ಮಾಡುವುದಿಲ್ಲ.

ಜನಸಾಮಾನ್ಯರಿಗೆ, ರಾಜ್ಯಗಳಿಗೆ ಕಡಿತಗಳ ಬಜೆಟ್

ಕಳೆದ ವರ್ಷದಲ್ಲಿ, ಕೇಂದ್ರ ಸರ್ಕಾರವು ರಾಜ್ಯಗಳಿಗೆ ವರ್ಗಾವಣೆಗಳಲ್ಲಿ ಬಜೆಟ್‌ನಲ್ಲಿ ನಿಗದಿಪಡಿಸಿದ ಅಂಕಿ ಅಂಶಗಳಿಗೆ ಹೋಲಿಸಿದರೆ 1,12,000 ಕೋಟಿ ರೂ. ಕಡಿತ ಮಾಡಿದೆ– ಕೇಂದ್ರ ಪ್ರಾಯೋಜಿತ ಸ್ಕೀಮುಗಳಿಗೆ 90,000 ಕೋಟಿ ರೂ.ಗಳಷ್ಟು ಮತ್ತು ಹಣಕಾಸು ಆಯೋಗ ಮತ್ತು ರಾಜ್ಯಗಳಿಗೆ ಇತರ ವರ್ಗಾವಣೆಗಳನ್ನು 22,000 ಕೋಟಿ ರೂ.ಗಳಷ್ಟು ಕಡಿಮೆ ಮಾಡಿದೆ. ಹೀಗಾಗಿ ಬಜೆಟ್ ಒಕ್ಕೂಟ ತತ್ವವನ್ನು ದುರ್ಬಲಗೊಳಿಸುವ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ದಾಳಿ ನಡೆಸುವ ನಿಲುವನ್ನು ಬಿಂಬಿಸುತ್ತದೆ.

2024–25 ರಲ್ಲಿನ ಕಡಿತಗಳು ಬಂಡವಾಳ ವೆಚ್ಚಗಳ ಮೇಲೂ ಪರಿಣಾಮ ಬೀರುತ್ತವೆ–ಬಜೆಟ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತ ಸುಮಾರು 93,000 ಕೋಟಿ ರೂ.ಗಳಷ್ಟು ಕಡಿಮೆ. ಆಹಾರ ಸಬ್ಸಿಡಿಗಳು, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಸಮಾಜ ಕಲ್ಯಾಣ, ನಗರಾಭಿವೃದ್ಧಿ–ಇವೆಲ್ಲವೂ ಈ ಕಡಿತವನ್ನು ಎದುರಿಸಿವೆ ಮತ್ತು 2025–26 ರ ಬಜೆಟ್ ಅಂಕಿ ಅಂಶಗಳು 2024–25 ರಂತೆಯೇ ಇವೆ. ಹಣದುಬ್ಬರವನ್ನು ಒಂದು ಅಂಶವಾಗಿ ಪರಿಗಣಿಸಿದರೆ ಮತ್ತು ಕಳೆದ ವರ್ಷಕ್ಕಿಂತ ಜಿಡಿಪಿ ಯ ಶೇಕಡಾವಾರು ಪ್ರಮಾಣದಲ್ಲಿ ಕಡಿಮೆಯಾಗುತ್ತದೆ ಎಂಬುದನ್ನು ಪರಿಗಣಿಸಿದರೆ, ಹಂಚಿಕೆಗಳು ವಾಸ್ತವವಾಗಿ ನಿಶ್ಚಲವಾಗಿವೆ, ಅದಕ್ಕೆ ಈ ಕೆಲವು ಉದಾಹರಣೆಗಳನ್ನು ಕೊಟ್ಟಿದೆ.

- ಕಳೆದ ಬಜೆಟ್‌ನಲ್ಲಿ ಆಹಾರಕ್ಕಾಗಿ ಹಂಚಿಕೆ ರೂ. 2.05 ಲಕ್ಷ ಕೋಟಿಗಳಷ್ಟಿತ್ತು ಆದರೆ ಕಳೆದ ವರ್ಷದ ವೆಚ್ಚದ ಪರಿಷ್ಕೃತ ಅಂದಾಜಿನಲ್ಲಿ 7830 ಕೋಟಿಗಳಷ್ಟು ಕಡಿಮೆಯಾಗಿದೆ, ಆದರೆ ಈ ಬಜೆಟ್‌ನಲ್ಲಿ ಪ್ರಸ್ತಾವಿತ ಅಂಕಿ ಅಂಶವು 2.03 ಲಕ್ಷ ಕೋಟಿಗಳಷ್ಟಿದೆ, ಅಂದರೆ ಕಳೆದ ವರ್ಷದ ಬಜೆಟ್ ನಲ್ಲಿ ಒದಗಿಸಿದ್ದಕ್ಕಿಂತ ಕಡಿಮೆಯಾಗಿದೆ.
- ಅದೇ ರೀತಿ ಶಿಕ್ಷಣದ ವಿಷಯದಲ್ಲಿ ಕಳೆದ ವರ್ಷದ ಬಜೆಟ್ ಹಂಚಿಕೆ ರೂ. 1.26 ಲಕ್ಷ ಕೋಟಿಗಳಷ್ಟಿತ್ತು. ಆದರೆ ಪರಿಷ್ಕೃತ ಅಂದಾಜು ರೂ.11584 ಕೋಟಿ ಕಡಿಮೆ ಖರ್ಚು ಮಾಡಲಾಗಿದೆ ಎಂದು ತೋರಿಸುತ್ತದೆ. ಆದರೆ ಈ ಬಜೆಟ್‌ನಲ್ಲಿ ಹಂಚಿಕೆ ಕಳೆದ ವರ್ಷದ ಬಜೆಟ್ ಅಂದಾಜುಗಳಿಗಿಂತ ಕೇವಲ ರೂ.14596 ಕೋಟಿ ಹೆಚ್ಚಾಗಿದೆ. ಇದು ನಾಮಿನಲ್ ಪರಿಭಾಷೆಯಲ್ಲಿ ಕೇವಲ 2.3 ಶೇ. ಹೆಚ್ಚಳವಾಗಿದೆ, ಆದರೆ ಹಣದುಬ್ಬರವನ್ನು ಪರಿಗಣಿಸಿದರೆ ನೈಜ ವಾಗಿ ಯಾವುದೇ ಹೆಚ್ಚಳವಿಲ್ಲ.



- ಆರೋಗ್ಯ ಹಂಚಿಕೆಗೆ ಸಂಬಂಧಿಸಿದಂತೆಯೂ ಪರಿಷ್ಕೃತ ಅಂದಾಜು ಕಳೆದ ವರ್ಷದ ಬಜೆಟ್ ಅಂದಾಜಿಗಿಂತ ಕಡಿಮೆಯಾಗಿದೆ.
- ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ಕಳೆದ ಬಜೆಟಿನ ಅಂದಾಜು ರೂ. 1.5 ಲಕ್ಷ ಕೋಟಿಗಳಷ್ಟಿತ್ತು ಮತ್ತು ಸರ್ಕಾರವು ಪರಿಷ್ಕೃತ ಅಂದಾಜಿನ ಪ್ರಕಾರ ರೂ.10992 ಕೋಟಿಗಳಷ್ಟು ಕಡಿಮೆ ಖರ್ಚು ಮಾಡಿದೆ.
- ಎಲ್ಪಿಜಿ ಸಬ್ಸಿಡಿಯನ್ನು ಕಳೆದ ವರ್ಷದ ಪರಿಷ್ಕೃತ ಅಂದಾಜಿನ ಪ್ರಕಾರ ರೂ.14.7 ಸಾವಿರ ಕೋಟಿಗಳಿಂದ ಈ ವರ್ಷದ ಬಜೆಟ್ನಲ್ಲಿ 12 ಸಾವಿರ ಕೋಟಿಗಳಿಗೆ ಇಳಿಸಲಾಗಿದೆ.

ಸರ್ಕಾರದ ಬೂಟಾಟಿಕೆಯ ಸಂಕೇತವಾಗಿ, ಗ್ರಾಮೀಣ ಬಡವರಿಗೆ ಜೀವನಾಡಿಯಾಗಿರುವ ಮತ್ತು ಅವರ ಹಕ್ಕಾಗಿರುವ 'ಮನರೇಗ' (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ) ಯೋಜನೆಗೆ ನಿಕೃಷ್ಟ ಹಂಚಿಕೆ ಕೊಡಲಾಗಿದೆ. ಬೇಡಿಕೆ ಹೆಚ್ಚಿದ್ದರೂ ಹಂಚಿಕೆ 86,000 ಕೋಟಿ ರೂಪಾಯಿಗಳಲ್ಲಿ ಸ್ಥಗಿತಗೊಂಡಿದೆ. ಇದು ಗ್ರಾಮೀಣ ಬಡವರ ಮೇಲೆ ಕ್ರೂರ ಹೊಡೆತ ಮಾತ್ರವಲ್ಲ, 100 ದಿನಗಳ ಕೆಲಸದ ಕಾನೂನುಬದ್ಧ ಹಕ್ಕಿನ ಮೇಲಿನ ನೇರ ದಾಳಿಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೊ, ಕೃಷಿ ಸಂಕಷ್ಟ ಮತ್ತು ರೈತರ ಆತ್ಮಹತ್ಯೆಗಳನ್ನು ಪರಿಹರಿಸುವಲ್ಲಿ ಒಂದು ನಿರ್ಣಾಯಕ ಸಂಗತಿಯಾಗಿರುವ ರೈತರ ಕನಿಷ್ಠ ಬೆಂಬಲ ಬೆಲೆ (ಎಂಎಸ್ಪಿ) ಬೇಡಿಕೆಯನ್ನು ಕೂಡ ಸರ್ಕಾರವು ಬದಿಗೆ ತಳ್ಳಿದೆ.

ಬಜೆಟ್‌ನಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಮಹಿಳೆಯರಿಗಾಗಿ ಖರ್ಚುಗಳ ಬಗ್ಗೆ ಪ್ರತ್ಯೇಕ ಹೇಳಿಕೆಗಳಿವೆ. ಇವು ಮೇಲ್ನೋಟಕ್ಕೇ ಬಜೆಟ್ ಸರ್ಕಾರದ ಸಂಪೂರ್ಣ ನಿರ್ಲಕ್ಷ್ಯವನ್ನು ತೋರಿಸುತ್ತವೆ. 2024–25ರಲ್ಲಿ ಪರಿಶಿಷ್ಟ ಜಾತಿಗಳಿಗೆ ಹಂಚಿಕೆಯು 27,000 ಕೋಟಿ ರೂ.ಗಳ ಕಡಿತವನ್ನು ಎದುರಿಸಿದೆ, ಪರಿಶಿಷ್ಟ ಪಂಗಡಗಳಿಗೆ ಅದೇ ರೀತಿ 17,000 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ. ಒಟ್ಟು ಖರ್ಚಿನಲ್ಲಿ ಅಂತಹ ವೆಚ್ಚಗಳ ಪಾಲು ಜನಸಂಖ್ಯೆಯಲ್ಲಿ ಈ ಸಾಮಾಜಿಕ ಗುಂಪುಗಳ ಪಾಲುಗಳಿಗೆ ಅನುಗುಣವಾಗಿ ಇರಬೇಕೆಂಬ ಮಾರ್ಗಸೂಚಿಗಳಿದ್ದರೂ ಗಮನಾರ್ಹವಾಗಿ ಕಡಿತಗೊಂಡಿವೆ. 2025–26ರಲ್ಲಿ, ಹಂಚಿಕೆಗಳು ಎಸ್.ಸಿ. ಮತ್ತು ಎಸ್.ಟಿ. ಗಳಿಗೆ ಒಟ್ಟು ವೆಚ್ಚದಲ್ಲಿ ಕ್ರಮವಾಗಿ 3.4% ಮತ್ತು 2.6% ಮಾತ್ರ.

ಬಜೆಟ್ ಅಂಕಿಅಂಶಗಳಿಗೆ ಹೋಲಿಸಿದರೆ ಈಶಾನ್ಯ ಪ್ರದೇಶಗಳಿಗೆ ಹಂಚಿಕೆಗಳನ್ನು ಕೂಡ 13,000 ಕೋಟಿ ರೂ.ಗಳಷ್ಟು ಕಡಿಮೆ ಮಾಡಲಾಗಿದೆ.

ಮಕ್ಕಳ ಕಲ್ಯಾಣಕ್ಕಾಗಿಯೂ ಸಹ ಕಡಿತಗೊಳಿಸಲಾಗಿದೆ. 2024–25ರ ಲಿಂಗ ಬಜೆಟ್ ಸಹ 2023–24ಕ್ಕಿಂತ ಕಡಿಮೆಯಾಗಿದೆ. ಈ ಬಾಬ್ತುಗಳ ಅಡಿಯಲ್ಲಿ ಹಂಚಿಕೆಗಳು 2025–26 ರಲ್ಲೂ ಕೆಳಮಟ್ಟದಲ್ಲಿಯೇ ಇವೆ.

ತೆರಿಗೆ ವಿನಾಯಿತಿ ಮಿತಿಯನ್ನು 12 ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವ ಮೂಲಕ "ಮಧ್ಯಮ ವರ್ಗಗಳಿಗೆ ಸಹಾಯ ಮಾಡಲಾಗುತ್ತಿದೆ" ಎಂದು ಬಹಳವಾಗಿ ಹೇಳಿಕೊಳ್ಳಲಾಗುತ್ತಿದೆ. ವಾಸ್ತವವಾಗಿ, ವೈಯಕ್ತಿಕ ಆದಾಯ ತೆರಿಗೆಯಲ್ಲಿನ ಈ ಬದಲಾವಣೆಗಳಿಂದ ಮಧ್ಯಮ ವರ್ಗಕ್ಕೆ ಸಿಗುವ ಪ್ರಯೋಜನದ ಪ್ರಮಾಣವು ಶ್ರೀಮಂತ ವರ್ಗಕ್ಕೆ–ಭಾರತದ ಜನಸಂಖ್ಯೆಯ ಶೇಕಡಾ 1 ಕ್ಕಿಂತ ಕಡಿಮೆ ಇರುವ ಮಂದಿಗೆ–ಆಗುವ ಪ್ರಯೋಜನಗಳಿಗೆ ಹೋಲಿಸಿದರೆ ಚಿಕ್ಕದಾಗಿರುತ್ತದೆ. ಆದಾಯ ತೆರಿಗೆ ರಿಯಾಯಿತಿಗಳಿಂದಾಗಿ ಸರ್ಕಾರ ಅನುಭವಿಸುವ ರೂ.1 ಲಕ್ಷ ಕೋಟಿ ನಷ್ಟದಿಂದ ಪ್ರಯೋಜನದ ಸಿಂಹಪಾಲು ಪಡೆಯುವವರು ಈ ಒಂದು ಶೇಕಡಾ ಮಂದಿ. ಇನ್ನೂ ಮುಖ್ಯವಾಗಿ, ಉನ್ನತ ಆದಾಯದ ಸ್ಲ್ಯಾಬ್‌ಗಳಲ್ಲಿ ತೆರಿಗೆ ದರಗಳನ್ನು ಹೆಚ್ಚಿಸಿ, ಇದನ್ನು ಕೆಳ ಮಧ್ಯಮ ವರ್ಗದ ತೆರಿಗೆ ಹೊರೆಯಲ್ಲಿನ ಕಡಿತದೊಂದಿಗೆ ಸರಿಹೊಂದಿಸಬಹುದಾಗಿತ್ತು. ಆದರೆ ಹಾಗೆ ಮಾಡದಿರಲು ಈ ಸರಕಾರ ನಿರ್ಧರಿಸಿದೆ.

ಹೀನಾಯವಾಗಿ ವಿಫಲವಾಗಿರುವ ನೀತಿಯ ಇತ್ತೀಚಿನ ಕಂತು

2025–26 ರ ಕೇಂದ್ರ ಬಜೆಟ್ ಮೋದಿ ಸರ್ಕಾರದ ದಿವಾಳಿತನವನ್ನು ಬಿಂಬಿಸುತ್ತದೆ ಎಂದಿರುವ ಪೊಲಿಟ್ಬ್ಯುರೊ ಶ್ರೀಮಂತರು ಮತ್ತು ಕಾರ್ಪೊರೇಟ್ ವಲಯದ ಹಿತಾಸಕ್ತಿಗಳನ್ನು ರಕ್ಷಿಸಲು ಅದು ಎಷ್ಟು ಕಟಿಬದ್ಧವಾಗಿದೆಯೆಂದರೆ ಅದು ಅರ್ಥವ್ಯವಸ್ಥೇಯ ಮಂದಗತಿಯನ್ನು ಪರಿಹರಿಸಲು ಯಾವುದೇ ನೈಜ ನೀತಿಯನ್ನು ರೂಪಿಸಲು ಸಹ ಅಸಮರ್ಥವಾಗಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಕಟುವಾಗಿ ಟೀಕಿಸಿದೆ. ಬಿಕ್ಕಟ್ಟಿನ ಪ್ರಮಾಣವಾಗಲಿ, ಅದರ ಸ್ವರೂಪವಾಗಲಿ ಸರ್ಕಾರ ಮತ್ತು ಅದರ ಹಣಕಾಸು ಸಚಿವರಿಗೆ ಗೋಚರಿಸುವಂತೆ ಕಾಣುತ್ತಿಲ್ಲ – ಅವರು ಅರ್ಥವ್ಯವಸ್ಥೆಯ ಉಸ್ತುವಾರಿಯನ್ನು ತಾವು ಎಷ್ಟೊಂದು ಮಹಾನ್ ರೀತಿಯಲ್ಲಿ ನಡೆಸುತ್ತಿದ್ದೇವೆ ಎಂಬ ಭ್ರಮೆಯಲ್ಲೇ ಮುಂದುವರಿಯುತ್ತಿದ್ದಾರೆ. ಅವರ ಉಸ್ತುವಾರಿ ಎಷ್ಟು ಮಹಾನ್ ಆಗಿದೆ ಎಂದರೆ, ಆರ್ಥಿಕ ಸಮೀಕ್ಷೆ ತೋರಿಸಿರುವಂತೆ, ಭಾರತದಲ್ಲಿ ಕೂಲಿ–ಸಂಬಳಗಳು ಸಾಂಕ್ರಾಮಿಕ ಪೂರ್ವದ ಮಟ್ಟಕ್ಕಿಂತ ಕೆಳಗೇ ಇವೆ, ಮತ್ತು ಬೇಡಿಕೆಯ ನಿರ್ಬಂಧಗಳಿಂದಾಗಿ ಬೆಳವಣಿಗೆಯೂ ನಿಧಾನವಾಗುತ್ತಿದೆ ಎಂದು ಗೇಲಿ ಮಾಡಿರುವ ಸಿಪಿಐ(ಎಂ) ಖರ್ಚುಗಳನ್ನು ಸಂಕುಚಿತಗೊಳಿಸುವುದು ಮತ್ತು ಶ್ರೀಮಂತರ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡುವುದು ಮತ್ತು ಖಾಸಗಿ ಕಾರ್ಪೊರೇಟ್ ಮತ್ತು ವಿದೇಶಿ ಹೂಡಿಕೆದಾರರ 'ಗೂಳಿ ಉತ್ಸಾಹವನ್ನು ಹರಿಯ'ಬಿಡಲೆಂಬ ಉದ್ದೇಶದ ಇತರ ಕ್ರಮಗಳು ಈ ಸಮಸ್ಯೆಯನ್ನು ಪರಿಹರಿಸಲು ಮತ್ತು ಹೂಡಿಕೆ ಮತ್ತು ಉದ್ಯೋಗ ಬೆಳವಣಿಗೆಯನ್ನು ಉತ್ಪಾದಿಸಲು ಕೆಲಸ ಮಾಡಿಲ್ಲ ಎಂಬುದಕ್ಕೆ ಈಗ ಸಾಕಷ್ಟು ಪುರಾವೆಗಳಿವೆ ಎನ್ನುತ್ತ 2025–26ರ ಕೇಂದ್ರ ಬಜೆಟ್ ಹೀನಾಯವಾಗಿ ವಿಫಲವಾಗಿರುವ ನೀತಿಯ ಇತ್ತೀಚಿನ ಕಂತು ಮಾತ್ರ.

ಮೋದಿ ಸರ್ಕಾರದ ಈ ಜನವಿರೋಧಿ ಬಜೆಟ್ ವಿರುದ್ಧ ಜನರನ್ನು ಅಣಿನೆರೆಸಬೇಕು ಮತ್ತು ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಆತ್ಮೀಯ ಸಂಗಾತಿ ಪ್ರೀತಿಯ ಗೆಳೆಯ......

ಪುಟ 4 ರಿಂದ

ಅವರನ್ನು, ತಾಯಿ, ಮನೆಯವರನ್ನು ಹಲವು ಸಲ ಭೇಟಿ ಮಾಡಿದ ಸಂತಸ ನೆನಪುಗಳು ಇವೆ.

ಎಸ್ಎಫ್ಐ ಸಂಘಟನೆಯ ಚಟುವಟಿಕೆಗಳು, ಕಾರ್ಯಕ್ರಮಗಳು ಮತ್ತಿತರೆ ಸಂದರ್ಭದಲ್ಲಿ ಹಲವಾರು ಉನ್ನತ ಅಧಿಕಾರಿಗಳು, ರಾಜಕೀಯ ಪ್ರಮುಖರು ಸಹಾಯದ ಹಸ್ತ ಚಾಚುವುದರಲ್ಲಿ ಸಂಗಾತಿ ಬಯ್ಯಾರೆಡ್ಡಿಯವರ ಸಂಪರ್ಕಗಳು ಬಹು ಮುಖ್ಯ. ಅಂತಹ ಬಹುತೇಕರು ಅವಿಭಜಿತ ಕೋಲಾರ ಜಿಲ್ಲೆಗೆ ಸೇರಿದವರು ಎನ್ನುವುದು ವಿಶೇಷ.

ಎಸ್ಎಫ್ಐ ಸಂಘಟನೆಯಲ್ಲಿ ನಾವು ಸಕ್ರಿಯರಾಗಿ ಕೆಲಸ ಮಾಡುತ್ತಿರುವಾಗ 1992ರಲ್ಲಿ ಡಿವೈಎಫ್ಐ ಸಂಘಟನೆಯ ರಾಜ್ಯ ಸಮ್ಮೇಳನವು ಜರುಗಿತು. ಆಗ ಕಾಮ್ರೆಡ್ ಬಯ್ಯಾರೆಡ್ಡಿ ಅವರಿಗೆ ಯುವಜನ ಸಂಘಟನೆಯಲ್ಲಿ ಕೆಲಸ ಮಾಡುವ ಆಸಕ್ತಿ ಇತ್ತು. ಆದರೆ ಡೆಮಾಕ್ರೆಟಿಕ್ ಮೂವ್‌ಮೆಂಟ್‌ನಲ್ಲಿ ಬಂದ ಅಭಿಪ್ರಾಯದಂತೆ ನಾನು ಡಿವೈಎಫ್ಐ ಸಂಘಟನೆಯ ಕಾರ್ಯದರ್ಶಿ ಜವಾಬ್ದಾರಿಯನ್ನ ವಹಿಸಿಕೊಳ್ಳಬೇಕಾಯಿತು. ಆರು ತಿಂಗಳು ಎಸ್ಎಫ್ಐ ಮತ್ತು ಡಿವೈಎಫ್ಐಗೆ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದೆ. ಅನುಭವ ಇದ್ದ ಅವರು ಅಧ್ಯಕ್ಷರಾಗಿ ಮುಂದುವರಿದು ಒಂದು ತಂಡವನ್ನು ಮುನ್ನಡೆಸಬೇಕಾಗಿತ್ತು. ಹೀಗಾಗಿ 1992ರಲ್ಲಿ ಧಾರವಾಡದಲ್ಲಿ ನಡೆದ ರಾಜ್ಯ ಸಮ್ಮೇಳನದಲ್ಲಿ ನಾನು ಬಿಡುಗಡೆಯಾದೆ. ಕಾರ್ಯದರ್ಶಿಯಾಗಿ ಶಾಂತರಾಮ್ ನಾಯಕರವರು ಆಯ್ಕೆಯಾದರು. ಮುಂದೆ ಜಿಸಿಬಿ ವಿದ್ಯಾರ್ಥಿ ಚಳುವಳಿಯಿಂದ ಬಿಡುಗಡೆಯಾದ ಬಳಿಕ ಕೋಲಾರ ಜಿಲ್ಲೆಗೆ ವಾಪಸಾಗಿ, ಅಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಗಿ ಮತ್ತು ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ತಮ್ಮ ಕೆಲಸವನ್ನು ಮುಂದುವರಿಸಿದರು. ಹಾಗೇ ಗ್ಯಾಟ್ ಒಪ್ಪಂದ ವಿರೋಧಿಸಿ ನಡೆದ ಜೈಲ್‌ಭರೋ ಚಳುವಳಿಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲು ಸೇರಿದವರಲ್ಲಿ ನಾನೂ, ಬಯ್ಯಾರೆಡ್ಡಿಯವರೂ ಇದ್ದೆವು. ಜೈಲಿನಲ್ಲಿ ಹಲವು ವಿಶೇಷ ಅನುಭವಗಳಾದವು. ತರಗತಿಗಳನ್ನು ನಡೆಸುವುದು, ಚರ್ಚಿಸುವುದು, ಇತ್ಯಾದಿ.

1991ರಲ್ಲಿ ಮಂಗಳೂರಿನ ತೊಕ್ಕೋಟುವಿನಲ್ಲಿ ನಡೆದ ಸಿಪಿಐ(ಎಂ) ರಾಜ್ಯ ಸಮ್ಮೇಳನದಲ್ಲಿ ಜಿಸಿಬಿ ಮತ್ತು ನಾನು ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದೆವು. 1994ರಲ್ಲಿ ಕೋಲಾರದಲ್ಲಿ ನಡೆದ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಚುನಾಯಿತರಾದೆವು. ಮತ್ತೆ ಈ ಮೂಲಕ ಪರಸ್ಪರ ನಿಕಟ ಒಡನಾಟಕ್ಕೆ ಅವಕಾಶ ಉಂಟಾಯ್ತು.

ನಾವು ವಿದ್ಯಾರ್ಥಿ ಚಳುವಳಿಗಾಗಿ ಬೆಂಗಳೂರಿನಲ್ಲಿ ಇರುವಾಗ ಒಂದೆರಡು ಪ್ರಸಂಗಗಳನ್ನು ನೆನಪಿಸಿಕೊಳ್ಳುವುದು ಉಚಿತ ಎನಿಸುತ್ತದೆ. ರಾಜ್ಯ ಕೇಂದ್ರಕ್ಕೆ ಬಂದ ನಂತರದಲ್ಲಿ ಎಸ್ಎಫ್ಐನ ಸ್ವಂತ ಕಚೇರಿ ಇರಲಿಲ್ಲ. ಚಾಮರಾಜಪೇಟೆಯಲ್ಲಿದ್ದ ಮೊದಲಿದ್ದ ಕಚೇರಿಯನ್ನು ಬಿಡಬೇಕಾಗಿ ಬಂದಿತ್ತು, ಹೀಗಾಗಿ ಕೆ.ವಿ.ಟೆಂಪಲ್ ಸ್ಟ್ರೀಟ್ ನ ಸುಲ್ತಾನ್ ಪೇಟೆಯ ಕಛೇರಿಯಿಂದ ಕೆಲಸ ಮಾಡುತ್ತಿದ್ದೆವು. ವಾಸ ಶಾಸಕರ ಭವನ ರೂಂ. ನಂಬರ್ 233. ಶಾಸಕ ಸಂಗಾತಿ ಟಿ.ಎಸ್.ಮಣಿಯವರದ್ದು. ಇಲ್ಲಿಯೇ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾಗಿದ್ದ ಕಾಂ.ಪಿ.ರಾಮಚಂದ್ರರಾವ್ ಜೊತೆಗೆ ಜಿ.ಎನ್.ನಾಗರಾಜ್ ವಾಸವಾಗಿದ್ದರು. ಅಲ್ಲಿಗೆ ನಾವಿಬ್ಬರೂ ಸೇರಿಕೊಂಡೆವು. ಒಂದು ಹಂತದಲ್ಲಿ ಒಂದಿಷ್ಟು ಅಡುಗೆ ಮಾಡಿಕೊಂಡು ಊಟ ಮಾಡುವ ಪ್ರಯತ್ನ ಮಾಡಿದ್ದು ಅಷ್ಟಾಗಿ ಫಲಿಸಲಿಲ್ಲ. ಎಷ್ಟೋ ಬಾರಿ ಬಯ್ಯಾರೆಡ್ಡಿ ಅವರು ತಮ್ಮ ಪರಿಚಿತರ ಅಂಗಡಿಗಳಿಂದ ತಂದ ಬದನೆಕಾಯಿ ಮತ್ತಿತರೆ ತರಕಾರಿಗಳನ್ನು ಮಾತ್ರ ಬೇಯಿಸಿಕೊಂಡು ತಿನ್ನುವ ಅನಿವಾರ್ಯತೆಯು ಒದಗುತ್ತಿತ್ತು. ಹಣ ಇಲ್ಲದೆ ಇರುವಾಗ ಊರಿನಿಂದ ತಂದಿದ್ದ ನೆಲಗಡಲೆ ತಿನ್ನುವುದು. ತೀರಾ ಕಷ್ಟ ಬಂದಾಗ ಬಸವೇಶ್ವರನಗರದಲ್ಲಿ ಇದ್ದ ಕಾಂ.ಶ್ರೀಮತಿ ಮತ್ತು ವಸಂತರಾಜ್ ಅವರ ಮನೆಗೆ ಹೋಗಿ ಅಡುಗೆ ಮಾಡಿಸಿಕೊಂಡು ಊಟ ಮಾಡುವುದು, ಇಲ್ಲವೇ ಹೆಚ್.ಎನ್.ನಾಗಮೋಹನದಾಸ್ ರ ಮನೆಗೆ ಹೋಗುವುದು, ಹೀಗೆ ನಮ್ಮ ದಿನಚರಿ ಕೆಲವೊಮ್ಮೆ ಸಾಗುತ್ತಿತ್ತು. ಬಳಿಕ ಕಾಲಕ್ರಮೇಣ ರತನ್ ಮಹಲಿನ ರೂಮ್ ನಂಬರ್ 106 ರಲ್ಲಿ ಎಸ್ಎಫ್ಐ ಮತ್ತು ಡಿವೈಎಫ್ಐ ಕಚೇರಿಯನ್ನು ಆರಂಭಿಸಿದೆವು. ಅಲ್ಲಿಯೇ ಪಕ್ಕದಲ್ಲಿದ್ದ ಲಿಂಕ್ ರೋಡಿನ ಆಡಿಟಿಂಗ್ ನೌಕರರ ಕಚೇರಿಯಲ್ಲಿ ಅಧ್ಯಯನ ವೃಂದಗಳು ನಡೆಯುತ್ತಿದ್ದವು. ಮಲ್ಲೇಶ್ವರಂ ಸರ್ಕಲ್ ನಲ್ಲಿದ್ದ ರತನ್ ಮಹಲಿನ ಕಚೇರಿಯೂ ಕೂಡ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುವಲ್ಲಿ ಉಪಯುಕ್ತವಾಗಿತ್ತು. ಹೀಗೆ ಮುಂದೆ ಒಂದು ಸಂದರ್ಭದಲ್ಲಿ ಚಂದ್ರಶೇಖರ ಬಾಳೆಯವರ ಮನೆಯಲ್ಲೂ ನಾನು, ಬಯ್ಯಾರೆಡ್ಡಿ, ಜಿ.ಎನ್.ನಾಗರಾಜ್ ಕೆಲವು ಕಾಲ ವಾಸ ಮಾಡಿದ್ದಿದೆ. ಬಳಿಕ ಸಂಪಂಗಿರಾಮನಗರದಲ್ಲಿ ಕಛೇರಿ ವಾಸ, ಬಳಿಕ ಮದುವೆಯಾದ ನಂತರದಲ್ಲಿ ಪ್ರತ್ಯೇಕ ಮನೆಗಳಲ್ಲಿ. ಮದುವೆಯಾದ ನಮ್ಮೆರಡು ಕುಟುಂಬಗಳು ನಡೆಯಲು ಎಲ್ಲ ರೀತಿಯ ನೆರವನ್ನು ಕೊಡಲು ಪಕ್ಷವು ಮುತುವರ್ಜಿ ವಹಿಸಿತು. ಹಲವಾರು ಸಂಗಾತಿಗಳು ನೀಡಿದ್ದ ವಿವಿಧ ಕೊಡುಗೆಗಳನ್ನು ನಾವು ಹಂಚಿಕೊಂಡೆವು. ಒಟ್ಟಾರೆ ಇನ್ನೂ ಹಲವು ರೀತಿಯ ಅನುಭವಗಳು ಘಟನೆಗಳು ನೆನಪಿನಲ್ಲಿವೆ.

ವಿದ್ಯಾರ್ಥಿ ಚಳುವಳಿಯ ಅನುಭವ ಮತ್ತು ವಿಶೇಷವಾಗಿ, ಕೋಲಾರ ಜಿಲ್ಲೆಯಲ್ಲಿ ಪಕ್ಷ ಮತ್ತು ರೈತರ ಚಳುವಳಿಯಲ್ಲಿನ ಅನುಭವಗಳು, ಪರಿಣಾಮವಾಗಿ ರಾಜ್ಯ ಕೇಂದ್ರದಲ್ಲೂ ರೈತ ಸಂಘದ ಮುಖಂಡರಾಗಿ ಕೆಲಸ ಮಾಡುವಾಗ ಹೆಚ್ಚಿನ ಅನುಭವ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು. ರಾಜ್ಯ ಕೇಂದ್ರದಲ್ಲಿ ಇದ್ದು ರಾಜ್ಯದ ಹಲವು ಜಿಲ್ಲೆಗಳಲ್ಲಿ ರೈತ ಚಳುವಳಿಗೆ ಸಹಾಯ ಮಾಡುವ ಸಂಘಟನಾತ್ಮಕವಾಗಿ ಕಟ್ಟುವ ಕೆಲಸದಲ್ಲಿ ಅಂದಿನ ತಂಡದಲ್ಲಿ ಬಯ್ಯಾರೆಡ್ಡಿ ಅವರು ಸಕ್ರಿಯವಾಗಿ ಶ್ರಮಿಸಿದರು, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿಯೂ, ಅಧ್ಯಕ್ಷರಾಗಿಯೂ ಕೆಲಸ ಮಾಡುವಾಗ ಭೂಮಿ, ಕೂಲಿ, ನೀರಾವರಿಯ ಪ್ರಶ್ನೆಗಳು, ಹಾಲು ಉತ್ಪಾದಕರ ಸಮಸ್ಯೆಗಳು, ರೇಷ್ಮೆ ಬೆಳೆಗಾರರ ಸಮಸ್ಯೆಗಳು ಮತ್ತು ಕೈಗಾರಿಕೆಗಳಿಗೆಂದು ವಶಪಡಿಸಿಕೊಂಡ ರೈತರ ಭೂಮಿ ಪ್ರಶ್ನೆಗಳು ಮತ್ತು ಅದರ ಪರಿಹಾರದಲ್ಲಿ ಆಗಿರುವ ಮೋಸಗಳ ವಿರುದ್ಧವಾಗಿ ಹೀಗೆ ಹಲವಾರು ವಿಭಿನ್ನ ಪ್ರಶ್ನೆಗಳ ಮೇಲೆ ಸಂಗಾತಿ ಬಯ್ಯಾರೆಡ್ಡಿ ಅವರು ತಮ್ಮನ್ನು ತೊಡಗಿಸಿಕೊಂಡು ಪರಿಹಾರವನ್ನು ದೊರಕಿಸಿ ಕೊಳ್ಳುವಲ್ಲಿ ಶ್ರಮಿಸಿದ್ದಾರೆ.

ಇದರ ಜೊತೆ ಜೊತೆಯಲ್ಲೇ ಪಕ್ಷದ ಸೈದ್ಧಾಂತಿಕ ರಾಜಕೀಯ ತಿಳುವಳಿಕೆಯಲ್ಲಿನ ಸ್ಪಷ್ಟತೆ ಮತ್ತು ಸಂಘಟನೆಗೆ ಅವರು ನೀಡುತ್ತಿದ್ದ ಒತ್ತು ಇವೆಲ್ಲವೂ ವಿಶೇಷ ಗುಣಗಳಾಗಿದ್ದವು.

ಇತ್ತೀಚಿನ ವರ್ಷಗಳಲ್ಲಿ ಅವರ ಶ್ವಾಸಕೋಶಗಳು ದುರ್ಬಲಗೊಂಡು ಹಂತ ಹಂತವಾಗಿ ತೀವ್ರವಾದ ತೊಂದರೆಗೆ ಒಳಗಾಗಿದ್ದು ಅತ್ಯಂತ ಆತಂಕವನ್ನು ಉಂಟು ಮಾಡಿತ್ತು. ಬಯ್ಯಾರೆಡ್ಡಿ ಅವರು ರಾಜ್ಯಕೇಂದ್ರಕ್ಕೆ ವಿದ್ಯಾರ್ಥಿ ಸಂಘಟನೆಯ ಕೆಲಸಗಳಿಗಾಗಿ ಬಂದ ನಂತರದಲ್ಲೂ ಅವರ ತಂದೆಯವರು ಕಳುಹಿಸುತ್ತಿದ್ದ ಹಣವನ್ನು ಹಲವು ಬಾರಿ ಅವರ ಔಷದೋಪಚಾರ ಅಥವಾ ಆಹಾರದ ಇತರ ಖರ್ಚುಗಳಿಗೆ ಬಳಸದೆ ಸಂಘಟನೆಗಾಗಿ ಖರ್ಚು ಮಾಡಿದ್ದು ಮತ್ತೆ ನನಗೆ ನೆನಪಾಗುತ್ತಿತ್ತು. ಶ್ವಾಸಕೋಶ ಸುರಕ್ಷಿತವಾಗಿ ಕಾರ್ಯ ನಿರ್ವಹಿಸುವಂತಾಗಲು ಅವರು ಪಡುತ್ತಿದ್ದ ಶ್ರಮ ಆತಂಕವನ್ನು ಹೆಚ್ಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ತಜ್ಞ ವೈದ್ಯರು ಈಗಿರುವ ಶ್ವಾಸಕೋಶಗಳನ್ನು ಸೂಕ್ತವಾಗಿ ನಿರ್ವಹಿಸಿದರೆ ಇನ್ನೂ 10–15 ವರ್ಷಗಳವರೆಗೂ ತೊಂದರೆ ಇಲ್ಲ ಎಂದು ಹೇಳಿದ್ದಾರೆ ಎನ್ನುವುದನ್ನು ಅವರೇ ಹೇಳಿದಾಗ ಸ್ವಲ್ಪ ಸಮಾಧಾನ ಆಗಿತ್ತು. ಆದರೆ ಹೀಗೆ ಆಗುತ್ತದೆ ಎನ್ನುವುದನ್ನು ನಾವ್ಯಾರೂ ಊಹಿಸಿರಲಿಲ್ಲ.

ಕಾಮ್ರೆಡ್ ಬಯ್ಯಾರೆಡ್ಡಿಯವರ ಅಕಾಲಿಕ ನಿಧನ ಪಕ್ಷಕ್ಕೆ ಮತ್ತು ಜನ ಚಳುವಳಿಗಳಿಗೆ ಅಪಾರವಾದ ನಷ್ಟವಾಗಿದೆ. ಅವರು ವಹಿಸಿಕೊಂಡಿದ್ದ ಮಾಡಬೇಕಾದ ಆದ್ಯತೆಯ ಕೆಲಸಗಳನ್ನು ನಿರ್ವಹಿಸುವುದು ಒಂದು ಭಾರಿ ಹೊಣೆಗಾರಿಕೆ. ಸುಮಾರು ನಾಲ್ಕುವರೆ ದಶಕಗಳ ಕಾಲ ಪಕ್ಷದ ವಿವಿಧ ಹಂತಗಳಲ್ಲಿನ ಏರುಪೇರುಗಳಲ್ಲಿ ಮತ್ತು ಈ ಅವಧಿಯಲ್ಲಿನ ಆರ್ಥಿಕ, ರಾಜಕೀಯ, ಸಾಮಾಜಿಕ ಬೆಳವಣಿಗೆಗಳಲ್ಲಿ ಪ್ರಕ್ರಿಯೆಗೊಳಪಟ್ಟ ವ್ಯಕ್ತಿತ್ವ, ಅನುಭವಗಳಿಂದ ಉತ್ತಮ ಗುಣಮಟ್ಟದ ಕೆಲಸ ಫಲ ಸಾಧ್ಯವಾಗುವ ನೆಗೆತದ ಕಾಲದಲ್ಲಿಯೇ ಇಲ್ಲವಾದದ್ದು ಅಘಾತಕಾರಿ.

ನಾನು ಮುಕ್ತ ಮನಸ್ಸಿನಿಂದ ಮಾತನಾಡಬಹುದಾಗಿದ್ದ ಒಬ್ಬ ಆತ್ಮೀಯ ಸಂಗಾತಿಯನ್ನು ಮಾತ್ರವಲ್ಲ, ನನ್ನ ವೈಯುಕ್ತಿಕ ಹಾಗೂ ನಮ್ಮ ಕುಟುಂಬದ ಒಬ್ಬ ನೆಚ್ಚಿನ ಗೆಳೆಯನನ್ನು ಕಳೆದುಕೊಂಡಂತಾಗಿದೆ.

"ನೋಡ್ರಮ್ಮ, ನಾವಿಬ್ಬರೂ ಇಷ್ಟೆಲ್ಲಾ ವರ್ಷಗಳಲ್ಲಿ ಏನೆಲ್ಲಾ ಬಂದರೂ ಗೆಳೆತನವನ್ನು ಕಳೆದುಕೊಂಡಿಲ್ಲ. ಅದನ್ನ ಬೆಳೆಸಿಕೊಂಡು, ಉಳಿಸಿಕೊಂಡು ಬಂದಿದ್ದೇವೆ. ನೀವಿಬ್ಬರೂ ಕೂಡ ಅದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಆತ್ಮೀಯ ಗೆಳತಿಯರಾಗಿ ಇರಬೇಕು" ನನ್ನ ಮಗಳು ಗಾಂಧಿನಿ ಮತ್ತು ನಿಲೋನಾ ಒಟ್ಟಿಗೆ ಇರುವಾಗ ಅವರಾಡಿದ ಮಾತುಗಳು ಇಂದಿಗೂ ಹೃದಯದಲ್ಲಿ ಮಾರ್ದನಿಸುತ್ತಿವೆ.

ಹಾಗೆ ನೋಡಿದರೆ ನಾವಿಬ್ಬರು ಎಂಬತ್ತರ ಆರಂಭದಲ್ಲಿ ವಿದ್ಯಾರ್ಥಿ ಚಳುವಳಿಗೆ ಬಂದೆವು. ಏಕಕಾಲದಲ್ಲೇ ಎಸ್ಎಫ್ಐ ನ ಜಿಲ್ಲೆಗಳ ಮುಖಂಡರುಗಳಾಗಿ, ರಾಜ್ಯದ ಮುಖಂಡರಾಗಿ ಕೆಲಸ ಮಾಡಿದೆವು. ಒಂದೇ ಕಾಲದಲ್ಲಿಯೇ 1991, 1994ರಲ್ಲಿ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾಗಿ, ನಂತರ 1998 ಜನವರಿಯಲ್ಲಿ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದೆವು. ಕೇವಲ ಒಂದು ವಾರದ ಅಂತರದಲ್ಲಿ 1995ರ ಏಪ್ರಿಲ್–ಮೇ ಮೊದಲ ವಾರದಲ್ಲಿ ಇಬ್ಬರೂ ಮದುವೆಯಾದೆವು. ಮೊದಲು ನಮಗೆ ಮಗಳು ಹುಟ್ಟಿದಳು. ನಂತರದಲ್ಲಿ ಅವರಿಗೆ. ಪಕ್ಷದ ಸಂಘಟನೆಯಲ್ಲಿನ ಏರುಪೇರುಗಳನ್ನು ಸಮಾನ ಅರಿವಿನಿಂದ ಜೊತೆಯಾಗಿ ಎದುರಿಸಿದೆವು. ಹೀಗೆ ಎಲ್ಲಾ ಹಂತಗಳಲ್ಲಿ ಜೊತೆಯಾಗಿದ್ದ ಗೆಳೆಯ ಇಂದು ಇಲ್ಲ ಎನ್ನುವುದು ಒಪ್ಪಿಕೊಳ್ಳಲಾಗದ ಸಂಗತಿ. ಆದರೆ?! ವಾಸ್ತವ ಎಂದರೆ ಅವರು ಮಾಡಬೇಕಿದ್ದ ಕೆಲಸಗಳು ನಮ್ಮ ಕರ್ತವ್ಯಗಳು.

ದುರ್ಬಲ ವರ್ಗದ ಧ್ವನಿ ವೈ.ಕೆ.ಗಣೇಶ್.....

ಪುಟ 3 ರಿಂದ

ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಹಿರಿಯ ನಾಯಕರಾದ ಡಾ.ದುರ್ಗಾ ಪ್ರಸಾದ್ ಮಾತನಾಡಿ ಆದಿವಾಸಿ ಸಂಘಟನೆಯ ಅಖಿಲ ಭಾರತ ಸಮ್ಮೇಳನ ರಾಂಚಿಯಲ್ಲಿ ನಡೆದಾಗ ಗಣೇಶ್ ಅವರು ವೇದಿಕೆಯಲ್ಲಿ ದೇಶದ ದೊಡ್ಡ ದೊಡ್ಡ ಮುಖಂಡರ ಎದುರು ಆದಿವಾಸಿಗಳ ಪರ ಮಾತನಾಡಿದ್ದರು. ಸದಾ ಆದಿವಾಸಿಗಳ ಏಳಿಗೆಗಾಗಿ ಶ್ರಮಿಸುತ್ತಿದ್ದ ಅವರ ಅಗಲಿಕೆ ದುರ್ಬಲರ ಹೋರಾಟಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ ಎಂದರು.

ಅಖಿಲ ಭಾರತ ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಲತೀಫ್, ಸಿಐಟಿಯು ಸಂಘಟನೆಯ ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಕೊಡಗು ಜಿಲ್ಲಾ ತೋಟ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಡಿ.ಕುಟ್ಟಪ್ಪ ಅವರುಗಳು ಮಾತನಾಡಿ, ಆದಿವಾಸಿಗಳ ಏಳಿಗೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ವೈ.ಕೆ.ಗಣೇಶ್ ಅವರ ಹೋರಾಟದ ಭಾಗವನ್ನು ನಾವುಗಳು ಮುಂದುವರೆಸುವ ಮೂಲಕ ನೊಂದವರಿಗೆ ನ್ಯಾಯ ಒದಗಿಸಬೇಕಾಗಿದೆ ಎಂದು ತಿಳಿಸಿದರು. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಜಿಲ್ಲಾ ಮುಖಂಡರಾದ ಪಿ.ಕೆ.ರಮೇಶ್, ಅಶೋಕ, ನ್ಯಾನ್ಸಿ ತಿಮ್ಮ, ರೋಹಿಣಿ, ನೇತ್ರಾವತಿ, ರಾಮು ಸೇರಿದಂತೆ ಜಿಲ್ಲೆಯ ವಿವಿಧೆಡೆಯ ಆದಿವಾಸಿ ಕುಟುಂಬಗಳು ಪಾಲ್ಗೊಂಡು ಗಣೇಶ್ ಅವರ ಅಗಲಿಕೆಗೆ ಕಂಬನಿ ಮಿಡಿದರು. ಗಣೇಶ್ ಕುಟುಂಬಕ್ಕೆ ಸಹಾಯ ನೀಡಲು ನಿರ್ಧರಿಸಲಾಯಿತು. ನಿಧಿ ಸಂಗ್ರಹಣೆಗೆ ಸಮಿತಿ ರಚಿಸಲಾಗುವುದು.

ಮೈಕ್ರೋ ಫೈನಾನ್ಸ್ ವ್ಯವಸ್ಥೆಯ ಕರಾಳಮುಖ.....

ಪುಟ 8 ರಿಂದ

ಉಂಟುಮಾಡುವುದು ಮತ್ತು ತೀವ್ರಗಾಯವನ್ನು ಉಂಟುಮಾಡುವುದು ಹಾಗೂ ಅಕ್ರಮವಾಗಿ ಬಂಧಿಸಿದ್ದರೆ ಕಲಂ 127 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಬೇಕು. ಹಾಗೆಯೇ ಅತಿಯಾದ ಬಡ್ಡಿದರ ಹಾಗೂ ಅನಧಿಕೃತವಾಗಿ ಸಾಲ ವಿತರಣೆಗೆ ಸಂಬಂಧಿಸಿದ್ದರೆ 'ಆರ್ಥಿಕ ಅಪರಾಧಗಳ' ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಇಂತಹ ಅಪರಾಧಗಳಿಗೆ 5 ವರ್ಷಗಳವರೆಗೆ ಶಿಕ್ಷೆ ಅಥವಾ ದಂಡ ವಿಧಿಸಬಹುದಾಗಿದೆ.

ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು

ಮೈಕ್ರೋ ಫೈನಾನ್ಸಿಂಗ್ ಸಂಸ್ಥೆಗಳ ಕಿರುಕುಳಗಳು ಸರ್ಕಾರದ ಗಮನಕ್ಕೆ ಇದ್ದರೂ ಸರ್ಕಾರ ಇದರಿಂದ ಹಿಂದೆ ಸರಿಯದೇ, ಕೂಡಲೇ ಮಧ್ಯಪ್ರವೇಶಿಸಿ ಹಿಂಸೆ ಮತ್ತು ಬಲವಂತದ ವಸೂಲಿಯ ವಿರುದ್ಧ ಸ್ಥಳೀಯ ಪೊಲೀಸ್ ಸಹಕಾರವನ್ನು ಪಡೆದು, ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ಪ್ರಾರಂಭಿಸಬೇಕು. ಗ್ರಾಹಕರ ಹಕ್ಕುಗಳ ಉಲ್ಲಂಘನೆ ಮಾಡುವ ಸಂಸ್ಥೆಗಳ ಲೈಸೆನ್ಸ್‌ಗಳನ್ನು ರದ್ದುಪಡಿಸಿ, ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾದ ಗ್ರಾಹಕರಿಗೆ ಕೌನ್ಸೆಲಿಂಗ್ ಸೆಂಟರ್‌ಗಳನ್ನು ತೆರೆದು, ಆರ್ಥಿಕ ನೆರವಿಗಾಗಿ ಸಹಾಯ ಕೇಂದ್ರಗಳನ್ನು ತೆರೆಯಬೇಕು. ಹಾಗೆಯೇ ಸರ್ಕಾರಗಳೇ ಮುತುವರ್ಜಿ ವಹಿಸಿ ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗೆ ಸ್ವ ಸಹಾಯ ಸಂಘಗಳ ಮೂಲಕ ಅತಿ ಕಡಿಮೆ ಬಡ್ಡಿ ದರದಲ್ಲಿ ಪರ್ಯಾಯ ಆರ್ಥಿಕ ಸೌಲಭ್ಯಗಳನ್ನು ಒದಗಿಸಿ ಸ್ತ್ರೀ ಸಬಲೀಕರಣಕ್ಕೆ ಮುಂದಾಗಬೇಕೇ ವಿನಃ ಖಾಸಗಿ ಬಂಡವಾಳಗಾರರ ಪರ ನಿಲ್ಲಬಾರದು.

ಗಣರಾಜ್ಯೋತ್ಸವದ ವಿಚಾರ ಸಂಕಿರಣ:

ನಮ್ಮ ಸಂವಿಧಾನವು ಅಷ್ಟು ಯಶಸ್ವಿಯಾಗಿ ಅನುಷ್ಟಾನಕ್ಕೆ ಬರಲಿಲ್ಲ – ಜಸ್ಟೀಸ್ ವಿ.ಗೋಪಾಲಗೌಡ

ಸಿ.ಸಿದ್ದಯ್ಯ

"ನಮ್ಮ ಸಂವಿಧಾನವು ಪ್ರಪಂಚದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಸಂವಿಧಾನ ಎಂದು ಭಾಷಣದಲ್ಲಿ ಹೇಳುತ್ತೇವೆ. ಯಾವುದೇ ದೇಶದ ಸಂವಿಧಾನ 19 ವರ್ಷಗಳ ಮೇಲೆ ಉಳಿದಿಲ್ಲ, ನಮ್ಮ ಸಂವಿಧಾನ 75 ವರ್ಷ ದಾಟಿ 76ನೇ ವರ್ಷಕ್ಕೆ ಕಾಲಿಟ್ಟಿದೆ. ಆದರೆ, ಅದು ಅಷ್ಟು ಯಶಸ್ವಿಯಾಗಿ ಅನುಷ್ಠಾನಕ್ಕೆ ಬರಲಿಲ್ಲ" ಇದು ಜಸ್ಟಿಸ್ ವಿ.ಗೋಪಾಲಗೌಡ ಅವರ ಮಾತುಗಳು. ಜನವರಿ 26 ರಂದು ಬೆಂಗಳೂರಿನಲ್ಲಿ 'ಭಾರತ ಉಳಿಸಿ ಸಮಿತಿ' ಆಯೋಜಿಸಿದ್ದ "ಗಣರಾಜ್ಯ ಭಾರತ @75– ಪ್ರಸಕ್ತ ಸವಾಲುಗಳು" ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತ ಅವರು ಹೀಗೆ ಹೇಳಿದ್ದಾರೆ. ಜಸ್ಟೀಸ್ ಅವರ ಭಾಷಣದ ಹಲವು ಅಂಶಗಳು ಇಲ್ಲಿವೆ.

ಜಗತ್ತಿನ ಯಾವುದೇ ಒಂದು ಸಂವಿಧಾನ 19 ವರ್ಷಗಳಿಗಿಂತ ಹೆಚ್ಚು ಕಾಲ ಉಳಿದಿಲ್ಲ. ಆದರೆ, ಭಾರತದ ಸಂವಿಧಾನ 75 ವರ್ಷ ಉಳಿದಿದೆ. ಭಾರತ ದೇಶ ಬಹಳ ಅಮೋಘವಾದ, ಉತ್ಕೃಷ್ಟವಾದ ದೇಶ. ಜನಸಂಖ್ಯೆಯಲ್ಲಿ ಚೀನಾ ಬಿಟ್ಟರೆ ಎರಡನೇ ಅತಿ ದೊಡ್ಡ ದೇಶ ನಮ್ಮದು. ಆಡಳಿತ ನೀಡಬೇಕಾದ ಜನರ ಪ್ರತಿನಿಧಿಗಳು, ರಾಜಕೀಯ ಪಕ್ಷಗಳ ವತಿಯಿಂದ ಚುನಾಯಿತರಾಗಿ ಭಾರತ ಸರ್ಕಾರ ರಚಿಸುತ್ತಾರೆ. ನಮ್ಮ ಸಂವಿಧಾನ ಭಾರತೀಯ ಫೆಡರಲ್ ವ್ಯವಸ್ಥೆಯ ವೈಶಿಷ್ಟ್ಯಗಳುಳ್ಳ ಸಂವಿಧಾನ. ಅನುಚ್ಛೇದ 1(1) "ಇಂಡಿಯಾ, ಅಂದರೆ ಭಾರತವು ರಾಜ್ಯಗಳ ಒಕ್ಕೂಟವಾಗಿರುತ್ತದೆ" ಎಂದು ಹೇಳುತ್ತದೆ. 2 ವಿಷಯಗಳನ್ನು ಬಿಟ್ಟರೆ, ಒಂದೊಂದು ರಾಜ್ಯ ಕೂಡ ಒಂದೊಂದು ರಾಷ್ಟ್ರ ಸಮಾನ, ಆ ರಾಜ್ಯಗಳಿಗೆ ಜನರನ್ನು ಆಳುವಂತಹ ಅಧಿಕಾರವನ್ನು ನೀಡಿದೆ. ಆದರೆ, ಇಂದು ಸಂವಿಧಾನದ ಆಡಳಿತ ಕುಗ್ಗಿ ಹೋಗಿದೆ.

'ವಿ ದ ಪೀಪಲ್' ಎನ್ನುತ್ತಾ ಎಲ್ಲರೂ ಸೇರಿ ಸಂವಿಧಾನ ರಚನೆ ಮಾಡಿಕೊಂಡಿದ್ದೇವೆಯೇ?

'ವಿ ದ ಪೀಪಲ್' (We the People) ಎನ್ನುತ್ತಾ ಎಲ್ಲರೂ ಸೇರಿ ಸಂವಿಧಾನ ರಚನೆ ಮಾಡಿಕೊಂಡಿದ್ದೇವೆಯೇ? ಇದರ ರಚನೆಯ ಮೂಲಕ್ಕೆ ಹೋದಾಗ ಆ ರೀತಿ ನಡೆದಿಲ್ಲ. ಮೂರು ವರ್ಷಗಳ ಕಾಲ ಸಂವಿಧಾನ ಅಸೆಂಬ್ಲಿಯಲ್ಲಿ ಸಂವಿಧಾನದ ಬಗ್ಗೆ ಚರ್ಚೆ ನಡೆದಿದೆ. ಡಾ. ಬಿ.ಆರ್.ಅಂಬೇಡ್ಕರ್ ಅವರು ಬಹಳ ಸಕ್ರಿಯವಾದ ಸಂವಿಧಾನ ರಚನೆ ಮಾಡಿದ್ದಾರೆ. ಅವರದು ಅಮೋಘವಾದದ್ದು ಎಂಬುದನ್ನು ನಾವು ಭಾವಿಸಬೇಕಾಗಿದೆ. ಜನರ ಪ್ರತಿನಿಧಿಗಳಾಗಿ ಯಾರೂ ಸಂವಿಧಾನ ಸಭೆಗೆ ಹೋಗಲಿಲ್ಲ. ಎಲ್ಲಾ ಪ್ರತಿನಿಧಿಗಳು ಜನರನ್ನು ಪ್ರತಿನಿಧಿಸಲಿಲ್ಲ. ದೇಶದ ಉದ್ಯಮಿಗಳ, ಬಂಡವಾಳಗಾರರ, ಸಂಸ್ಥಾನಗಳ ಪ್ರತಿನಿಧಿಗಳು ಕಾನ್ಸಿಟ್ಯೂಸನ್ ಅಸೆಂಬ್ಲಿಯಲ್ಲಿ ಇದ್ದರು. ಜನರು ಎಂದರೆ ಯಾರು? ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ಯುವಕರು, ಭೂರಹಿತರು, ಧ್ವನಿ ಇಲ್ಲದವರು, ಇವರು ಈ ದೇಶದ ಜನ. ಅವರ ಧ್ವನಿ ಸಂವಿಧಾನ ಸಭೆಯಲ್ಲಿ ಇರಲಿಲ್ಲ. ಆದರೂ ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಬಹಳ ಸ್ಥೂಲವಾಗಿ ನಿಜ ಸಂಗತಿಯನ್ನು ಅರ್ಥಮಾಡಿಕೊಂಡು, ಸಂವಿಧಾನದ ಆಡಳಿತವನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಆದರೆ, ಇಂದೂ ಕೂಡಾ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಭಾಗವಹಿಸುವಿಕೆ ಇಲ್ಲ. ಪ್ರಜೆಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿಲ್ಲ. ಸಂವಿಧಾನವನ್ನು ಓದುವುದರಿಂದ ಮಾತ್ರ ಇದು ಸಾಧ್ಯವಿಲ್ಲ, ಸಂವಿಧಾನದ ತಾತ್ಪರ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳುವ ಅವಶ್ಯಕತೆ ಇದೆ.

ಸಾಧನೆಗಳು ಜನರಿಗೆ ಮುಟ್ಟಿದೆಯೇ?

ಹಾಗಾದರೆ, 75 ವರ್ಷಗಳ ನಂತರ ಸ್ವತಂತ್ರ ಭಾರತದಲ್ಲಿ ನಾವು ಪ್ರಗತಿಯನ್ನು ಪಡೆಯಲಿಲ್ಲವೇ? ಅಭಿವೃದ್ಧಿಯನ್ನು ಪಡೆಯಲಿಲ್ಲವೇ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ, ನಕಾರಾತ್ಮಕವಾಗಿ ಹೇಳುವಂತಹ ಅವಶ್ಯಕತೆ ಇಲ್ಲ. ಸಕಾರತ್ಮಕವಾಗಿ ಪ್ರಗತಿಯನ್ನು, ಅಭಿವೃದ್ಧಿಯನ್ನು ಮಾಡಿಕೊಂಡಿದ್ದೇವೆ ಎಂದು ಹೇಳಬೇಕಾಗಿದೆ. ಶಿಕ್ಷಣ ರಂಗದಲ್ಲಿ ಶೇ.18 ರಷ್ಟು ಸಾಕ್ಷರತೆ ಇದ್ದದ್ದು ಇಂದು 50 ಶೇ. ಆಗಿದೆ. ಕೃಷಿ ರಂಗದಲ್ಲಿ ಸಾಧನೆ ಮಾಡಿದ್ದೇವೆ. ಕೈಗಾರಿಕೆಯಲ್ಲಿ ಮುಂದುವರಿದಿದ್ದೇವೆಯೆ ಎಂದರೆ, ಬಂಡವಾಳಶಾಹಿಗಳು ಮತ್ತು ಬಲಪಂಥಿಯ ಬುದ್ದಿಜೀವಿಗಳು ದೇಶದಲ್ಲಿ ಕೈಗಾರಿಕಾ ಕ್ರಾಂತಿ ನಡೆಯುತ್ತಿದೆ, ಕಂಪ್ಯೂಟೀಕರಣ ಆಗಿದೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ. ಕೆಲವು ವಿಭಾಗಗಲ್ಲಿ ಸಾಧನೆ ಮಾಡಿದ್ದೇವೆ. ಆದರೆ, ಆ ಸಾಧನೆಯನ್ನು ತುಲನೆ ಮಾಡಿದಾಗ 'ವಿ ದ ಪೀಪಲ್' ಎಂಬಂತೆ ಅದು ಜನರಿಗೆ ಮುಟ್ಟಿದೆಯೇ? ಪ್ರಸ್ತಾವನೆಯಲ್ಲಿ 'ವಿ ದ ಪೀಪಲ್ ಆಫ್ ಇಂಡಿಯಾ' ಎಂದರೆ, ಈ ದೇಶದ ಜನ ಎಂದು ಹೇಳಿರುವುದು. ಆ ರೀತಿ ನಡೆಯಲಿಲ್ಲ. ಈ ದಿಕ್ಕಿನಲ್ಲಿ ನಾವು ಭಾರತದ ಗಣರಾಜ್ಯವನ್ನು ನೋಡಬೇಕಿದೆ. ನಮ್ಮ ಮುಂದೆ ಏನೆಲ್ಲಾ ಸವಾಲುಗಳಿವೆ, ಸಂವಿಧಾನದ ಪ್ರಸ್ತಾವನೆಯಲ್ಲಿ ಇರುವ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ ಪಡೆಯಲು ಸಾಧ್ಯವಿದೆಯೇ ಎಂಬುದನ್ನು ಯೋಚಿಸುವಂತಹ ಕಾಲಘಟ್ಟದಲ್ಲಿ ನಾವಿದ್ದೇವೆ.



ಸಮಾನತೆ, ಸಮಾನ ಅವಕಾಶ ಸಿಗಲಿಲ್ಲ

ಇಲ್ಲಿ ಸವಾಲುಗಳು ಸಾಕಷ್ಟಿವೆ. ಜನಸಾಮಾನ್ಯರಿಗೆ ನ್ಯಾಯ ಸಿಗಲಿಲ್ಲ, ಕಾರ್ಮಿಕ ಸಂಘಕ್ಕೆ ನ್ಯಾಯ ಸಿಗಲಿಲ್ಲ. ಶೇ. 50ರಷ್ಟಿರುವ ಮಹಿಳೆಯರಿಗೆ 14ನೇ ಮತ್ತು 15ನೇ ಅನುಚ್ಛೇದದಂತೆ ಸಾಮಾಜಿಕ ನ್ಯಾಯ ಸಿಗಲಿಲ್ಲ, ಸಮಾನತೆ, ಸಮಾನ ಅವಕಾಶ, ಸಮಾನ ರಕ್ಷಣೆ ಸಿಗಲಿಲ್ಲ. ಇದಕ್ಕೆ ನಮ್ಮನ್ನು ಆಳುತ್ತಿರುವವರು ಮತ್ತು ಜನರೂ ಕೂಡಾ ಕಾರಣಕರ್ತರು ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ.

ಹೆಚ್ಚುತ್ತಿರುವ ಅಸಹಿಷ್ಣುತತೆಯು ಪ್ರಜಾಪ್ರಭುತ್ವದ ಸಮಾವೇಶಾತ್ಮಕ ಮನೋಭಾವಕ್ಕೆ ತೊಂದರೆ ಉಂಟುಮಾಡುತ್ತದೆ. ವಿಭಿನ್ನ ಅಭಿಪ್ರಾಯಗಳ ಸ್ವೀಕಾರದ ಕೊರತೆಯು ಸಾಮಾಜಿಕ ವಿಭಜನೆ ಮತ್ತು ಧೃವೀಕರಣಕ್ಕೆ ಕಾರಣವಾಗುತ್ತದೆ. ಇದು ಇಂದು ನಡೆಯುತ್ತಿದೆ.

ಆಶಯಗಳಿಗೆ ತದ್ವಿರುದ್ದವಾಗಿ ನಡೆಯುತ್ತಿವೆ

ಸಂವಿದಾನದಲ್ಲಿ ಮೂರು ಆಧಾರ ಸ್ಥಂಭಗಳಿವೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ. ಈ ಮೂರು ಅಂಗಗಳು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿವೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಈ ಮೂರು ಸಂವಿಧಾನದ ಅಂಗಗಳು ವಿಫಲವಾಗಿವೆ. ಇಂದು ಸಂವಿಧಾನದ ತತ್ವಗಳು ಮತ್ತು ಆಶಯಗಳಿಗೆ ತದ್ವಿರುದ್ದವಾಗಿ ಇವು ನಡೆಯುತ್ತಿವೆ. ಸರ್ಕಾರ ರಚನೆ ಹೇಗಿರಬೇಕು, ಅದರ ಸ್ಟ್ರಕ್ಚರ್ ಹೇಗಿರಬೇಕು, ಅವರವರ ಅಧಿಕಾರಗಳೇನು ಎಂಬುದನ್ನು ನಮ್ಮ ಸಂವಿಧಾನವು ನಿರ್ಧಿಷ್ಟವಾಗಿ ನಮೂದು ಮಾಡಿರುತ್ತದೆ. ನಾಲ್ಕನೇ ಅಂಗ ಮಾಧ್ಯಮ. ಮಾಧ್ಯಮಗಳಲ್ಲಿ ನಾಗರೀಕ ಕುರಿತ ಚರ್ಚೆ ಆಗುತ್ತಿಲ್ಲ. ಈ ನಾಲ್ಕು ವಿಭಾಗಗಳಿಗೆ ಸಾರ್ವಭೌಮತ್ವ ಇಲ್ಲ. ಸಾರ್ವಬೌಮತ್ವ ಎಂದರೆ ಈ ದೇಶದ ಪ್ರಜೆಗಳು. ಆದರೆ, ಪ್ರಜೆಗಳ ಭಾಗವಹಿಸುವಿಕೆ ಇಲ್ಲ. ಶಾಸಕಾಂಗಕ್ಕೆ ಸಾರ್ವಭೌಮತ್ವ ಇಲ್ಲ. ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿಲ್ಲ, ರಾಜ್ಯಪಾಲರು ಅಧಿಕಾರ ವ್ಯಾಪ್ತಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ನ್ಯಾಯಾಂಗ, ಶಾಸಕಾಂಗದ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ

ನ್ಯಾಯಾಂಗ, ಶಾಸಕಾಂಗದ ಮೇಲೆ ಜನರಿಗೆ ಹಿಂದೆ ಗಾಢವಾದ ನಂಬಿಕೆ ಇತ್ತು. ಈಗ ಇದು ಕಡಿಮೆಯಾಗುತ್ತಿದೆ. ಇದನ್ನು ಹಾಲಿ ನ್ಯಾಯಾಧೀಶರಾದ ಓಖಾ ಅವರೇ ಹೇಳುತ್ತಾರೆ. ಪಕ್ಷಪಾತ ಮತ್ತು ಅನುಮಾನಗಳು ಜನರಲ್ಲಿ ಆಳವಾದ ಕೊರತೆಯನ್ನು ಉಂಟುಮಾಡುತ್ತದೆ. ಅನುಮಾನ ಬೃಹತ್ತಾಗಿ ಬೆಳೆದಿದೆ. ಧರ್ಮದ ಆಧಾರದ ಮೇಲೆ ಶಾಸನಗಳನ್ನು ಮಾಡಬಾರದು. ಇದಕ್ಕೆ 141ನೇ ಕಾಲಂ ಬೈಂಡಿಗ್ ಇದೆ. ಆದರೂ ಮತದ ಆದಾರದ ಮೇಲೆ ಸಿಟಿಜನ್ ಸಿಫ್ ಆಕ್ಟ್ ತಿದ್ದುಪಡಿ ಮಾಡಿದರು. ಇದರ ವಿರುದ್ದ ಬಹಳ ಹೋರಾಟ ನಡೆಯಿತು. ಜನರ ಪ್ರತಿನಿಧಿ ಮೇಲೆ ಅನುಮಾನ ಇದೆ. ಜಿಲ್ಲೆಯ ಅಧಿಕಾರಿ, ಜಿಲ್ಲೆಯ ಪೋಲೀಸ್ ಅಧಿಕಾರಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ಸಚಿವರ ಮೇಲಿನ ನಂಬಿಕೆ ಹೋಗಿದೆ. ವ್ಯವಸ್ಥೆಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯಲ್ಲಿ ಕುಸಿತವಾಗಿದೆ. ಅಧಿಕಾರ ಕೇಂದ್ರಿತ ಪ್ರವೃತ್ತಿಗಳ ಹೆಚ್ಚಳವಾಗಿದೆ.

ಭ್ರಷ್ಟತೆ, ದುರುಪಯೋಗ ಮಾಡುವಂತದು ಇವರ ರಕ್ತದಲ್ಲಿ ಇಳಿದುಬಿಟ್ಟಿದೆ

ಸಿಪಿಎಂ ಸೇರಿದಂತೆ ಎಡಪಕ್ಷಗಳು ಹೊರಗಿನಿಂದ ಬೆಂಬಲ ಕೊಟ್ಟಿದ್ದ ಯುಪಿಎ ಸರ್ಕಾರದ ಅವಧಿ 2004ರಲ್ಲಿ, ಗ್ರಾಮೀಣ ಕೃಷಿ ಕೂಲಿಕಾರರಿಗೆ 100 ದಿನಗಳ ಉದ್ಯೋಗ ಒದಗಿಸುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಬಂತು. ಅದರಲ್ಲಿ ಸಹಸ್ರಾರು ಕೋಟಿ ಹಣ ದುರುಪಯೋಗ ನಡೆದಿದೆ. ಇದರ ತನಿಖೆ ನಡೆಸಿ ಶಿಕ್ಷಿಸುವುದಾದರೆ, ಪಿಡಿಒಗಳನ್ನು, ಗ್ರಾಮ ಪಂಚಾಯ್ತಿ ಸದ್ಯಸರನ್ನು ಒಳಗೊಂಡಂತೆ ಬಹಳಷ್ಟು ಭ್ರಷ್ಟರನ್ನು ಜೈಲಿಗೆ ಅಟ್ಟಬಹುದಿತ್ತು. ಇದು ಒಂದು ದೊಡ್ಡ ಸವಾಲು. ಭ್ರಷ್ಟತೆ, ದುರುಪಯೋಗ ಮಾಡುವಂತದು ಇವರ ರಕ್ತದಲ್ಲಿ ಇಳಿದುಬಿಟ್ಟಿದೆ. ಈ ಸವಾಲನ್ನು ಭೇದಿಸುವುದೇಗೆ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ನಿರಾಶಕ್ತಿ, ನಿರ್ಲಕ್ಷತೆ ಪ್ರಜಾಪ್ರಭುತ್ವ ಪರಿಣಾಮಕತ್ವನ್ನು ಕುಂದಿಸುತ್ತದೆ.

ಆರ್ಥಿಕ ಅಸಮಾನತೆ ಹೆಚ್ಚಿದೆ. ಶಿಕ್ಷಣ ದುಬಾರಿಯಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳ ಪುಟ 14 ಕ್ಕೆ

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಾಹಿತಿಗಳಾದ ಕೆ. ಷರೀಫಾ ಅವರು, 75 ವರ್ಷಗಳಲ್ಲಿ ನಮ್ಮ ಸಂವಿಧಾನದ ಆಶಯಗಳು ಈಡೇರಿವೆಯೋ ಎಂದು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಸಂವಿಧಾನದ ಪ್ರಸ್ತುತತೆಯ ಬಗ್ಗೆ ಮಾತನಾಡಬೇಕಿದೆ. ಮನುಸಂಸ್ಕೃತಿಯವರಿಗೆ ಅಂಬೇಡ್ಕರ್ ಅವರ ಸಂವಿಧಾನವನ್ನು ಸಹಿಸಲಾಗುತ್ತಿಲ್ಲ ಎಂದು ಹೇಳಿದರು.

ಸ್ವಾತಂತ್ರ,, ಸಮಾನತೆ, ಸೋದರತೆ ತತ್ವಗಳನ್ನು ಮೇಲೆ ಮಾಡಲು ಹೊರಟಿರುವ ಪ್ರಜಾಪ್ರಭುತ್ವ ವಿರೋಧಿಗಳನ್ನು ಎಂತ ಪ್ರತಿಕೂಲ ಸಂದರ್ಭದಲ್ಲಿಯೂ ಬೆಂಬಲಿಸಬಾರದು ಎಂದು ಅಂಬೇಡ್ಕರ್ ಹೇಳಿದ್ದರು. ಮುರ್ಮು ಅವರು ಗಣರಾಜ್ಯ ಭಾಷಣ ಮಾಡುತ್ತ, 'ಒಂದು ದೇಶ ಒಂದು ಚುನಾವಣೆ'ಯು ಒಂದು ಬದ್ದತೆಗೆ ಅನುಕೂಲ ಆಗುತ್ತದೆ ಎಂದು ಹೇಳುತ್ತಾರೆ. ಒಬ್ಬ ಆಧಿವಾಸಿ ಮಹಿಳೆ ಅಧಿಕಾರಕ್ಕೆ ಹೋದ ತಕ್ಷಣ ಅವರು ಕೊಡುವಂತಹ ಹೇಳಿಕೆಗಳು ಎಷ್ಟೊಂದು ತದ್ವಿರುದ್ದವಾಗಿವೆ! ಇಂತಹ ಚುನಾವಣಾ ಪದ್ದತಿಯು ಬಹುತ್ವವನ್ನು ಅಳಿಸಿಹಾಕುತ್ತದೆ. ಶಾಸನ ಸಭೆಯಲ್ಲಿಯೇ ಮಹಿಳಾ ಸಚಿವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದನ್ನು ನೋಡುತ್ತಿದ್ದೇವೆ. ಕನ್ನಡ ಶಾಲೆಗಳನ್ನು ಮುಚ್ಚಿ ಖಾಸಗಿ ಶಾಲೆಗಳಿಗೆ ಪ್ರೋತ್ಸಾಹಿಸುತ್ತಿದ್ದೇವೆ. ಬಡವರಿಗೆ ಶಿಕ್ಷಣ ಸಿಗದಂತೆ ಮಾಡಲಾಗುತ್ತಿದೆ.

ಭಾರತದ ಸಂವಿಧಾನ ಕೇವಲ ದಾಖಲೆಗಳಲ್ಲಿ ಅಲ್ಲ, ಕೇವಲ ಶಬ್ದಗಳ ಪುಸ್ತಕವಲ್ಲ, ಅದು ಜನರ ಜೀವನ ಶಕ್ತಿಯಾಗಿ, ಚೇತನವಾಗಿ ಅರಿಯಬೇಕಾಗಿದೆ. ಭಾರತದಂತಹ ಬಹು ಆಯಾಮಗಳಿರುವ ಸಮಾಜದ ಸಾಮಾನ್ಯ ಲಕ್ಷಣವೆಂದರೆ, ಜಾತ್ಯಾತೀತತೆ. ಅದು ನಮ್ಮ ಪ್ರಜಾತಂತ್ರದ ಕಟ್ಟಡದ ಆಧಾರ ಸ್ಥಂಭ. ಜಾತ್ಯಾತೀತ ಪದವನ್ನು ತೆಗೆದುಹಾಕಬೇಕು ಎನ್ನುವ ಪ್ರಧಾನಿಯ ನಡೆಯನ್ನು ಏನೆಂದು ಕರೆಯಬೇಕು. ಬಿಜೆಪಿಯ ನಾನ್ನೂರು ಸಂಸದರು ಆಯ್ಕೆಯಾಗಿದ್ದರೆ ಸಂವಿಧಾನ ಉಳಿಯುತ್ತಿತ್ತೇ ಯೋಚಿಸಿ. ಇಲ್ಲಿ ಸಾರ್ವಬೌಮರು ಸರ್ಕಾರ ನಡೆಸುತ್ತಿಲ್ಲ. ಜನ ಜಾಗೃತಗೊಂಡಂತೆ ಇದು ನಡೆಯುವುದಿಲ್ಲ. ನಿಜವಾದ ದೇಶದ್ರೋಹಿಗಳಿಗೆ ಶಿಕ್ಷಿಸಿ ಸಂವಿಧಾನ ಉಳಿಸಿಕೊಳ್ಳಬೇಕಿದೆ ಎಂದು ಡಾ. ಷರೀಫಾ ಹೇಳಿದರು.

ಭಾರೀ ನಿರುದ್ಯೋಗವನ್ನು ಎದುರಿಸುವ ಈ ಪರಿ! ಉದ್ಯೋಗಾವಕಾಶ ನಿರ್ಮಾಣ ಯೋಜನೆಗೇ ಕತ್ತರಿ!!

ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಯೊಂದು ಕುಟುಂಬಕ್ಕೆ ಕನಿಷ್ಟ 100 ದಿನಗಳ ಉದ್ಯೋಗಾವಕಾಶಗಳನ್ನು ನಿರ್ಮಿಸಿ, ಅಲ್ಲಿನ ಜನರ ಬವಣೆಗಳನ್ನು ಸ್ವಲ್ಪವಾದರೂ ತಗ್ಗಿಸುವ ಕಾನೂನಾತ್ಮಕ ಖಾತ್ರಿ ನೀಡುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗ) 100 ದಿನಗಳ ಕೆಲಸದ ಖಾತರಿಯನ್ನು ಈಡೇರಿಸುತ್ತಿಲ್ಲ ಮಾತ್ರವಲ್ಲ, ಮಾಡಿದ ಕೆಲಸಕ್ಕೂ ಕೂಲಿ ಕೊಡಲು ಬೇಕಾಗುವ ಹಣವನ್ನು ಕೂಡ ಕೇಂದ್ರ ಸರಕಾರ ಕೊಟ್ಟಿಲ್ಲ ಎಂದು ಈ ವಾರ ಪತ್ರಿಕೆಗಳಲ್ಲಿ ವರದಿಯಾಗಿದೆ.

2024–25ರ ಅವಧಿಗೆ ರೂ. 4,315 ಕೋಟಿ ರೂ.ಗಳ ಕೊರತೆಯಿದ್ದು ಅದನ್ನು ಇನ್ನೂ ಕೊಟ್ಟಿಲ್ಲ.

ಮನರೇಗ ಕಾಯ್ದೆಯ ಪ್ರಕಾರ ದಿನಗೂಲಿಯನ್ನು ಪ್ರತಿವಾರ ಕೊಡಬೇಕು. ಇದರಲ್ಲಿ 15 ದಿನಗಳಿಗಿಂತ ಹೆಚ್ಚಿನ ವಿಳಂಬವಾಗಬಾರದು. ಆದರೆ ಕಾಯ್ದೆಯ ಈ ಅಂಶದ ಉಲ್ಲಂಘನೆ ನಡೆಯುತ್ತಲೇ ಇದೆ. ಕಳೆದ ಬಜೆಟಿನಲ್ಲಿ ಕೇವಲ 86,000 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಾಗ, ಹೆಚ್ಚುವರಿ ನೀಡಿಕೆಗೆ ಆಗ್ರಹ ಎಲ್ಲೆಡೆಗಳಿಂದ ಬಂದಿತ್ತು. ಆದರೆ ಇಂತಹ ಆಗ್ರಹ ಬಂದಾಗಲೆಲ್ಲ ಮೋದಿ ಸರಕಾರ ಇದೊಂದು ಬೇಡಿಕೆ ಚಾಲಿತ ಯೋಜನೆ, ಆದ್ದರಿಂದ ಅಗತ್ಯ ಬಿದ್ದಾಗಲೆಲ್ಲ ಹಣವನ್ನು ನೀಡಲಾಗುತ್ತದೆ ಎಂದು ತಳ್ಳಿ ಹಾಕುತ್ತ ಬಂದಿದೆ.

ಈ ಯೋಜನೆಯಲ್ಲಿ ನೋಂದಾಯಿಸಿಕೊಂಡಿರುವ ಬಡ ಕೂಲಿಕಾರರಿಗೆ ಅವರು ಮಾಡಿದ ಕೆಲಸಕ್ಕೆ ಕೂಲಿ ಕೊಡಲು ಬೇಕಾದ ಹಣವನ್ನು ಕೊಟ್ಟಿಲ್ಲ ಮಾತ್ರವಲ್ಲ, ಈ ಕಾಮಗಾರಿಗಳಿಗೆ ಬೇಕಾಗುವ ಸಾಮಗ್ರಿಗಳಿಗೆ ಕೇಂದ್ರ ಸರಕಾರ ಕೊಡಬೇಕಾದ ಹಣದಲ್ಲಿಯೂ 5,715 ಕೋಟಿ ರೂ.ಗಳನ್ನು ಬಾಕಿ ಇಟ್ಟುಕೊಂಡಿದೆ ಎಂದು ವರದಿಯಾಗಿದೆ.

ಸಾಮಗ್ರಿಗಳಿಗೆ ಬೇಕಾದ ಹಣವನ್ನು ಕೊಡದ್ದರಿಂದ ಕೆಲಸಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಪೂರೈಕೆ ವಿಳಂಬವಾಗುತ್ತದೆ, ಅದರೊಂದಿಗೆ ಕೂಲಿ ಪಾವತಿಯಲ್ಲಿ ಕೂಡ ವಿಪರೀತ ವಿಳಂಬವು ಈ ಯೋಜನೆಯ ಅಡಿಯಲ್ಲಿ ಕೆಲಸಕ್ಕೆ ಬೇಡಿಕೆಯನ್ನು ತಗ್ಗಿಸುವ ಪರಿಣಾಮ ಬೀರುತ್ತದೆ ಎಂದು ಪರಿಣಿತರು ಮತ್ತು ಈ ಕ್ಷೇತ್ರದಲಿರುವ ಸಾಮಾಜಿಕ ಕಾರ್ಯಕರ್ತರು ಹೇಳುತ್ತಾರೆ.

ಗ್ರಾಮೀಣಾಭಿವೃದ್ಧಿ ಕುರಿತ ಸಂಸದೀಯ ಸ್ಥಾಯೀ ಸಮಿತಿ ಕೂಡ ಫೆಬ್ರವರಿ 2024ರಲ್ಲಿ ಸಲ್ಲಿಸಿದ ವರದಿಯಲ್ಲಿ ಬಜೆಟಿನಲ್ಲಿ ಅಗತ್ಯಕ್ಕಿಂತ ಕಡಿಮೆ ಹಣ ನೀಡಿಕೆಯು ಬೇಡಿಕೆಯನ್ನು ಕೃತಕವಾಗಿ ತಗ್ಗಿಸುವ ಪರಿಣಾಮ ಬೀರುತ್ತದೆ ಎಂದಿದೆ ಎಂದೂ ವರದಿಯಾಗಿದೆ.

ಮುಂದುವರೆದು ಅದು "ಬಜೆಟ್ ಅಂದಾಜಿನ ಹಂತದಲ್ಲೇ ಹಣನೀಡಿಕೆಯನ್ನು ಕಡಿತ ಮಾಡುವುದು ಸರಿಯಾದ ಸಮಯದಲಿ ಕೂಲಿ ನೀಡಿಕೆ, ಸಾಮಗ್ರಿಗಳ ಪೂರೈಕೆ ಮುಂತಾದವುಗಳ ಮೇಲೂ ಪರಿಣಾಮ ಬೀರುತ್ತದೆ. ಇದು ಈ ಯೋಜನೆಯ ಪ್ರಗತಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಬುಡಮಟ್ಟದಲ್ಲಿ ಮನರೇಗದ ಸುಲಲಿತ ಜಾರಿಗೆ ಇಂತಹ ಕೊರತೆ ದೊಡ್ಡ ಅಡ್ಡಿ" ಎಂದೂ ಸಂಸದೀಯ ಸ್ಥಾಯಿ ಸಮಿತಿಯ ವರದಿ ಹೇಳಿದೆ (ದಿ ಹಿಂದು, ಜನವರಿ 27)

ಬಹುಶಃ ಸರಕಾರದ ಉದ್ದೇಶವೂ ಅದೇ ಆಗಿರಬಹುದೇ ಎಂಬ ಸಂದೇಹವೂ ಮೂಡದಿರದು. ಏಕೆಂದರೆ, ಯುಪಿಎ–1 ಸರಕಾರದ ಅಡಿಯಲ್ಲಿ ಎಡಪಕ್ಷಗಳು ಮತ್ತು ಇತರ ಪ್ರಗತಿಪರರ ಒತ್ತಡದಿಂದ ರೂಪುಗೊಂಡು ಜಾರಿಗೊಂಡ ಈ ಹಕ್ಕು–ಆಧಾರಿತ ಯೋಜನೆಯ ಬಗ್ಗೆ ವೈಷಮ್ಯವನ್ನು ಸ್ವತಃ ಪ್ರಧಾನ ಮಂತ್ರಿಗಳೂ ಸೇರಿದಂತೆ ಆಳುವ ಪಕ್ಷದ ಮುಖಂಡರು ಪ್ರದರ್ಶಿಸುತ್ತಲೇ ಬಂದಿದ್ದಾರೆ.

ಮೋದಿ ನೇತೃತ್ವದ ಸರಕಾರ ಬಂದಂದಿನಿಂದ ಇದಕ್ಕೆ ಬಜೆಟ್ ನೀಡಿಕೆಯ ಪ್ರಮಾಣ ಸತತವಾಗಿ ಕಡಿಮೆಯಾಗುತ್ತಲೇ ಬಂದಿದೆ. ಕಳೆದ 7 ವರ್ಷಗಳ ಬಜೆಟುಗಳಲ್ಲಿ ಮನರೇಗಕ್ಕೆ ಒಟ್ಟು ಬಜೆಟ್ ಮೊತ್ತದಲ್ಲಿ ನೀಡಿರುವ ಹಣದ ಪ್ರಮಾಣ ಹೀಗಿದೆ:

ಹಣಕಾಸು ವರ್ಷ	% ಪ್ರಮಾಣ
2018–19	2.67
2019–20	2.67
2020–21	3.17*
2021–22	2.60
2022–23	2.17
2023–24	1.92
2024–25	1.78

2020–21ರಲ್ಲಿ ಮೊದಲಿಗೆ ಕೇವಲ 61,500 ಕೋಟಿ ರೂ.ಗಳನ್ನು ಮಾತ್ರ, ಅಂದರೆ ಒಟ್ಟು ಬಜೆಟ್ ಮೊತ್ತದ ಶೇ.1.75ರಷ್ಟು ಮಾತ್ರ ನೀಡಲಾಗಿತ್ತು. ಆದರೆ ಕೊವಿಡ್ ಲಾಕ್‌ಡೌನ್ ಗ್ರಾಮೀಣ ಪ್ರದೇಶಗಳತ್ತ ವಿರುದ್ಧ ವಲಸೆಯನ್ನು ಸೃಷ್ಟಿಸಿದ್ದರಿಂದಾಗಿ ಸರಕಾರ



ಇನ್ನೂ 50,000 ಕೋಟಿ ರೂ.ಗಳನ್ನು ನೀಡಲೇಬೇಕಾಗಿ ಬಂತು. ಲಾಕ್‌ಡೌನ್‌ನಿಂದ ತತ್ತರಿಸಿ ಹೋದ ಜನಗಳಿಗೆ ಸ್ವಲ್ಪವಾದರೂ ಪರಿಹಾರ ದೊರೆಯುವಂತಾದ್ದು ದೇಶದ ತೀವ್ರ ನಿರುದ್ಯೋಗದ ಸಂದರ್ಭದಲ್ಲಿ ಮನರೇಗದ ನಿಜವಾದ ಮಹತ್ವವನ್ನೂ ಅದರ ಬಗ್ಗೆ ಸಂದೇಹ ಇದ್ದವರಿಗೂ ಮನಗಾಣಿಸಿತು, ನಿಜ, ಆಳುವವರನ್ನು ಬಿಟ್ಟು..

ಅಮೃತ ಕಾಲವಿದು....

ಸಾಮಾಜಿಕ ವಲಯದ ಎಲ್ಲ ಬಾಬ್ತುಗಳಲ್ಲಿಯೂ ಸತತ ಕಡಿತ

ಬಜೆಟ್ ಕಡಿತ ಕೇವಲ ಮನರೇಗಕ್ಕೆ ಸೀಮಿತವಾಗಿಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಬಜೆಟ್ ನೀಡಿಕೆಯ ಪ್ರಮಾಣ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಬಜೆಟ್ ಮೊತ್ತದ ಶೇ. 6ರಷ್ಟನ್ನು ದಾಟಿಲ್ಲ. ಆರೋಗ್ಯ, ಶಿಕ್ಷಣ ಸೇರಿದಂತೆ ಸಾಮಾಜಿಕ ವಲಯದ ಇತರ ಎಲ್ಲ ರಂಗಗಳಲ್ಲಿಯೂ ಬಜೆಟ್ ನೀಡಿಕೆಯಲ್ಲಿ ಸತತ ಕಡಿತ ಕಂಡುಬಂದಿದೆ ಎಂದು ಅಂಕಿ–ಅಂಶಗಳು ಹೇಳುತ್ತವೆ (ಇನ್ನಷ್ಟು ವಿವರಗಳಿಗೆ ನೋಡಿ: ಜನವರಿ 28ರಂದು 'ದಿ ಹಿಂದೂ'ನಲ್ಲಿ ಪ್ರಕಟವಾದ 'ಡಾಟಾ ಪಾಯಿಂಟ್').

ಬಾಬ್ತು	2018–19	2024–25
ಗ್ರಾಮೀಣ ಅಭಿವೃದ್ಧಿ	6.3%	5.51%
ಸಾಮಾಜಿಕ ಕಲ್ಯಾಣ	1.75%	1.17%
ಆರೋಗ್ಯ	2.47%	1.85%
ಶಾಲಾ ಶಿಕ್ಷಣ	2.18%	1.51%
ಉನ್ನತ ಶಿಕ್ಷಣ	1.57%	0.99%

ವಿಶ್ವಗುರುವಿನ "ತಾರೀಫ್ ಪೆ ತಾರಿಫ್'(ಪ್ರಶಂಸೆ), ಮತ್ತು 'ಮಗ' ವೀರನ 'ಟ್ಯಾರಿಫ್–ಟ್ಯಾರಿಫ್'(ಸುಂಕ ಪಟ್ಟಿ)

ಜನವರಿ 27ರಂದು ನಮ್ಮ ಪ್ರಧಾನಿಗಳು ಯುಎಸ್ ಅಧ್ಯಕ್ಷ ಟ್ರಂಪ್‌ರೊಡನೆ ದೂರವಾಣಿ ಸಂವಾದ ನಡೆಸಿದರು. ಆ ಸಂವಾದದಲ್ಲಿ ತಾನು ಟ್ರಂಪ್‌ರನ್ನು ಅವರ 'ಚಾರಿತ್ರಿಕ ಎರಡನೇ ಅವಧಿ' ಕುರಿತು ಅಭಿನಂದಿಸಿದೆ ಮತ್ತು ಒಂದು ಪರಸ್ಪರ ಪ್ರಯೋಜನಕಾರಿ ಮತ್ತು ವಿಶ್ವಾಸದ ಸಂಬಂಧಗಳಿಗೆ ನಾವು ಕಟಿಬದ್ಧರಾಗಿದ್ದೇವೆ ಎಂದೆ ಎಂದು ಪ್ರಧಾನಿಗಳು ಹೇಳಿದರಂತೆ. ಟ್ರಂಪ್ 'ಜಾಗತಿಕ ಶಾಂತಿ' ಮತ್ತು 'ಭದ್ರತೆ'ಗೆ ಕೆಲಸ ಮಾಡುವುದಾಗಿ ಒಪ್ಪಿಕೊಂಡರು ಎಂದೂ ಪ್ರಧಾನಿಗಳು ಹೇಳಿದ್ದಾರಂತೆ. ನಮ್ಮ ಸಂಬಂಧಗಳನ್ನು 'ಆಳಗೊಳಿಸಲು' ಫೆಬ್ರವರಿಯಲ್ಲಿ ನಮ್ಮ ಪ್ರಧಾನಿಗಳು ವಾಶಿಂಗ್ಟನ್‌ಗೆ ಭೇಟಿ ನೀಡಲಿದ್ದಾರೆ ಎಂದೂ ಪ್ರಕಟಿಸಲಾಗಿದೆ.

ಇದು ಯಾವ ರೀತಿಯ "ಆಳ" ಎಂಬುದು ಕೂಡ ಬೇಗನೇ ಸ್ಪಷ್ಟವಾಯಿತು. ಏಕೆಂದರೆ ಈ ಸಂವಾದ ನಡೆದ ಬೆನ್ನಲ್ಲೇ ಅಧ್ಯಕ್ಷ ಟ್ರಂಪ್ ಅವರು ಇದಕ್ಕೆ ಮತ್ತೊಂದು ಆಯಾಮವನ್ನೂ ಸೇರಿಸಿದರು ಎಂದೂ ಅವೇ ಪತ್ರಿಕೆಗಳಲ್ಲಿ ವರದಿಯಾಗಿದೆ. ಪ್ರಮುಖ ದೇಶಗಳೊಂದಿಗೆ ವ್ಯಾಪಾರ ಸಂಬಂಧಗಳಲ್ಲಿ 'ಅಮೆರಿಕಾ ಮೊದಲು' ಧೋರಣೆಯನ್ನು ಅನುಸರಿಸಬೇಕು ಎಂದು ಅವರು ಕರೆ ನೀಡುತ್ತ, ಆ ದೇಶಗಳ ಮೇಲೆ 'ಟ್ಯಾರೀಫ್'(ಆಮದುಸುಂಕ)ಗಳನ್ನು ಹಾಕುತ್ತೇವೆ ಎಂದೂ ಹೇಳಿದರು. ಈ ಸಂದರ್ಭದಲ್ಲಿ ಅವರು ಉಲ್ಲೇಖಿಸಿದ ದೇಶಗಳಲ್ಲಿ ಚೀನಾ ಮಾತ್ರವಲ್ಲ, ಬ್ರೆಝಿಲ್ ಮತ್ತು ಭಾರತವೂ ಇದೆ ಎಂಬುದು ಗಮನಾರ್ಹ.

ನವೆಂಬರಿನಲ್ಲಿ ಟ್ರಂಪ್ ಯುಎಸ್ ಅಧ್ಯಕ್ಷರ ಚುನಾವಣೆಯಲ್ಲಿ ಗೆದ್ದಾಗ ನಮ್ಮ ಆಳುವ ಪಕ್ಷದ ಮುಖಂಡರ ಮತ್ತು ಅವರ ಬಂಟರ ಹರ್ಷ ಎದ್ದು ಕಂಡಿತ್ತು. ಅವರ ಪ್ರಮಾಣವಚನ ಸಮಾರಂಭಕ್ಕೆ ಚೀನಾದ ಪ್ರಧಾನಿಗಳನ್ನು ಮಾತ್ರವಲ್ಲ, ಯುರೋಪಿನ ಬಲಪಂಥೀಯ ಪ್ರಧಾನಿ/ಅಧ್ಯಕ್ಷರುಗಳನ್ನು, ರಾಜಕೀಯ ಮುಖಂಡರನ್ನು ಕೂಡ ಆಹ್ವಾನಿಸಿದರೂ, ಅವರ ಪರಮಮಿತ್ರರಾದ ಭಾರತದ ಪ್ರಧಾನಿಯನ್ನು ಆಹ್ವಾನಿಸಲಿಲ್ಲ ಎಂದು ಖಿನ್ನರಾದರೂ, ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲೆಂಡಿನ 'ಉದಾರಪಂಥೀಯ' ರಾಜಕೀಯ ಮುಖಂಡರನ್ನು ಆಹ್ವಾನಿಸಲಿಲ್ಲ ಎಂದು ನಮ್ಮ ಬಲಪಂಥೀಯ 'ಥಿಂಕ್ ಟ್ಯಾಂಕ್'ಗಳು ಇದ್ದುದರಲ್ಲೇ ಸಂತೋಷ ಪಟ್ಟರು.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ


ಟ್ರಂಪ್‌ರ ಅಜೆಂಡಾ ಮತ್ತು ನಮ್ಮ ಆಳುವ ಮಂದಿಯ ಅಜೆಂಡಾದಲ್ಲಿ ಬಹಳಷ್ಟು ಸಾಮ್ಯತೆಗಳಿದ್ದರೂ, ಈಗ ಟ್ರಂಪ್‌ರ ಅಜೆಂಡಾ ಒಂದೊಂದಾಗಿ ಅನಾವರಣಗೊಳ್ಳುತ್ತಿರುವಂತೆ ನಮ್ಮ ಆಳುವ ಮಂದಿ ಮತ್ತು ಅವರ ಬಂಟರು ಕಸಿವಿಸಿಗೊಳ್ಳುತ್ತಿರುವುದೂ ಅಲ್ಲಲ್ಲಿ ಕಾಣ ಬರುತ್ತಿದೆ. ಪ್ರಧಾನಿಗಳ ವಾಶಿಂಗ್ಟನ್ ಭೇಟಿ ಅದನ್ನು ಶಮನಗೊಳಿಸಬಹುದೇ?

ಅಥವ ಟ್ರಂಪ್‌ಗೆ 'ಐತಿಹಾಸಿಕ ವಿಜಯ' ಗಳಿಸಿಕೊಟ್ಟಿರುವ 'ಮೇಕ್ ಅಮೆರಿಕಾ ಗ್ರೇಟ್ ಅಗೇನ್'(ಮಗ) ಅಂದರೆ ಅಮೆರಿಕಾವನ್ನು ಮತ್ತೆ ಮಹಾನ್‌ಗೊಳಿಸಿ ಎಂಬುದು ನಿಜವಾಗಿ 'ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಮತ್ತೆ ಮಹಾನ್‌ಗೊಳಿಸಿ' ಎಂಬ ಸ್ವರೂಪ ಪಡೆಯುತ್ತಿದ್ದರೂ, ಹಿಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಾಲ ಹಿಡಿದಂತೆ, ಈಗ ಅಮೆರಿಕನ್ ಸಾಮ್ರಾಜ್ಯಶಾಹಿಯ ಬಾಲ ಹಿಡಿದು ಅದನ್ನು 'ಮತ್ತೆ ಮಹಾನ್'ಗೊಳಿಸುವಲ್ಲಿ ನೆರವಾಗಬಹುದೇ ಎಂಬ ಪ್ರಶ್ನೆ ದೇಶದ ಪ್ರಗತಿಪರ ರಾಜಕೀಯ ಶಕ್ತಿಗಳ ಮುಂದೆ ಮಾತ್ರವಲ್ಲ, ದೇಶಪ್ರೇಮಿಗಳ ಮುಂದೆಯೂ ಎದ್ದು ಬಂದಿದೆ.

18,000 ದಾಖಲೆಗಳಿಲ್ಲದ ಭಾರತೀಯ ವಲಸೆಗಾರರನ್ನು ಭಾರತಕ್ಕೆ ಕಳಿಸಲಾಗುವುದು–ಟ್ರಂಪ್



ಯುಎಸ್‌ನಿಂದ ಕಾನೂನುಬಾಹಿರ ಎನ್‌ಆರ್‌ಐ ವಲಸೆಗಾರರು ಮರಳಿರುವುದನ್ನು ಬಿಂಬಿಸುವ ಒಂದು ಗಣತಂತ್ರ ದಿನದ ಸ್ಥಬ್ಧಚಿತ್ರ
ವ್ಯಂಗ್ಯಚಿತ್ರ ಕೃಪೆ: ಪೊನ್ನಪ್ಪ @ ಎಕ್ಸ್



ಟ್ರಂಪ್ ಹೇಗೆ ಯುಎಸ್ ಸಂವಿಧಾನವನ್ನು ಅಸ್ತವ್ಯಸ್ತಗೊಳಿಸುತ್ತಾರೆ ಎಂದು ಸೂಕ್ಷ್ಮವಾಗಿ ನೋಡುತ್ತಿರಬೇಕು, ಸ್ಪೂರ್ತಿಗಾಗಿ– ಎಂದು ಮಂತ್ರಿಗಳು ಬಯಸುತ್ತಾರೆ
ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಇಂದಿನ ಭಾರತದಲ್ಲಿ ಬಳಕೆ-ಆಧಾರಿತ ಜಿಡಿಪಿ ಬೆಳವಣಿಗೆ ಸಾಧ್ಯವೇ?



ರಿಸರ್ವ್ ಬ್ಯಾಂಕ್ ಸೇರಿದಂತೆ ಆಳುವ ವ್ಯವಸ್ಥೆಯ ಅರ್ಥಶಾಸ್ತ್ರಜ್ಞರು ಈಗ ದೇಶ ಜಿಡಿಪಿ ಬೆಳವಣಿಗೆಗೆ ರಫ್ತುಗಳನ್ನು ಆಧರಿಸುವ ಬದಲು ಸರಕುಗಳ ಬಳಕೆಯನ್ನು ಹೆಚ್ಚಿಸುವ ಕಾರ್ಯತಂತ್ರದತ್ತ ಹೊರಳಬೇಕು ಎಂದು ಹೇಳುತ್ತಿದ್ದಾರೆ. ಹೀಗೆ ಹೇಳುವಾಗ ವಾಸ್ತವವಾಗಿ ಅವರ ಕಾಳಜಿ ನಗರ ಮಧ್ಯಮ ವರ್ಗದ ಬಳಕೆಯ ಬಗ್ಗೆಯೇ ಹೊರತು, ದುಡಿಯುವ ಜನರ ಬಳಕೆಯ ಬಗ್ಗೆ ಅಲ್ಲ ಎಂಬುದು ಸ್ಪಷ್ಟ. ಆದರೆ ಇದು ನವ ಉದಾರವಾದಿ ಅರ್ಥವ್ಯವಸ್ಥೆಯ ಕಾರ್ಯವಿಧಾನದ ಬಗ್ಗೆ ಅರಿವಿನ ತೀವ್ರ ಕೊರತೆಯನ್ನು ತೋರಿಸುತ್ತದೆ. ಏಕೆಂದರೆ, ನಿಜವಾಗಿಯೂ ಬಳಕೆ-ಆಧಾರಿತ ಬೆಳವಣಿಗೆ ನಡೆಯಬೇಕಾದರೆ, ಅದು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳ ಮೂಲಕ ಅಥವ ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಮೂಲಕ ಹೆಚ್ಚಿನ ಸಂಪನ್ಮೂಲಗಳನ್ನು ಎತ್ತುವ ಕ್ರಮಗಳನ್ನು ಕೈಗೊಂಡರೆ ಮಾತ್ರವೇ ಸಾಧ್ಯ. ನವ-ಉದಾರವಾದಿ ಆಳ್ವಿಕೆ ಇವೆರಡಕ್ಕೂ ಅವಕಾಶ ಕೊಡುವುದಿಲ್ಲ. ಆದ್ದರಿಂದ ಈಗ ನವ-ಉದಾರವಾದಿ ವ್ಯವಸ್ಥೆಗೆ ಕಟ್ಟುಬಿದ್ದಿರುವ ಭಾರತದಲ್ಲಿ ಇಂತಹ ಬಳಕೆ-ಆಧಾರಿತ ಬೆಳವಣಿಗೆ ಸಾಧ್ಯವಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್



ಕುಂಠಿತಗೊಂಡಿರುವ ಭಾರತದ ಅರ್ಥವ್ಯವಸ್ಥೆಯ ಬೆಳವಣಿಗೆ ದರವನ್ನು ಪುನಶ್ಚೇತನಗೊಳಿಸುವ ಒಂದು ಮಾರ್ಗವಾಗಿ ಆಂತರಿಕ ಬಳಕೆಗೆ ಉತ್ತೇಜನ ನೀಡಬೇಕು ಎಂದು ಕೆಲವು ಸಲಹಾ ಸಂಸ್ಥೆಗಳಿಂದ ಹಿಡಿದು ಹಣಕಾಸು ಪತ್ರಿಕೆಗಳವರೆಗೆ ಆಳುವ ವ್ಯವಸ್ಥೆಯ ದನಿಗಳು ಸಾಮೂಹಿಕವಾಗಿ ಒತ್ತಾಯಿಸುತ್ತಿವೆ. ಈ ಮೇಳ ಗಾನಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ದನಿಗೂಡಿಸಿದೆ. ಅರ್ಥವ್ಯವಸ್ಥೆಯಲ್ಲಿ ಬಳಕೆಗೆ ಉತ್ತೇಜನ ನೀಡುವ ಸಲುವಾಗಿ "ಉದ್ಯಮಿಗಳ ಸಹಜ ಹುಮ್ಮಸ್ಸನ್ನು ಪುನಶ್ಚೇತನಗೊಳಿಸಬೇಕು" ಎಂದು ರಿಸರ್ವ್ ಬ್ಯಾಂಕ್ ತನ್ನ ಇತ್ತೀಚಿನ ಬುಲೆಟಿನ್‌ನಲ್ಲಿ ಹೇಳಿದೆ.

ಈ ಎಲ್ಲರೂ ಹೊಂದಿರುವ ಕಾಳಜಿಯ ಬಗ್ಗೆ ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ: ಮೊದಲನೆಯದು, 2024-25ರಲ್ಲಿ ಶೇ.7ರಷ್ಟು ಬೆಳವಣಿಗೆಯಾಗಲಿದೆ ಎಂದು ಮುನ್ಸೂಚನೆಯಾಗಿ ಹೇಳಲಾಗಿತ್ತು. ಅದೀಗ ಕೇವಲ ಶೇ. 0.5ರಷ್ಟು ಕಡಿಮೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇದೇನೂ ಒಂದು ಆತಂಕದ ವಿಷಯವೇ ಅಲ್ಲ. ಏಕೆಂದರೆ, ಶೇ. 6.5ರ ಬೆಳವಣಿಗೆಯು ಯಾವುದೇ ಮಾನದಂಡದ ಪ್ರಕಾರ ನೋಡಿದರೂ ಕಳಪೆಯೇನಲ್ಲ ಮತ್ತು ಅದು "ಉದ್ಯಮಿಗಳ ಸಹಜ ಹುಮ್ಮಸ್ಸನ್ನು" ಕುಂದಿಸುತ್ತದೆಂಬ ಮಟ್ಟಿಗೆ "ವ್ಯವಸ್ಥೆಯ" ಅರ್ಥಶಾಸ್ತ್ರಜ್ಞರನ್ನು ಚಿಂತೆಗೀಡುಮಾಡಬೇಕಾದ ವಿಷಯವಲ್ಲ. ಆದ್ದರಿಂದ, ಈ ಕಾಳಜಿಯು, ಜಿಡಿಪಿಯ ಪರಿಕಲ್ಪನೆಯೇ ದೋಷಪೂರಿತವಾಗಿದ್ದರೂ ಸಹ, ಅದರ ಪರಿಧಿಯೊಳಗೇ ನೋಡಿದರೂ ಸಹ, ಬೆಳವಣಿಗೆಯ ದರದ ಬಗ್ಗೆ ಮಾಡಿರುವ ಈ ಅಂದಾಜೇ ಒಂದು ಅತಿ-ಅಂದಾಜು ಎಂಬುದನ್ನು ಮತ್ತು ಎರಡನೆಯದಾಗಿ, ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿರುವಂತಯೇ, ಅದರ ಕಾಳಜಿ ನಗರ ಮಧ್ಯಮ ವರ್ಗದ ಬಳಕೆಯ ಬಗ್ಗೆಯೇ ಹೊರತು ದುಡಿಯುವ ಜನರ ಬಳಕೆಯ ಬಗ್ಗೆ ಅಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಅದು ಬಳಕೆಯ ಉತ್ತೇಜನದ ಬಗ್ಗೆ ಹೇಳುತ್ತಿರುವುದು ನಗರ ಮಧ್ಯಮ ವರ್ಗದ ಬಳಕೆಯ ಬಗ್ಗೆ ಎಂಬುದನ್ನು ಈ ಕೆಳಗಿನ ವಿವರಗಳು ಸ್ಪಷ್ಟಪಡಿಸುತ್ತವೆ.

ದುಡಿಯುವ ಬಡವರ ಬಳಕೆಯನ್ನು ಹೆಚ್ಚಿಸುವ ಬಗ್ಗೆ ಮಾತನಾಡುತ್ತಿಲ್ಲ

ಒಟ್ಟು ಬೇಡಿಕೆಯನ್ನು ದುಡಿಯುವ ಬಡಜನರ ಬಳಕೆಯ ಮೂಲಕ ಹೆಚ್ಚಿಸುವುದು ಒಂದು ಉದ್ದೇಶವಾಗಿದ್ದರೆ, ಆಗ ಅದನ್ನು ಸಾಧಿಸುವ ಸ್ಪಷ್ಟ ಮಾರ್ಗವೆಂದರೆ ಎಲ್ಲರಿಗೂ ಕೂಲಿ ದರವನ್ನು ಹೆಚ್ಚಿಸುವ ಮೂಲಕ ಮತ್ತು ಶಾಸನಬದ್ಧ ಕನಿಷ್ಠ ಕೂಲಿ ದರವನ್ನು ಏರಿಸುವ ಮೂಲಕ ಮಾಡಬಹುದು. ಆದರೆ ಈ ನಿಟ್ಟಿನಲ್ಲಿ ಯಾರೂ ಮಾತನಾಡುತ್ತಿಲ್ಲ. ಲಾರ್ಸೆನ್ ಮತ್ತು ಟೂಬ್ರೊ ಅಧ್ಯಕ್ಷರು ತದ್ವಿರುದ್ಧ ದಿಕ್ಕಿನಲ್ಲಿ ಮಾತನಾಡುತ್ತಾರೆ. ಕೆಲಸದ ಅವಧಿಯನ್ನು ವಾರಕ್ಕೆ 90 ಘಂಟೆಗಳಿಗೆ ಏರಿಸಬೇಕು ಎಂಬ ಅವರ ಅಭಿಪ್ರಾಯದ ಬಗ್ಗೆ ಬೇರೆ ಯಾವುದೇ "ಉದ್ಯಮಿ ನಾಯಕ"ನೂ ಭಿನ್ನಮತವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿಲ್ಲ! ಇದು, ಭಾರತದ ಕಾರ್ಖಾನೆಗಳನ್ನು ಕೂಡಿಹಾಕಿದ ಕೈದಿಗಳಿಂದ ಸಾಯುವವರೆಗೆ ಕೆಲಸ ಮಾಡಿಸುತ್ತಿದ್ದ ನಾಜಿ ಶಿಬಿರಗಳಿಗೆ ಹೋಲುವಂತೆ ಮಾಡುತ್ತದೆ. ಕೆಲಸಗಾರರು ತಮ್ಮ ಹೆಂಡತಿಯರನ್ನು ದಿಟ್ಟಿಸುತ್ತಾ ಮನೆಯಲ್ಲಿರುವುದಕ್ಕಿಂತ ಕೆಲಸ ಮಾಡುವುದು ಉತ್ತಮ ಮತ್ತು ಆರಾಮಾಗಿರುವುದರ ಬದಲು ಕೆಲಸದಲ್ಲಿ ಹೆಚ್ಚು ತೊಡಗಿಕೊಳ್ಳುವುದು ಜೀವನವನ್ನು ಶ್ರೀಮಂತಗೊಳಿಸುತ್ತದೆ ಎಂಬ ಅವರ ವಾದಕ್ಕೂ ಮತ್ತು ಪ್ರಧಾನವಾಗಿ ಯಹೂದಿಯರನ್ನು, ರಷ್ಯನ್ ಮತ್ತು ಇತರ ಕೆಲವು ದೇಶಗಳ ಯುದ್ಧ ಕೈದಿಗಳನ್ನು ಕೂಡಿಹಾಕಿದ ಔಸ್ವಿಟ್ಝ್ ಯಾತನಾ ಮತ್ತು ಸಾವಿನ ಶಿಬಿರದ ಕಬ್ಬಿಣದ ಪ್ರವೇಶ ದ್ವಾರದ ಮೇಲೆ ಎರಕ ಹೊಯ್ದ "ಆರ್ಬೈಟ್ ಮಾಕ್ಟ್ ಫ್ರೈ' (ಕೆಲಸವು ವ್ಯಕ್ತಿಯನ್ನು ಮುಕ್ತಗೊಳಿಸುತ್ತದೆ) ಎಂಬ ಕುಖ್ಯಾತ ಪದಪುಂಜಗಳಿಗೂ ವಿಲಕ್ಷಣ ಹೋಲಿಕೆಯಾಗುತ್ತದೆ. ಹೀಗೆ, ಭಾರತದ "ವ್ಯವಸ್ಥೆಯು" ದುಡಿಯುವ ಬಡವರ ಬಳಕೆಯನ್ನು ಹೆಚ್ಚಿಸುವ ಬಗ್ಗೆ ಮಾತನಾಡುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ನಗರಪ್ರದೇಶದ ಮಧ್ಯಮ ವರ್ಗವನ್ನು ಸಂಬಂಧಿಸಿ ಹೇಳುವುದಾದರೆ ಕೂಡ, ಅದರ ಬಳಕೆಯನ್ನು ಹೆಚ್ಚಿಸುವ ವಿಧಾನಗಳು ಆಹಾರ ಬೆಲೆ ಹಣದುಬ್ಬರವನ್ನು ತಗ್ಗಿಸುವುದರಲ್ಲಿದೆ ಎಂದು ಭಾವಿಸಿದಂತಿದೆ. ಆಹಾರ ಬೆಲೆ ಹಣದುಬ್ಬರವನ್ನು ಖಂಡಿತಾ ನಿಗ್ರಹಿಸಲೇಬೇಕು. ಆದರೆ, ಒಟ್ಟು ಬೇಡಿಕೆಯ ಮೇಲೆ ಅದರ ಪರಿಣಾಮವೇನು ಎಂಬುದೇ ಇಲ್ಲಿರುವ ಪ್ರಶ್ನೆ. ಆಹಾರ ಬೆಲೆ ಹಣದುಬ್ಬರದ ಫಲಾನುಭವಿಗಳೂ ಗ್ರಾಹಕರೇ. ಹಾಗಾದರೆ, ಆಹಾರ ಬೆಲೆ ಹಣದುಬ್ಬರದಿಂದಾಗಿ ನಗರ ಮಧ್ಯಮ ವರ್ಗದಲ್ಲಿ ಕಳೆದುಕೊಂಡ ಬಳಕೆಯ ಬೇಡಿಕೆಯು ಆಹಾರ ಬೆಲೆ ಹಣದುಬ್ಬರದ ಫಲಾನುಭವಿಗಳು ಪಡೆದ ಬಳಕೆಯ ಬೇಡಿಕೆಗಿಂತ ಹೆಚ್ಚಿನದಾಗಿತ್ತೇ? ಆಹಾರ ಬೆಲೆ ಹಣದುಬ್ಬರದಿಂದ ಲಾಭ ಪಡೆಯುವವರು, ಅದರಿಂದ ನಷ್ಟ ಅನುಭವಿಸುವ ನಗರ ಮಧ್ಯಮ ವರ್ಗದವರಿಗಿಂತ ಹೆಚ್ಚಿನ ಉಳಿತಾಯ ಅನುಪಾತವನ್ನು ಹೊಂದಿರುವುದಿಲ್ಲವಾದ್ದರಿಂದ, ಆಹಾರ ಬೆಲೆ ಹಣದುಬ್ಬರವು ರಿಸರ್ವ್ ಬ್ಯಾಂಕ್ ಮತ್ತು ಇತರರು ಭಾವಿಸುವಂತೆ ಗ್ರಾಹಕ ಸರಕುಗಳ ಬೇಡಿಕೆಯನ್ನು ಕುಗ್ಗಿಸುವುದಿಲ್ಲ. ಇದು ದುಡಿಯುವ ಜನರ (ಅವರು ತಮ್ಮ ವರಮಾನದ ಅತಿ ಕಡಿಮೆ ಭಾಗವನ್ನು ಉಳಿಸುತ್ತಾರೆ) ವರಮಾನವನ್ನುಹಿಂಡುವ ಮೂಲಕ ಅವರ ಬಳಕೆಯ ಬೇಡಿಕೆಯನ್ನು ಕುಗ್ಗಿಸುತ್ತದೆ, ನಗರ ಮಧ್ಯಮ ವರ್ಗವನ್ನು ಹಿಂಡುವ ಮೂಲಕ ಅಲ್ಲ. ಆದರೆ, ಏಕಸ್ವಾಮ್ಯ ಬಂಡವಾಳ ಉತ್ಪಾದಿತ ಸರಕುಗಳನ್ನು ಆಹಾರ ಬೆಲೆ ಹಣದುಬ್ಬರದ ಫಲಾನುಭವಿಗಳಿಗಿಂತಲೂ ಹೆಚ್ಚಾಗಿ ನಗರ ಮಧ್ಯಮ ವರ್ಗವು ಬಳಸುತ್ತದೆ. ಇದುವೇ ನಗರ ಮಧ್ಯಮ ವರ್ಗದ ಬಳಕೆಯ ಬಗ್ಗೆ ತೋರುವ ಕಾಳಜಿಯ ನಿಜ ಕಾರಣ. ಇರಲಿ, ನಾವು ಮುಂದುವರಿಯೋಣ.

ಒಂದು ಮುಕ್ತ-ವ್ಯಾಪಾರ ವ್ಯವಸ್ಥೆಯನ್ನು ಹೊಂದಿದ ನವ ಉದಾರವಾದಿ ಅರ್ಥವ್ಯವಸ್ಥೆಯಲ್ಲಿ, ರಫ್ತುಗಳ ಮೂಲಕ ಬೆಳವಣಿಗೆಗೆ ಸಾಮಾನ್ಯವಾಗಿ ಉತ್ತೇಜನ ದೊರಕುತ್ತದೆ. ಆಗೊಮ್ಮೆ ಈಗೊಮ್ಮೆ ಸ್ಥಳೀಯವಾಗಿ ಸಂಭವಿಸುವ ಆಸ್ತಿ-ಬೆಲೆ ಗುಳ್ಳೆಗಳು ಉತ್ತೇಜಿಸುವ ಒಂದು ದೊಡ್ಡ ಪ್ರಮಾಣದ ಬಳಕೆಯ ಮೂಲಕವೂ ಬೆಳವಣಿಗೆಗೆ ತುಸು ಉತ್ತೇಜನ ದೊರಕುತ್ತದೆ. ಆದರೆ, ಸಾಮಾನ್ಯವಾಗಿ ರಫ್ತು ಬೇಡಿಕೆಯ ಬೆಳವಣಿಗೆಯೇ ಅರ್ಥವ್ಯವಸ್ಥೆಯನ್ನು ಮುಂದಕ್ಕೊಯ್ಯುವ ಅಂಶವಾಗಿರುತ್ತದೆ. ಹಾಗಾಗಿ, ಈಗ ಕೇಳಲಾಗುತ್ತಿರುವುದು ಒಂದು ರಫ್ತು-ಪ್ರಧಾನ ಬೆಳವಣಿಗೆಯಿಂದ ಬಳಕೆ-ಪ್ರಧಾನ ಬೆಳವಣಿಗೆಯತ್ತ ಬದಲಾಗಬೇಕು ಎಂದು. ಸಾರಭೂತವಾಗಿ ಇದರ ಅರ್ಥ, ಬೆಳವಣಿಗೆಯನ್ನು ದೇಶೀಯ ಮಾರುಕಟ್ಟೆಗೆ ಪ್ರಾಧಾನ್ಯತೆಯ ಮೂಲಕ ಉಂಟುಮಾಡಬೇಕು ಎಂದೇ ಆಗುತ್ತದೆ. ಆದರೆ ಇದು ನವ ಉದಾರವಾದಿ ಅರ್ಥವ್ಯವಸ್ಥೆಯು ಹೊಂದಿರುವ ಮಿತಿಯೊಳಗೆ ಸಾಧ್ಯವೇ ಎಂಬುದೇ ಪ್ರಶ್ನೆ!

ಸರ್ಕಾರದ ವೆಚ್ಚದಲ್ಲಿ ಜಿಗಿತ ಅಗತ್ಯ

ಹೆಚ್ಚು ಸಾಲವು ಲಭ್ಯವಾಗುವಂತೆ ಮಾಡುವುದರಿಂದ ಅಥವಾ ಸಾಲವನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡುವುದರಿಂದ ನಗರ ಮಧ್ಯಮ ವರ್ಗದವರನ್ನೂ ಸಹ ಹೆಚ್ಚು ಬಳಸುವಂತೆ ಮಾಡಲಾಗುವುದಿಲ್ಲ. ಸುಲಭ ಸಾಲ ಲಭ್ಯತೆಯಿಂದಾಗಿ ಮಧ್ಯಮ ವರ್ಗದ ಬಳಕೆಯು ಅಲ್ಪಾವಧಿಯಲ್ಲಿ ಹೆಚ್ಚಾಗಬಹುದು. ಆದರೆ, ತಾವು ಹೆಚ್ಚು ಹೆಚ್ಚು ಸಾಲಗಾರರಾಗುವುದರಿಂದ ಮತ್ತು ತಮ್ಮ ಸಾಲದ ಹೊರೆ ಮತ್ತಷ್ಟು ಹೆಚ್ಚುವುದನ್ನು ಬಳಕೆದಾರರು ತಪ್ಪಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಈ ಉತ್ತೇಜನವು ಬಹಳ ಬೇಗ ನಿಷ್ಪ್ರಯೋಜಕವಾಗುತ್ತದೆ. ಅದೇ ರೀತಿಯಲ್ಲಿ ಆಹಾರ ಬೆಲೆ ಹಣದುಬ್ಬರವನ್ನು ತಡೆದು ನಿಲ್ಲಿಸುವ ಕ್ರಮವೂ ಬಳಕೆಗೆ ತಾತ್ಕಾಲಿಕ ಉತ್ತೇಜನವನ್ನು ನೀಡುತ್ತದೆಯಲ್ಲದೆ ಬೆಳವಣಿಗೆಗೆ ಒಂದು ಉತ್ತೇಜಕವಾಗಿ ಬಳಕೆಯ ಹೆಚ್ಚಳವನ್ನು ಮುಂದುವರಿಸಲಾರದು.

ಬಳಕೆಯು ಒಂದು ವೇಳೆ ಹೆಚ್ಚಿದರೆ ಮತ್ತು ಅದರ ಪರಿಣಾಮವಾಗಿ ವರಮಾನವೂ ಹೆಚ್ಚಿದರೆ, ಆಗ ಈ ಪ್ರಕ್ರಿಯೆಯ ಮುಂದುವರಿಯುತ್ತಲೇ ಇರುವುದನ್ನು ನಿಲ್ಲಿಸಲಾಗದು ಎಂದು ಭಾವಿಸಬಹುದು. ಆದರೆ, ಯಾವುದೇ ಅವಧಿಯಲ್ಲಿ ಯಾವುದೇ ಕಾರಣಕ್ಕಾಗಿ ಬಳಕೆಯು ಒಂದು ವೇಳೆ ಕುಸಿದರೆ, ಆಗ ಆರಂಭವಾಗುವ ಕೆಳಮುಖ ಚಲನೆಯನ್ನೂ ನಿಲ್ಲಿಸಲಾಗದು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಬಳಕೆ-ಪ್ರಧಾನ ಬೆಳವಣಿಗೆಯನ್ನು ಒಂದು ಸ್ವಾಯತ್ತ ಶಕ್ತಿಯು ಹೊರಗಿನಿಂದ ಸತತವಾಗಿ ಪೋಷಿಸುವುದು ಅಗತ್ಯವಾಗುತ್ತದೆ. ಬಳಕೆದಾರರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವ ಸರ್ಕಾರದ ವೆಚ್ಚವು ಅಂತಹ ಸ್ವಾಯತ್ತ ಶಕ್ತಿಗೆ ಒಂದು ಮಾದರಿಯಾಗುತ್ತದೆ.

ಈ ಪೋಷಣೆ ಸಂಭವಿಸಬೇಕು ಎಂದಾದರೆ, ಸರ್ಕಾರದ ವೆಚ್ಚದಲ್ಲಿ ಒಂದು ಜಿಗಿತ ಅಗತ್ಯವಾಗುತ್ತದೆ. ಆ ವೆಚ್ಚವು ಬಳಕೆದಾರರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಹಣ ವರ್ಗಾವಣೆಯ ರೂಪದಲ್ಲಿದ್ದರೂ ಸರಿಯೇ. ಆದರೆ, ಈ ಜಿಗಿತವು ಯಾವಾಗ ಸಂಭವಿಸಬಹುದು ಎಂದರೆ, ವಿತ್ತೀಯ ಕೊರತೆಯನ್ನು ವಿಸ್ತರಿಸಿದಾಗ ಅಥವಾ ತಮ್ಮ ವರಮಾನದ ಬಹು ಭಾಗವನ್ನು ಉಳಿಸುವ ವರ್ಗಗಳ ಮೇಲಿನ ತೆರಿಗೆಗಳನ್ನು ಹೆಚ್ಚಿಸಿದಾಗ ಮಾತ್ರ. ಏಕೆಂದರೆ, ಆ ಸಂದರ್ಭದಲ್ಲಿ ಮಾತ್ರವೇ ಬಳಕೆಯಲ್ಲಿ ನಿವ್ವಳ ಹೆಚ್ಚಳವಿರುತ್ತದೆ. ವಿಷಯವನ್ನು ಉದಾಹರಣೆಯ ರೂಪದಲ್ಲಿ ಹೇಳುವುದಾದರೆ, ಅಧಿಕ ವೆಚ್ಚಗಳಿಗಾಗಿ ಹಣ ಹೊಂದಿಸಿಕೊಳ್ಳುವ ಸಲುವಾಗಿ ಸರ್ಕಾರವು, ಹೆಚ್ಚು ಕಡಿಮೆ ತಮ್ಮ ಇಡೀ ವರಮಾನವನ್ನೇ ಬಳಕೆ ಮಾಡಿಕೊಳ್ಳುವ ವರ್ಗಗಳ ಮೇಲೆ ತೆರಿಗೆಗಳನ್ನು ಒಂದು ವೇಳೆ ಹೇರಿದರೆ, ಆಗ ಅವರಿಂದ ಸಂಗ್ರಹಿಸಿದ 100 ರೂಗಳ ತೆರಿಗೆಯು ಅವರ ಬಳಕೆಯನ್ನು 100 ರೂಗಳಷ್ಟು ಇಳಿಕೆ ಮಾಡುತ್ತದೆ. ಮತ್ತು ಹಣವನ್ನು ಅದೇ ವರ್ಗದ ಬಳಕೆದಾರರಿಗೆ ವರ್ಗಾವಣೆ ಮಾಡಿದಾಗ ಅವರ ಬಳಕೆಯು 100 ರೂಗಳಷ್ಟು ಹೆಚ್ಚುತ್ತದೆ. ಅಂದರೆ, ಬಳಕೆಗೆ ನಿವ್ವಳ ಸೇರ್ಪಡೆ ಇರುವುದಿಲ್ಲ. ಹಾಗಾಗಿ, ಬಳಕೆ-ಪ್ರಧಾನ ಬೆಳವಣಿಗೆಯ ಪ್ರಶ್ನೆಯೇ ಇಲ್ಲ.

ಆದ್ದರಿಂದ, ಬಳಕೆ-ಪ್ರಧಾನ ಬೆಳವಣಿಗೆಗಾಗಿ ಶ್ರೀಮಂತರ ಮೇಲೆ (ಶ್ರೀಮಂತರು ತಮ್ಮ ವರಮಾನದ ಗಣನೀಯ ಭಾಗವನ್ನು ಉಳಿತಾಯ ಮಾಡುತ್ತಾರೆ) ತೆರಿಗೆ ವಿಧಿಸುವ ಮೂಲಕ ಅಥವಾ ಬೃಹತ್ ವಿತ್ತೀಯ ಕೊರತೆಯನ್ನು ಹೊಂದುವ ಮೂಲಕ ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಸಂಗ್ರಹಿಸುವ ಒಂದು ವಿತ್ತೀಯ ನೀತಿಯನ್ನು ಹೊಂದುವುದು ಅಗತ್ಯವಾಗುತ್ತದೆ. ಆದರೆ, ನವ ಉದಾರವಾದಿ ಆಳ್ವಿಕೆಯು ಈ ಎರಡೂ ವಿಧಾನಗಳನ್ನೂ ತಳ್ಳಿಹಾಕುತ್ತದೆ. ವಿತ್ತೀಯ ಪುಟ 14 ಕ್ಕೆ

ರಾಜ್ಯವ್ಯಾಪಿ 'ಸೌಹಾರ್ದ ಸಂಕಲ್ಪ ಪ್ರತಿಜ್ಞೆ ಸ್ವೀಕಾರ'.... ಪುಟ 16 ರಿಂದ

ಕೇಂದ್ರದ ಜಯದೇವ ವೃತ್ತದಲ್ಲಿ ಸಾಹಿತಿಗಳು, ದಲಿತ, ಕಾರ್ಮಿಕ ಮಹಿಳಾ ಹಾಗೂ ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು ಸುಮಾರು 40 ಜನರು ಸೇರಿ ಸೌಹಾರ್ದ ಕಾರ್ಯಕ್ರಮ ಸಂಘಟಿಸಲಾಗಿದೆ. ಪ್ರಸಿದ್ಧ ಕವಿವಾಣಿಗಳ ಫಲಕ ಪ್ರದರ್ಶನ, ಕರಪತ್ರ ವಿತರಣೆ, ಸಭೆ, ಪ್ರತಿಜ್ಞೆ ಸ್ವೀಕಾರ ನಡೆದಿದೆ.

ಮೈಸೂರಿನಲ್ಲಿ ಜನಾಂದೋಲನಗಳ ಮಹಾಮೈತ್ರಿ, ಗಾಂಧಿ ವಿಚಾರ ಪರಿಷತ್ತು ಹಾಗೂ ಸೌಹಾರ್ದ ಕರ್ನಾಟಕವೂ ಒಳಗೊಂಡ 'ಪ್ರಗತಿಪರ ಸಂಘಟನೆಗಳ ಒಕ್ಕೂಟ'ದ ನೇತೃತ್ವದಲ್ಲಿ ಜನವರಿ 30 ರಂದು ಮೈಸೂರು ರಂಗಾಯಣದ ಆವರಣದಲ್ಲಿ ದಿನವಿಡೀ ಚಿತ್ರಕಲಾ ಸ್ಪರ್ಧೆ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳು ನಡೆದಿವೆ. 'ಜನವರಿ 30 ಕರಾಳ ಘಟನೆ' ಎಂಬ ಹೆಸರಿನ ಕಾರ್ಯಕ್ರಮವಾಗಿ ಇದು ನಡೆದಿದೆ. ಗಣನೀಯ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದಾರೆ.

ಕೊಡಗಿನ ವಿರಾಜಪೇಟೆ ತಾಲ್ಲೂಕಿನ ನೆಲ್ಲಿದಿಕೇರಿಯ ಬಸ್ ನಿಲ್ದಾಣದಲ್ಲಿ ಸುಮಾರು 45 ಜನರು ಪಾಲ್ಗೊಂಡ ಸೌಹಾರ್ದ ಕಾರ್ಯಕ್ರಮ, ಪ್ರತಿಜ್ಞೆ ಸ್ವೀಕಾರ ನಡೆದಿದೆ. ಸ್ಥಳೀಯ ಗ್ರಾಮ ಪಂಚಾಯತ್‌ನ ಚುನಾಯಿತ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಜನಚಳುವಳಿಗಳ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ರಾಯಚೂರಿನ ಅಂಬೇಡ್ಕರ್ ವೃತ್ತದಲ್ಲಿನ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ, ಸಭೆ, ಪ್ರತಿಜ್ಞೆ ಸ್ವೀಕಾರ, ಮಾನವ ಸರಪಳಿ ನಡೆದಿವೆ. ಮುಸ್ಲಿಂ, ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು, ದಲಿತ ಚಳುವಳಿ ಸೇರಿದಂತೆ ಜನಚಳುವಳಿಗಳ ಸಂಗಾತಿಗಳು ಸೇರಿ ನೂರಾರು ಜನರು ಪಾಲ್ಗೊಂಡಿದ್ದಾರೆ. ಮಾನವ ಸರಪಳಿ ರಚಿಸಿದ್ದಾರೆ.

ಯಾದಗೀರ ಜಿಲ್ಲೆ ಶಹಾಪುರದ ಬಸವೇಶ್ವರ ವೃತ್ತದಲ್ಲಿ ನಾನಾ ಪ್ರಗತಿಪರ ಸಾಹಿತಿ-ಚಿಂತಕರು ಜನ ಚಳುವಳಿಗಳ ಮುಖಂಡರು ಪಾಲ್ಗೊಂಡ ಸೌಹಾರ್ದ ಸಭೆ, ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮ ನಡೆದಿದೆ.

ವಕ್ಫ್ ಮಸೂದೆ: ಜೆಪಿಸಿ ಅಧ್ಯಕ್ಷರ ಲಜ್ಜೆಗೆಟ್ಟ ಏಕಪಕ್ಷೀಯ ಕ್ರಮ

ವಕ್ಫ್ ಮಸೂದೆಯ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯ ಅಧ್ಯಕ್ಷರು ಸರ್ಕಾರದ ಅಭಿಪ್ರಾಯಗಳನ್ನು ವಿರೋಧಿಸುತ್ತಿದ್ದ ವಿರೋಧ ಪಕ್ಷಗಳಿಗೆ ಸೇರಿದ ಜೆಪಿಸಿಯ ಎಲ್ಲಾ ಸದಸ್ಯರನ್ನು ಅಮಾನತುಗೊಳಿಸಿರುವ ಕ್ರಮಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ಸಮಿತಿಯ ಅಧ್ಯಕ್ಷರು ಈ ಕ್ರಮಕ್ಕೆ ಒಂದು ಕ್ಷುಲ್ಲಕ ಕಾರಣವನ್ನು ಆರಿಸಿಕೊಂಡಿದ್ದಾರೆ ಎಂದು ಅದು ಹೇಳಿದೆ.

ಸಮಿತಿ ವ್ಯವಸ್ಥೆಯ ಮೂಲಕ ಸಂಸದೀಯ ಪ್ರಕ್ರಿಯೆಯನ್ನು ನಡೆಸುವ ಬಗೆಯು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ ಮತ್ತು ಇದನ್ನು ಹಲವು ವರ್ಷಗಳ ಪೂರ್ವನಿದರ್ಶನಗಳ ಮೂಲಕ ಬಲಪಡಿಸಲಾಗಿದೆ. ಇಂತಹ ನ್ಯಾಯಬದ್ಧ ಪ್ರಕ್ರಿಯೆಯನ್ನು ದುರ್ಬಲಗೊಳಿಸುವ ಇದಕ್ಕಿಂತ ನಿರ್ಲಜ್ಜವಾದ ಮಾರ್ಗ ಇನ್ನೊಂದಿರಲು ಸಾಧ್ಯವಿಲ್ಲ ಎಂದು ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ಎನ್‌ಡಿಎ ಸರ್ಕಾರದ ಇಂತಹ ಲಜ್ಜೆಗೆಟ್ಟ ಕೃತ್ಯಗಳನ್ನು ವಿರೋಧಿಸಲು ಮತ್ತು ಪ್ರತಿರೋಧಿಸಲು ಒಗ್ಗಟ್ಟಿನಿಂದ ಒಟ್ಟುಗೂಡಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಪ್ರಜಾಪ್ರಭುತ್ವ ಮತ್ತು ಸಂಸತ್ತಿನ ಸಾರ್ವಭೌಮತ್ವವನ್ನು ಗೌರವಿಸುವ ಎಲ್ಲರಿಗೂ ಮನವಿ ಮಾಡುವುದಾಗಿ ಹೇಳಿದೆ.

ಗಣರಾಜ್ಯೋತ್ಸವದ ವಿಚಾರ ಸಂಕಿರಣ.... ಪುಟ 11 ರಿಂದ

ಕೊರತೆ ಹೆಚ್ಚಾಗಿದೆ. ಖಾಸಗಿ ಆಸ್ಪತ್ರೆಗಳು ಅಣಬೆಗಳಂತೆ ಹುಟ್ಟಿಕೊಂಡಿವೆ. ಮಾಧ್ಯಮಗಳ ಸೆನ್ಸಾರ್, ಸಾಮಾಜಿಕ ಮಾಧ್ಯಮಗಳ ನಿಗ್ರಹ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆಗಳು, ಎಡಪಂಥೀಯರ ಜೊತೆ ಸಂಬಂಧ ಆರೋಪದಡಿ ಬಂಧನ, ಹೀಗೆ ಹಲವು ರೀತಿಯಲ್ಲಿ ಪ್ರಜಾಪ್ರಭುತ್ವದ ಮಹತ್ವವನ್ನು ಹಾಳುಮಾಡುತ್ತಿವೆ.

ಆಳುತ್ತಿರುವವರು ಯಾರು ಎಂಬುದನ್ನು ಜನರ ಬಳಿ ಕೊಂಡೊಯ್ಯಬೇಕಿದೆ

ಬಹುತೇಕ ರಾಜಕೀಯ ಪಕ್ಷಗಳಲ್ಲಿ ಜನರ ಬಗ್ಗೆ ಯೋಚಿಸುವ ಪ್ರಣಾಳಿಕೆ ಇಲ್ಲ. ವಿಭಜನೆಯ ಮಾತುಗಳನ್ನು ಬಳಸುತ್ತಿದ್ದಾರೆ. ಸಿಪಿಎಂನಲ್ಲಿ ಜನರ ಪರವಾಗಿ ಪ್ರಣಾಳಿಕೆ ಇದೆ. ನಮ್ಮ ದೇಶದ ಆಡಳಿತದ ರಿಮೋಟ್ ಕಂಟ್ರೋಲ್ ಮಾಡುವವರು ಯಾರು ಎಂಬುದರಲ್ಲಿ ಸಿಪಿಎಂ ವಿಶ್ಲೇಷಣೆ ಬಹಳ ಸರಿಯಾಗಿದೆ. ಆದರೆ, ಇದನ್ನು ಜನರ ಬಳಿ ಕೊಂಡೊಯ್ಯಲು ಸಾಧ್ಯವಾಗಿಲ್ಲ. ಚುನಾವಣೆಯಲ್ಲಿ ಮತಗಳು ಬರಲಿಲ್ಲ. ನೀವು ಯಾರ ಪರವಾಗಿ ಹೋರಾಟ ಮಾಡುತ್ತೀರೋ ಅವರೆಲ್ಲ ಬಲಪಂಥೀಯರನ್ನು ಆರಿಸಿ ತರುತ್ತಾರೆ. ಬರೀ ಆರ್ಥಿಕ ವಿಷಯಗಳನ್ನು ತೆಗೆದುಕೊಂಡು ಸಂಘಟನೆ ಮಾಡಿದರಷ್ಟೇ ಸಾಲದು. ಆ ವಿಷಯಗಳನ್ನು ಜನರಿಗೆ ತಿಳಿಸಲು ನಾವು ಮುಂದಾಗಬೇಕು. ಈ ದೇಶವನ್ನು ಆಳುತ್ತಿರುವವರು ಯಾರು ಎಂಬುದನ್ನು ನಾವು ಸರಿಯಾಗಿ ಅರ್ಥೈಸಿಕೊಂಡು ಅದನ್ನು ಜನರ ಬಳಿ ಕೊಂಡೊಯ್ಯಬೇಕಿದೆ. ಪ್ರಜಾಪ್ರಭುತ್ವ ಎಂದರೆ ರಾಜಕಾರಣಿಗಳಿಗೆ, ನೌಕರಶಾಹಿಗಳಿಗೆ, ನ್ಯಾಯಾಧೀಶರಿಗೆ ಬಿಟ್ಟುಕೊಡುವುದಲ್ಲ. ಅವರ ಮೇಲೆ ಜನರ ಅಭಿಪ್ರಾಯಗಳನ್ನು ಹೇರುವುದಕ್ಕೆ ಜನರು ಆಡಳಿತದಲ್ಲಿ ಪಾಲ್ಗೊಳ್ಳಬೇಕಿದೆ.

ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಡಾ.ಕೆ.ಪ್ರಕಾಶ್ ವಹಿಸಿದ್ದರು. ಲಿಂಗರಾಜು ಸ್ವಾಗತಿಸಿದರು. ಕೆ.ಎಸ್.ಲಕ್ಷ್ಮಿ ನಿರ್ವಹಣೆ ಮಾಡಿದರು. ಕಾರ್ಯಕ್ರಮದ ಆರಂಭದಲ್ಲಿ ಜಸ್ಟಿಸ್ ಗೋಪಾಲಗೌಡ ಅವರು ಧ್ವಜಾರೋಹಣ ಮಾಡಿದರು.

ಜಿ.ಸಿ. ಬಯ್ಯಾರೆಡ್ಡಿಯವರಿಗೆ ನುಡಿನಮನ..... ಪುಟ 5 ರಿಂದ

ಕೆಂಪು, ನೀಲಿ, ಹಸಿರು ಒಂದಾಗಿ ಹೋರಾಟ ಮಾಡಬೇಕು-ಮಾವಳ್ಳಿ ಶಂಕರ್

ಡಿ.ಎಸ್.ಎಸ್. ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಅವರು ಮಾತನಾಡಿ, ರೈತ ಹೋರಾಟಗಾರ ಬಯ್ಯಾರೆಡ್ಡಿ, ನಾಗಸಂದ್ರ ಭೂ ಹೋರಾಟದ ನಾಯಕ, ದಲಿತ ಮುಖಂಡರಾದ ಕೊಮ್ಮಣ್ಣ ಇವರಿಬ್ಬರೂ ಇತ್ತೀಚೆಗೆ ತೀರಿಕೊಂಡರು. ಈ ನಾಯಕರು ತಮಗಾಗಿ ಯಾವತ್ತೂ ಯೋಚನೆ ಮಾಡಿದವರಲ್ಲ, ವೈಯುಕ್ತಿಕ ಬದುಕಿಗಿಂತ, ತಮ್ಮ ಕುಟುಂಬಕ್ಕಿಂತ ಸಮಾಜ ಮುಖ್ಯ ಎಂದು ಹೋರಾಡಿದವರು. ಬಯ್ಯಾರೆಡ್ಡಿಯವರು ಕೆಂಪು, ನೀಲಿ, ಹಸಿರು ಇವು ಒಂದಾಗಿ ಹೋರಾಟ ಮಾಡಬೇಕು, ಅದಾದರೆ ಮಾತ್ರ ಈ ದೇಶಕ್ಕೆ ಉಳಿಯುತ್ತೆ ಎನ್ನುತ್ತಿದ್ದರು. ಅವರು ಚಾರಿತ್ರಿಕ ಹೋರಾಟಗಳನ್ನು ಕಟ್ಟಿ ಹೋಗಿದ್ದಾರೆ. ಅವನ್ನು ಮುಂದುವರೆಸೋಣ ಎಂದರು.

ಕಷ್ಟ-ತೊಂದರೆ ಕೇಳುತ್ತಿದ್ದರು-ಎಸ್. ವರಲಕ್ಷ್ಮಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್. ವರಲಕ್ಷ್ಮಿಯವರು ಮಾತನಾಡಿ ಬಯ್ಯಾರೆಡ್ಡಿಯವರು ಪಕ್ಷದ ಕಾರ್ಯಕರ್ತರು, ನಾಯಕರು ಎಲ್ಲರನ್ನೂ ಕರೆದು ಮಾತನಾಡಿಸಿ ನಿಮ್ಮ ಕಷ್ಟ ಏನು? ನಿಮ್ಮ ತೊಂದರೆ ಏನು? ಎಂದು ಕೇಳುತ್ತಿದ್ದರು. ಕಮ್ಯೂನಿಸ್ಟ್ ನಾಯಕರು ಎಂದರೆ ಮೇಣದ ಬತ್ತಿಯಂತೆ. ತಮ್ಮನ್ನೇ ಸುಟ್ಟುಕೊಂಡು ಸಮಾಜಕ್ಕೆ ಬೆಳಕು ಕೊಡುತ್ತಾರೆ ಎಂದರು. ಪಕ್ಷವು ಬಯ್ಯಾರೆಡ್ಡಿಯವರ ಕುಟುಂಬ ಸದಸ್ಯರ ಬೆಂಬಲಕ್ಕೆ ನಿಲ್ಲುತ್ತದೆ ಎಂದರು.

ಫಾರ್ವರ್ಡ್ ಬ್ಲಾಕ್ ಮುಖಂಡರಾದ ಜಿ.ಆರ್.ಶಿವಶಂಕರ್, ಎಸ್.ಯು.ಸಿ.ಐ.(ಸಿ)ನ ಶ್ರೀರಾಮ್, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ರೈತ ಮುಖಂಡ ಕುರುಬೂರು ಶಾಂತ ಕುಮಾರ್ ಮಾತನಾಡಿ ಬಯ್ಯಾರೆಡ್ಡಿಯವರ ಒಡನಾಟ, ಬದ್ಧತೆಗಳನ್ನು ನೆನಪಿಸಿಕೊಂಡು ಶ್ರದ್ಧಾಂಜಲಿ ಅರ್ಪಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಮಹಾಂತೇಶ್ ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿದರು. ಕೆ. ನೀಲಾ ಕಾರ್ಯಕ್ರಮ ನಿರೂಪಣೆ ಮಾಡಿದರು. ಕೊನೆಯಲ್ಲಿ ಚಂದ್ರಪ್ಪ ಹೊಸ್ಕೇರಾ ವಂದನಾರ್ಪಣೆ ಸಲ್ಲಿಸಿದರು. ಕೇಂದ್ರ ಸಮಿತಿ ಸದಸ್ಯರಾದ ಯು. ಬಸವರಾಜ, ಬಯ್ಯಾರೆಡ್ಡಿ ಅವರ ಪತ್ನಿ ಮಂಜರಿ, ಆಮ್ ಆದ್ಮಿ ಪಕ್ಷದ ನಾಯಕಿ ಉಷಾ ಮೋಹನ್ ಮುಂತಾದವರು ವೇದಿಕೆಯಲ್ಲಿದ್ದರು. ಮುಖ್ಯಮಂತ್ರಿ ಚಂದ್ರು ಅವರು ಕಳಿಸಿದ ಸಂದೇಶವನ್ನು ಸಭೆಯಲ್ಲಿ ಓದಿ ಹೇಳಲಾಯಿತು. ಕೊನೆಯಲ್ಲಿ ಕೆ.ಎಸ್. ಲಕ್ಷ್ಮಿ ಮತ್ತು ಸಂಗಾತಿಗಳು ಗೆಲುವು ನಮ್ಮದು ಹಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ: ಆರ್. ರಾಮಕೃಷ್ಣ

ಇಂದಿನ ಭಾರತದಲ್ಲಿ ಬಳಕೆ-ಆಧಾರಿತ ಜಿಡಿಪಿ ಬೆಳವಣಿಗೆ ಸಾಧ್ಯವೇ.......... ಪುಟ 13 ರಿಂದ

ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಕಾಯ್ದೆ ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ವಿತ್ತೀಯ ಕೊರತೆಯ ಪ್ರಮಾಣವನ್ನು ಮಿತಿಗೊಳಿಸುತ್ತದೆ. ಆದ್ದರಿಂದ ಒಂದು ಪ್ರಜ್ಞಾಪೂರ್ವಕ ವಿತ್ತೀಯ ಕ್ರಮವಾಗಿ ವಿತ್ತೀಯ ಕೊರತೆಯನ್ನು ಹೆಚ್ಚಿಸುವುದು ಈ ಕಾಯ್ದೆಯ ಉಲ್ಲಂಘನೆಯಾಗುತ್ತದೆ ಎಂಬ ಕಾರಣಕ್ಕೆ ಈ ರೀತಿ ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಕ್ರಮವನ್ನು ಕೈಗೊಳ್ಳುವುದಿಲ್ಲ. ಇನ್ನು ಸಂಪತ್ತು ತೆರಿಗೆಯ ಮೂಲಕವಾಗಲಿ ಅಥವಾ ಲಾಭದ ಮೇಲಿನ ತೆರಿಗೆಯ ಮೂಲಕವಾಗಲಿ, ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಕ್ರಮವು ಬಂಡವಾಳವು ದೇಶದಿಂದ ಹೊರ ಹರಿಯುವಂತೆ ಮಾಡುತ್ತದೆ. ಇದು ಒಂದು ನವ ಉದಾರವಾದಿ ವ್ಯವಸ್ಥೆಯೊಳಗೆ ಅದರ ಬೆಳವಣಿಗೆಯ ನಿರೀಕ್ಷೆಗಳಿಗೆ ಹಾನಿಯುಂಟು ಮಾಡುತ್ತದೆ. ವಾಸ್ತವವಾಗಿ, ಉತ್ಪಾದಕ ಬಂಡವಾಳವನ್ನು ಯಾವುದೇ ರೀತಿಯಲ್ಲಿ ಹೊರಗೋಡಿಸುವ ಮುನ್ನವೇ, ದೊಡ್ಡ ಪ್ರಮಾಣದಲ್ಲಿ ಹಣಕಾಸು ಬಂಡವಾಳವು ಅದಾಗಲೇ ಹೊರ ಹರಿದಿರುತ್ತದೆ ಮತ್ತು ದೇಶವನ್ನು ತೊಂದರೆಗಳಿಗೆ ಈಡು ಮಾಡಿರುತ್ತದೆ.

ನವ-ಉದಾರವಾದಿ ಆಳ್ವಿಕೆಯಲ್ಲಿ ಅಸಾಧ್ಯ

ನಿಜ, ರೈತರ ಆದಾಯವನ್ನು ಹೆಚ್ಚಿಸುವ ಮತ್ತು ಆ ಮೂಲಕ ಬಳಕೆಯನ್ನು ಉತ್ತೇಜಿಸುವ ಕೃಷಿ ಬೆಳವಣಿಗೆಯನ್ನು ಉತ್ತೇಜಿಸುವುದು ಸಾಧ್ಯವಿದೆ. ಬಳಕೆ-ಪ್ರಧಾನ ಬೆಳವಣಿಗೆಯ ಮತ್ತು ಆ ಕಾರಣದಿಂದಾಗಿ ದೇಶೀಯ ಮಾರುಕಟ್ಟೆ-ಪ್ರಧಾನ ಬೆಳವಣಿಗೆಯ ನಿಜ ತರ್ಕಾಧಾರವು ಕೃಷಿ-ಪ್ರಧಾನ ಬೆಳವಣಿಗೆಯಲ್ಲಿದೆ. ನವ ಉದಾರವಾದಿ ಆಳ್ವಿಕೆಯ ಬಯಕೆಗಳಿಗೆ ಅನುಗುಣವಾಗಿ ರೈತರಿಗೆ ನಷ್ಟವನ್ನು ಉಂಟುಮಾಡಿ ಕಾರ್ಪೊರೇಟ್ ಮತ್ತು ಕೃಷಿ-ಉದ್ದಿಮೆ ಹಿತಾಸಕ್ತಿಗಳನ್ನು ಉತ್ತೇಜಿಸುವ ನೀತಿಗಳನ್ನು ಈಗ ಅನುಸರಿಸುತ್ತಿರುವುದರ ಬದಲಾಗಿ, ಸರ್ಕಾರವು ರೈತ ಪರ ನೀತಿಯನ್ನು ಅನುಸರಿಸುವ ಅಗತ್ಯವಿದೆ. ರೈತರ ಆದಾಯವನ್ನು ಹೆಚ್ಚಿಸುವುದರ ಬದಲು ಮತ್ತು ಅದಕ್ಕೆ ವಿರುದ್ಧವಾಗಿ ಅದನ್ನು ಸಂಕುಚಿತಗೊಳಿಸುವ ಕಾರ್ಪೊರೇಟ್ ಕೃಷಿಯನ್ನು ಉತ್ತೇಜಿಸುವ ಕ್ರಮವು ಬಳಕೆಗೆ ಯಾವುದೇ ಉತ್ತೇಜನವನ್ನೂ ನೀಡುವುದಿಲ್ಲ.

ಆದ್ದರಿಂದ, ಒಂದು ನವ ಉದಾರವಾದಿ ಆಳ್ವಿಕೆಯ ಮಿತಿಯೊಳಗೆ ರಫ್ತು-ಪ್ರಧಾನ ಬೆಳವಣಿಗೆಯಿಂದ ಬಳಕೆ-ಪ್ರಧಾನ ಬೆಳವಣಿಗೆಯತ್ತ ಹೊರಳಲಾಗದು. ಬೆಳವಣಿಗೆಯ ಪ್ರಧಾನ ಪ್ರೇರಣೆಯಾಗಿ ರಫ್ತುಗಳ ಮೇಲಿನ ಅವಲಂಬನೆಯಿಂದ ದೇಶೀಯ ಬಳಕೆಯನ್ನು ಅವಲಂಬಿಸುವ ಬದಲಾವಣೆಯನ್ನು ಸಾಧಿಸಿದ ಒಂದೇ ಒಂದು ದೇಶವೆಂದರೆ ಚೀನಾ. ಕಾರಣವೆಂದರೆ, ಚೀನಾ ನವ ಉದಾರವಾದಿ ಆಳ್ವಿಕೆಯಿಂದ ನಿರ್ಬಂಧಿಸಲ್ಪಟ್ಟಿಲ್ಲ. ಅದು, ಸರ್ಕಾರದ ಸ್ವಾಯತ್ತ ನೀತಿಗಳು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಚಾಂಚಲ್ಯ ಮತ್ತು ತಿಕ್ಕಲುತನಗಳಿಂದ ನಿರ್ಬಂಧಿಸಲ್ಪಟ್ಟ ದೇಶವಲ್ಲ. ಅದು ಗಡಿಯಾಚೆಗಿನ ಹಣಕಾಸು ಬಂಡವಾಳದ ಹರಿವುಗಳಿಗೆ ಮುಕ್ತವಾಗಿಲ್ಲ. ವ್ಯಾಪಾರ ಮತ್ತು ಚಾಲ್ತಿ ಖಾತೆಯಲ್ಲಿ ಅದರ ನಿವ್ವಳ ಉಳಿಕೆಯು ಬಹಳ ದೊಡ್ಡದಿರುವುದರಿಂದ ಅಂತಹ ಹರಿವುಗಳಿಗೆ ತೆರೆದುಕೊಳ್ಳುವಂತೆ ಅದನ್ನು ಒತ್ತಾಯಿಸುವುದು ಸಾಧ್ಯವಿಲ್ಲ.

ಆದರೆ, ಭಾರತ ಮತ್ತು ಮೂರನೇ ಜಗತ್ತಿನ ಇತರ ದೇಶಗಳು ಸಂಪೂರ್ಣವಾಗಿ ಒಂದು ವಿಭಿನ್ನ ವರ್ಗಕ್ಕೆ ಸೇರಿವೆ. ಅವು ಜಾಗತಿಕ ಹಣಕಾಸು ಬಂಡವಾಳದ ಹರಿವುಗಳಿಗೆ ಮುಕ್ತವಾಗಿವೆ ಮಾತ್ರವಲ್ಲ, ಅವು ಹಾಗೆಯೇ ಇರಬೇಕಾಗಿದೆ. ಏಕೆಂದರೆ, ಅವುಗಳಲ್ಲಿ ಹೆಚ್ಚಿನವು ವ್ಯಾಪಾರ ನಿಯಂತ್ರಣಗಳನ್ನು ಆಶ್ರಯಿಸದ ಹೊರತು ಮತ್ತು ತುಲನಾತ್ಮಕವಾಗಿ ಅನಿಯಂತ್ರಿತ ಗಡಿಯಾಚೆಗಿನ ವ್ಯಾಪಾರ ಹರಿವುಗಳನ್ನು ಅನುಮತಿಸದ ಹೊರತು ಹಣಕಾಸು ಬಂಡವಾಳದ ಒಳಹರಿವು ಇಲ್ಲದೆ ತಮ್ಮ ಪಾವತಿ ಶೇಷವನ್ನು (ವಿದೇಶ ವ್ಯಾಪಾರದ ಬಾಕಿಯನ್ನು) ನಿರ್ವಹಿಸುವುದು ಸಾಧ್ಯವಾಗುವುದಿಲ್ಲ.

ಸರ್ಕಾರವು ಆರ್ಥಿಕ ನೀತಿಯ ವಿಷಯಗಳಲ್ಲಿ ಸಂಪೂರ್ಣ ಸ್ವಾಯತ್ತತೆ ಹೊಂದಿದೆ ಎಂಬತೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು "ವ್ಯವಸ್ಥೆಯ" ಇತರ ಎಲ್ಲ ಅರ್ಥಶಾಸ್ತ್ರ-ವ್ಯಾಖ್ಯಾನಕಾರರು ಮಾತನಾಡುತ್ತಾರೆ. ಅದು ನವ ಉದಾರವಾದಿ ಅರ್ಥವ್ಯವಸ್ಥೆಯ ಕಾರ್ಯವಿಧಾನದ ಬಗ್ಗೆ ಹೊಂದಿರುವ ಅರಿವಿನ ತೀವ್ರ ಕೊರತೆಯನ್ನು ತೋರಿಸುತ್ತದೆ.



ಅಮೆರಿಕಾಕ್ಕೆ ಚೀನಾದ ಡೀಪ್–ಸೀಕ್ ನ 'ಸ್ಪುಟ್ನಿಕ್ ಶಾಕ್'!

ಜಗದ ಸುತ್ತ
ವಸಂತರಾಜ್ ಎನ್.ಕೆ.

ಚೀನಾದ ಡೀಪ್–ಸೀಕ್ ಎಂಬ ಪುಟ್ಟ ಕಂಪನಿ ಇತ್ತೀಚೆಗೆ ಬಿಡುಗಡೆ ಮಾಡಿದ ಒಂದು ಕೃತಕ ಬುದ್ಧಿಮತ್ತೆಯ ಹೊಸ ಸಾಫ್ಟ್ ವೇರ್ ಅಮೆರಿಕಕ್ಕೆ ಶಾಕ್ ಕೊಟ್ಟಿದೆ. ದೈತ್ಯ ಅಮೆರಿಕನ್ ಕಂಪನಿಗಳ ಈ ಕ್ಷೇತ್ರದ ಚಾಟ್ ಜಿಪಿಟಿ ಇತ್ಯಾದಿ ಉತ್ಪನ್ನಗಳನ್ನು ಎಲ್ಲ ರೀತಿಯಲ್ಲೂ ಹಿಂದೆ ಹಾಕಿದೆ. ಇದನ್ನು 1950ರ ದಶಕದಲ್ಲಿ ಮೊದಲ ಬಾಹ್ಯಾಕಾಶ ನೌಕೆ 'ಸ್ಪುಟ್ನಿಕ್' ಹಾರಿ ಬಿಡುವ ಮೂಲಕ, ತಂತ್ರಜ್ಞಾನದಲ್ಲಿ ಅಮೆರಿಕದ ಮೇಲುಗೈಗೆ ಆಗಿನ ಸೋವಿಯೆಟ್ ಒಕ್ಕೂಟ ಸವಾಲು ಹಾಕಿ ಶಾಕ್ ಕೊಟ್ಟಿದ್ದ ಚಾರಿತ್ರಿಕ ಕ್ಷಣಕ್ಕೆ ಹೋಲಿಸಲಾಗುತ್ತಿದೆ. ಅಧ್ಯಕ್ಷ ಟ್ರಂಪ್ ಅಮೆರಿಕದ ಉದ್ಯಮಕ್ಕೆ ''ಎಚ್ಚೆತ್ತುಕೊಳ್ಳಲು ಕರೆ'' ಇದು ಎಂದು ಕರೆದಿದ್ದಾರೆ. ಕೃತಕ ಬುದ್ಧಿಮತ್ತೆ ಮತ್ತು ಅದಕ್ಕೆ ಸಂಬಂಧಿತ ಕಂಪನಿಗಳು ಒಂದೇ ದಿನದಲ್ಲಿ (ಜನವರಿ 27) ತಮ್ಮ ಶೇರ್ ಮೌಲ್ಯದಲ್ಲಿ 1 ಟ್ರಿಲಿಯನ್ ಡಾಲರ್ ನಷ್ಟು ನಷ್ಟ ಕಂಡಿವೆ. ಭಾರತಕ್ಕೂ ಇದು ಒಂದು ''ಎಚ್ಚರಿಕೆಯ ಗಂಟೆ''. ಇದು ಬರಿಯ ಕೃತಕ ಬುದ್ಧಿಮತ್ತೆ ಅಥವಾ ತಂತ್ರಜ್ಞಾನ ಕ್ಷೇತ್ರದ ಪೈಪೋಟಿಯ ಪ್ರಶ್ನೆ ಮಾತ್ರವಲ್ಲ. ದೀರ್ಘಕಾಲಿನ ಜಾಗತಿಕ ರಾಜಕೀಯ ಪರಿಣಾಮ ಬೀರುವ ವಿದ್ಯಮಾನ. ಏನಿದು ಡೀಪ್–ಸೀಕ್ ನ 'ಸ್ಪುಟ್ನಿಕ್ ಶಾಕ್' ಎಂಬುದನ್ನು ನೋಡೋಣ.

ಡೀಪ್–ಸೀಕ್ ಎಂಬ ಚೀನಾದ ಕೃತಕ ಬುದ್ಧಿಮತ್ತೆಯ (ಎಐ) ಕ್ಷೇತ್ರದ ಕಂಪನಿ ಡೀಪ್–ಸೀಕ್–V3 ಮತ್ತು ಡೀಪ್–ಸೀಕ್–R1 ಎಂಬ ಎರಡು ಸಾಫ್ಟ್‌ವೇರ್ ಉತ್ಪನ್ನಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿತು. ಇದು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಹೊಸ ವಲಯವಾದ, ಕೆಲವು ಶಬ್ದಗಳ ಪ್ರಶ್ನೆ, ಅಗತ್ಯಗಳನ್ನು ತೆಗೆದುಕೊಂಡು ಹೊಸ ಕಂಟೆಂಟ್ (ಪಠ್ಯ, ಕೋಡ್, ಬಿಂಬ, ವಿಡಿಯೊ) ಸೃಷ್ಟಿಸಬಲ್ಲ ಕೃತಕ ಬುದ್ಧಿಮತ್ತೆ ಇರುವ (Generative artificial intelligence) ಉತ್ಪನ್ನ. ಇದಕ್ಕೆ ಸಮಾನಾರ್ಥಕ ಉತ್ಪನ್ನವಾದ ಓಪನ್–ಎಐ ನ ಪ್ರಸಿದ್ಧ ಚಾಟ್ ಜಿಪಿಟಿಯ 01 ಮತ್ತು 03 ನ ಆಪ್ ಸ್ಟೋರ್ ನಲ್ಲಿನ ಡೌನ್ ಲೋಡ್‌ಗಳನ್ನು ಮೀರಿಸಿ ಡೀಪ್–ಸೀಕ್ ಎಲ್ಲರಿಗೂ ಶಾಕ್ ಕೊಟ್ಟಿದೆ. ಇದನ್ನು ಹಲವು ಪರಿಣತರು ಪರೀಕ್ಷಿಸಿದ್ದು ಇದುವರೆಗಿನ ಎಲ್ಲ ಉತ್ಪನ್ನಗಳಿಗಿಂತ (ಹೂಡಿಕೆ ವೆಚ್ಚ, ಬಳಕೆಯ ವೆಚ್ಚ, ಅಗತ್ಯ ವಿದ್ಯುತ್ ಶಕ್ತಿ, ಅಗತ್ಯ ಕಂಪ್ಯೂಟರ್ ವೇಗ–ಸಾಮರ್ಥ್ಯ, ದಕ್ಷತೆ ಇತ್ಯಾದಿ) ಎಲ್ಲ ರೀತಿಯಲ್ಲೂ ಉತ್ಕೃಷ್ಟ ಉತ್ಪನ್ನವೆಂದು ಘೋಷಿಸಿದ್ದಾರೆ. ಓಪನ್–ಎಐ ನ ಮುಖ್ಯಸ್ಥ ಸ್ಯಾಮ್ ಅಲ್ಟ್‌ಮನ್ ಸಹ "ಮೆಚ್ಚುಗೆಗೆ ಅರ್ಹವಾದ" ಮತ್ತು "ಹೊಸ ಸ್ಫೂರ್ತಿದಾಯಕ ಪೈಪೋಟಿ" ಕೊಡಬಲ್ಲ ಉತ್ಪನ್ನವೆಂದು ಹೊಗಳಿದ್ದಾರೆ.

ಟೆಕ್ ಮಾರುಕಟ್ಟೆ ಅಲ್ಲೋಲ ಕಲ್ಲೋಲ

ಆಪ್ ಸ್ಟೋರ್‌ನಲ್ಲಿನ ಈವರೆಗಿನ ಜನಪ್ರಿಯ ಚಾಟ್ ಜಿಪಿಟಿಯ ಡೌನ್‌ಲೋಡ್ ಗಳನ್ನು ಬಿಡುಗಡೆಯಾದ ಕೆಲವೇ ವಾರಗಳಲ್ಲಿ ಡೀಪ್–ಸೀಕ್ ಮೀರುತ್ತಿದ್ದಂತೆ ಯು.ಎಸ್. ಮತ್ತು ಜಾಗತಿಕ ಟೆಕ್ ಮಾರುಕಟ್ಟೆಗಳಲ್ಲಿ ಸೋಮವಾರ (ಜನವರಿ 27ರಂದು) ಅಲ್ಲೋಲ ಕಲ್ಲೋಲವಾಯಿತು. ಕೃತಕ ಬುದ್ಧಿಮತ್ತೆ ಮತ್ತು ಅದಕ್ಕೆ ಸಂಬಂಧಿತ ಕಂಪನಿಗಳ ಶೇರು ಬೆಲೆಯಲ್ಲಿ ಭಾರೀ ಕುಸಿತ ಕಂಡಿತು. ಪ್ರಮುಖವಾಗಿ ಕೃತಕ ಬುದ್ಧಿಮತ್ತೆ ಉತ್ಪನ್ನಗಳ ಭಾರೀ ವೇಗ ಮತ್ತು ಸಾಮರ್ಥ್ಯದ ವಿಶೇಷ ಚಿಪ್‌ಗಳನ್ನು ತಯಾರಿಸುವ ಎನ್–ವಿಡಿಯಾದ ಶೇರು ಬೆಲೆಯಲ್ಲಿ ಕುಸಿತ ಕಂಡು, ಅದು ಸುಮಾರು ಶೇ.17 ಅಂದರೆ 600 ಶತಕೋಟಿ ಡಾಲರ್‌ನಷ್ಟು ಮಾರುಕಟ್ಟೆ ಮೌಲ್ಯ ಕಳೆದುಕೊಂಡಿತು. ಇದು ಯು.ಎಸ್. ಶೇರು ಮಾರುಕಟ್ಟೆಯ ಚರಿತ್ರೆಯಲ್ಲೇ ಅತಿ ದೊಡ್ಡ ನಷ್ಟ ಎನ್ನಲಾಗಿದೆ. ಗೂಗಲ್ 100 ಮತ್ತು ಮೈಕ್ರೋಸಾಫ್ಟ್ 7 ಶತಕೋಟಿ ಡಾಲರ್‌ಗಳ ಮಾರುಕಟ್ಟೆ ಮೌಲ್ಯ ನಷ್ಟ ಕಂಡಿದೆ. ಇತರ ಹಲವು ಕಂಪನಿಗಳ ಟೆಕ್ ಪ್ರಾಧಾನ್ಯದ ನಾಸ್–ಡಾಕ್ ಸೂಚಕ ಶೇ.3ರಷ್ಟು ಕುಸಿತ ಕಂಡಿತು. ಒಂದು ಹೊಸ ಉತ್ಕೃಷ್ಟ ಬಿಡುಗಡೆಯಾದರೆ ಶೇರು ಮಾರುಕಟ್ಟೆಯಲ್ಲಿ ಯಾಕೆ ಇಂತಹ ಭಾರೀ ಕುಸಿತ ಕಾಣಬೇಕು?

ಎಐ ಕ್ಷೇತ್ರದ ಅಪಾರ ನಿರೀಕ್ಷೆ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮುಂಚೂಣಿ ತಂತ್ರಜ್ಞಾನವಾಗಲಿದ್ದು ಇದು ಎಲ್ಲ ಕ್ಷೇತ್ರಗಳ ಉತ್ಪಾದಕತೆಯನ್ನು ನಿರ್ಣಾಯಕವಾಗಿ ಹೆಚ್ಚಿಸುವುದಲ್ಲದೆ, ಹಲವು ಹೊಸ ಆರ್ಥಿಕತೆಯ ವಲಯಗಳನ್ನು ಸೃಷ್ಟಿಸಲಿದೆ. 21ನೇ ಶತಮಾನದ ಪ್ರಮುಖ ಉದ್ಯಮವಾಗಲಿದೆ. ಈ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಹೆಚ್ಚೆಚ್ಚು ವೇಗದ ಗಣಕ ಸಾಮರ್ಥ್ಯ ಇರುವ ಕಂಪ್ಯೂಟರ್ ಚಿಪ್ ತಯಾರಿಕೆಯ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಬೇಕು. ಇಂತಹ ಸಾವಿರಾರು ಚಿಪ್ ಇರುವ ದೊಡ್ಡ ಕಂಪ್ಯೂಟರ್ ಸಂಕೀರ್ಣಗಳು ಮತ್ತು ವಿದ್ಯುತ್ ಶಕ್ತಿ ಸಂಕೀರ್ಣಗಳನ್ನು ಸಹ ಅಭಿವೃದ್ಧಿಪಡಿಸಬೇಕು. ತಕ್ಷಣದ ಬಳಕೆ ಕಂಡಿರುವ ಸೃಷ್ಟಿಸಬಲ್ಲ ಕೃತಕ ಬುದ್ಧಿಮತ್ತೆ ಇರುವ (Generative Artificial Intelligence) ಉತ್ಪನ್ನಗಳಿಗೆ. ಎಲ್‌ಎಲ್‌ಎಂ (ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್)ಗಳನ್ನು ತಯಾರಿಸಲು ಅಪಾರ ಸಂಶೋಧನೆ, ಪ್ರಯೋಗ ಬೇಕು. ಈ ಎಲ್‌ಎಲ್‌ಎಂಗಳಿಗೆ ಮಾನವ ಭಾಷೆ ಅರ್ಥ ಮಾಡಿಕೊಂಡು ಅದಕ್ಕೆ ಸೂಕ್ತ ಮಾಹಿತಿ ಸೃಷ್ಟಿಸಲು, ಅದನ್ನು ಅಪಾರ ಮಾಹಿತಿ/ದತ್ತಾಂಶಗಳ ಸಂಗ್ರಹ ಸಿದ್ಧಪಡಿಸಬೇಕು. ಇವೆಲ್ಲದಕ್ಕೆ ನುರಿತ ಪರಿಣತರ ಪಡೆ, ಅಪಾರ ಬಂಡವಾಳಬೇಕು. ಆದರೆ ಇದಕ್ಕೆ ಅಪಾರ ಲಾಭದ ಸಾಧ್ಯತೆ ಸಹ ಇದೆ. ಇದು ಎಐ ಕ್ಷೇತ್ರದ ಕುರಿತು ಅಪಾರ ನಿರೀಕ್ಷೆ, ಆಸಕ್ತಿ, ಉತ್ಸಾಹಗಳಿಗೆ ಕಾರಣವಾಗಿತ್ತು.

ಗೂಗಲ್, ಫೇಸ್‌ಬುಕ್, ಮೈಕ್ರೋಸಾಫ್ಟ್, ಎನ್–ವಿಡಿಯಾ ಮುಂತಾದ ಕಂಪನಿಗಳು ಈ ತಂತ್ರಜ್ಞಾನದಲ್ಲಿ ಅಪಾರ ಹಣ ಹೂಡಿಕೆ ಮಾಡಿದ್ದು, ಹಲವು ಸಾಹಸ ಬಂಡವಾಳ ಕಂಪನಿಗಳ ಬಂಡವಾಳ ಈ ಕ್ಷೇತ್ರಕ್ಕೆ ಹರಿದು ಬರಲಾರಂಭಿಸಿತು. ಕಳೆದ ಕೆಲವು ವರ್ಷಗಳಿಂದ ಶೇರು ಮಾರುಕಟ್ಟೆಯ ಸುಗ್ಗಿ, ಚಲನಶೀಲತೆ ಮತ್ತು ಉತ್ಸಾಹ ಕೃತಕ ಬುದ್ಧಿಮತ್ತೆಯ ಸುತ್ತ ಗಿರಕಿ ಹೊಡೆಯುತ್ತಿತ್ತು. ಮಾರುಕಟ್ಟೆ ಕುಸಿತದ ಹಿಂದಿನ ದಿನವಷ್ಟೇ ಓಪನ್–ಎಐ, ಸಾಫ್ಟ್ ಬ್ಯಾಂಕ್ ಮತ್ತು ಒರಾಕಲ್ ಎಂಬ ದೈತ್ಯ ಕಂಪನಿಗಳು ಸೇರಿ ಸ್ಥಾಪಿಸಿದ 'ಸ್ಟಾರ್–ಗೇಟ್' ಎಂಬ ಹೊಸ ಕಂಪನಿಯಲ್ಲಿ ಸರಕಾರ 600 ಶತಕೋಟಿ ಡಾಲರು ಹೂಡಿಕೆ ಮಾಡಬೇಕೆಂದು ಕೇಳಿದ್ದವು.

ಯಾಕೆ ಶೇರು ಕುಸಿತ

ಆದರೆ 2019ರಲ್ಲಿ ಸ್ಥಾಪಿತವಾದ ಚೀನಾದ ಸಣ್ಣ ಸ್ಟಾರ್ಟ್ ಅಪ್ ಕಂಪನಿ ಡೀಪ್–ಸೀಕ್ ಉತ್ಕೃಷ್ಟ ಉತ್ಪನ್ನ ತಯಾರಿಸಿದ್ದು ಮಾತ್ರವಲ್ಲ, ಅದರ ಹೂಡಿಕೆ ಕೇವಲ 55 ಲಕ್ಷ ಡಾಲರು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಪೈಪೋಟಿ ನೀಡದಂತೆ ಚೀನಾಕ್ಕೆ ಅತ್ಯಾಧುನಿಕ ಚಿಪ್‌ಗಳ ರಫ್ತು ನಿಷೇಧ ಮಾಡಿದ್ದರಿಂದ, ಚಾಟ್ ಜಿಪಿಟಿ ಬಳಸಿದ ಎನ್–ವಿಡಿಯಾದ ಅತ್ಯಾಧುನಿಕ ಎಚ್.100 ಬದಲು ಅದಕ್ಕಿಂತ ಬಹಳ ಕಡಿಮೆ ಸಾಮರ್ಥ್ಯದ ಎಚ್–800 ಚಿಪ್‌ಗಳನ್ನು ಬಳಸಿತ್ತು. ಇದರಿಂದಾಗಿ ವಿದ್ಯುತ್ ಶಕ್ತಿ ಅಗತ್ಯ ಸಹ ಕಡಿಮೆಯಾಗಿತ್ತು. ಚಾಟ್ ಜಿಪಿಟಿ ಸಮಾನವಾದ ಬಳಕೆಯ ಸಾಧ್ಯತೆ, ಸಾಮರ್ಥ್ಯ ಸಾಧಿಸಲು ಎಲ್‌ಎಲ್‌ಎಮ್ (ಭಾಷಾ ಮಾಡೆಲ್) ಮತ್ತು ಅದರ ತರಬೇತಿ ಮಾಹಿತಿ/ದತ್ತಾಂಶದಲ್ಲಿ ಅತ್ಯಂತ ದಕ್ಷವಾದ ವಿನ್ಯಾಸಗಳನ್ನು ಬಳಸಿತ್ತು. ಅಧಿಕ ಸಾಮರ್ಥ್ಯದ ಕಂಪ್ಯೂಟರ್ ಚಿಪ್ ಮತ್ತು ಅಪಾರ ಬಂಡವಾಳದ ಕೊರತೆಯೇ ಈ ದಕ್ಷವಾದ ವಿನ್ಯಾಸಕ್ಕೆ ದಾರಿ ಮಾಡಿಕೊಟ್ಟಿದೆ. ಅಲ್ಲದೆ ಡೀಪ್–ಸೀಕ್ ಓಪನ್–ಸೋರ್ಸ್ ಉತ್ಪನ್ನವಾಗಿದ್ದು ಅದರ ಬಳಕೆ ಮತ್ತು ಪರಿಶೀಲನೆ ಸುಲಭ.

ಡೀಪ್–ಸೀಕ್ ಸಮಾನವಾದ ಉತ್ಕೃಷ್ಟ ಉತ್ಪನ್ನದ ದಕ್ಷತೆ, ಅಮೆರಿಕನ್ ಕಂಪನಿಗಳ ಉತ್ಪನ್ನದ ಅದಕ್ಷತೆಯನ್ನು ಬಯಲು ಮಾಡಿದೆ. ಯು.ಎಸ್. ಕೃತಕ ಬುದ್ಧಿಮತ್ತೆ ಉದ್ಯಮ ಅನಗತ್ಯವಾದ ಭಾರೀ ಕಂಪ್ಯೂಟರ್ ಸಾಮರ್ಥ್ಯ ಮತ್ತು ಅಪಾರ ಬಂಡವಾಳವನ್ನು ಕೇಳುತ್ತಿದೆ. ಇದು ಅದರ ಅದಕ್ಷತೆಯ ಸೂಚನೆ ಅಥವಾ ಹೂಡಿಕೆದಾರರಿಗೆ ಮೋಸ ಮಾಡಲಾಗುತ್ತಿದೆ. ಅದು ಏನೇ ಇದ್ದರೂ ಇತರ ದಕ್ಷ ಉತ್ಪನ್ನಗಳ ಪೈಪೋಟಿ ಬಂದಾಗ ಭಾರೀ ಲಾಭ ದೂರ ಉಳಿಯಿತು. ಇವು ವಿಫಲವಾಗಿ ಹೂಡಿಕೆಯನ್ನೇ ಕಳೆದುಕೊಳ್ಳುವ ಅಪಾಯವಿದೆ ಎಂಬ ಭಾವನೆ ಹೂಡಿಕೆದಾರರಿಗೆ ಬಂದು ಅವರು ಶೇರುಗಳನ್ನು ಮಾರಲು ಶುರುಮಾಡಿದ್ದರಿಂದ ಶೇರು ಬೆಲೆ ಕುಸಿತ ಕಂಡಿತು. ಅಲ್ಲದೆ ಎಐ ಸಾಧ್ಯತೆಗಳನ್ನು ಸಾಧಿಸಲು ಇನ್ನಷ್ಟು ಅಗ್ಗವಾದ ದಕ್ಷವಾದ ಇತರ ಸಾಧ್ಯತೆಗಳಿವೆ ಎಂಬುದು ನಿಜವಾದ ಹೂಡಿಕೆದಾರರಿಗೆ ಮನದಟ್ಟಾಗಿದ್ದು ದೈತ್ಯ ಟೆಕ್ ಕಂಪನಿಗಳಲ್ಲಿ ನಡುಕ ತಂದಿದೆ.

'ಸ್ಪುಟ್ನಿಕ್ ಶಾಕ್" ಯಾಕೆ?

ಈ ಕುಸಿತವನ್ನು 'ಸ್ಪುಟ್ನಿಕ್ ಶಾಕ್" ಎಂದು ಯಾಕೆ ಕರೆಯಲಾಗಿದೆ? ವಿಜ್ಞಾನ–ತಂತ್ರಜ್ಞಾನದ ಹೆಚ್ಚಿನ ಕ್ಷೇತ್ರಗಳಲ್ಲಿ ಚೀನಾ ಈಗಾಗಲೇ ತೀವ್ರ ಮುನ್ನಡೆ ಸಾಧಿಸಿದೆ. ಆದರೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಅಪಾರ ಹೂಡಿಕೆ ಪ್ರಗತಿ ಸಾಧಿಸಿದ್ದು ಯು.ಎಸ್. ಮುಂದಿರುವುದು ಮಾತ್ರವಲ್ಲ, ಅಜೇಯವಾಗಿದೆ ಎಂದು ಭಾವಿಸಲಾಗಿತ್ತು. ಚೀನಾ ಈ ಕ್ಷೇತ್ರದಲ್ಲಿ ಪೈಪೋಟಿ ಕೊಡದಂತೆ ಇದಕ್ಕೆ ಅತ್ಯಗತ್ಯವಾದ ಅತ್ಯಾದುನಿಕ ಕಂಪ್ಯೂಟರ್ ಚಿಪ್ ಮತ್ತು ಅದರ ತಂತ್ರಜ್ಞಾನದ ರಫ್ತು ನಿಷೇಧ ಮಾಡಿತ್ತು. ಇದಲ್ಲದೆ ಇಂತಹ ಸೃಜನಾತ್ಮಕ ಕ್ಷೇತ್ರದಲ್ಲಿ ಚೀನಾ ಮುನ್ನಡೆ ಸಾಧಿಸಲು ಸಾಧ್ಯವಿಲ್ಲವೆಂದು ಭಾವಿಸಲಾಗಿತ್ತು. ಆದರೆ ಡೀಪ್–ಸೀಕ್ ಈ ಭಾವನೆಗೆ ನೇರ ಏಟು ಕೊಟ್ಟಿದೆ, ಅದು ಸುಳ್ಳೆಂದು ಸಿದ್ಧಪಡಿಸಿದೆ.

1950ರ ದಶಕದಲ್ಲಿ ಮೊದಲ ಬಾಹ್ಯಾಕಾಶ ನೌಕೆ 'ಸ್ಪುಟ್ನಿಕ್' ಹಾರಿ ಬಿಡುವ ಮೂಲಕ, ತಂತ್ರಜ್ಞಾನದಲ್ಲಿ ಅಮೆರಿಕದ ಮೇಲುಗೈಗೆ ಆಗಿನ ಸೋವಿಯೆಟ್ ಒಕ್ಕೂಟ ಸವಾಲು ಹಾಕಿತ್ತು. 'ಡೀಪ್–ಸೀಕ್' ಅಂತಹುದೇ ಶಾಕ್ ಕೊಟ್ಟಿದೆ. ಈಗಾಗಲೇ ಸೂಪರ್ ಸಾನಿಕ್ ಕ್ಷಿಪಣಿ, ಡ್ರೋನ್, ಇಸ್ರೇಲಿ ಐರನ್ ಡೋಮ್ ಬೇದಿಸಿದ್ದು ಮುಂತಾದವುಗಳ ಮೂಲಕ ಉಕ್ರೇನ್ ಮತ್ತು ಇಸ್ರೇಲಿ ಯುದ್ಧದಲ್ಲಿ ರಶ್ಯಾ ಮತ್ತು ಚೀನಾ ಎರಡೂ ಮಿಲಿಟರಿ ತಂತ್ರಜ್ಞಾನದಲ್ಲೂ ಭಾರೀ ಮುನ್ನಡೆ ಸಾಧಿಸಿವೆ ಎಂದು ಸಿದ್ಧವಾಗಿದೆ. ಇದು ಯು.ಎಸ್.ನ ವಿಜ್ಞಾನ–ತಂತ್ರಜ್ಞಾನ ಮತ್ತು ಹೈಟೆಕ್ ಉದ್ಯಮದ ಮತ್ತು ಸರಕಾರದ ಅಹಂಕಾರ ಮತ್ತು ಆತ್ಮವಿಶ್ವಾಸಕ್ಕೆ ಭಾರೀ ಶಾಕ್ ಕೊಟ್ಟಿದೆ ಮತ್ತು ಆಘಾತಕಾರಿಯಾಗಿದೆ.

'ಡೀಪ್–ಸೀಕ್' ಯು.ಎಸ್. ಟೆಕ್ ಮಾರುಕಟ್ಟೆಯ ಅದಕ್ಷತೆ, ಬುರುಡೆಗಳನ್ನು ಬಯಲುಮಾಡಿ ಅದರ ಮುಂದಿನ ಬೆಳವಣಿಗೆಗೂ ಕೊಡಲಿಯೇಟು ಹಾಕಿದೆ. ಶೇರು ಮಾರುಕಟ್ಟೆಯ ಸುಗ್ಗಿ ಎಐ ತಂತ್ರಜ್ಞಾನದ ಕುರಿತ ಭರವಸೆ, ಉತ್ಸಾಹದ ಮೇಲೆ ವಿಪರೀತವಾಗಿ ಆಧಾರಿತವಾಗಿದ್ದು, ಅದರ ಸಾಧ್ಯತೆ ಮತ್ತಿತರ ವಿವರಗಳು ಅತಿಶಯೋಕ್ತಿಯಿಂದ ಕೂಡಿವೆ. ಇದು ಹೊಸ 'ಗುಳ್ಳೆ'ಯಾಗಿದ್ದು 2000ದ ಡಾಟ್–ಕಾಮ್ ಗುಳ್ಳೆಯಂತೆ ಒಡೆದು ಹೋದಾಗ ಭಾರೀ ಶೇರು ಮಾರುಕಟ್ಟೆ ಕುಸಿತ ಮತ್ತು ಆರ್ಥಿಕದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಬಹುದು ಎಂದು ಹಲವು ಪರಿಣತರು ಎಚ್ಚರಿಸುತ್ತಿದ್ದರು. ಅದು ಈಗ ನಿಜವಾಗುವ ಲಕ್ಷಣಗಳಿವೆ.

ಉಕ್ರೇನ್ ಮತ್ತು ಇಸ್ರೇಲಿ ಯುದ್ಧದಲ್ಲಿ ಹೆಚ್ಚು ಕಡಿಮೆ ಸೋಲು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಇದ್ದರೂ, ಅಧ್ಯಕ್ಷತೆ ವಹಿಸಿದ ಕೂಡಲೇ ಕೆನಡಾ, ಪನಾಮಾ, ಗ್ರೀನಲ್ಯಾಂಡ್‌ಗಳಿಗೆ ಬೆದರಿಕೆ ಹಾಕಿದ ಟ್ರಂಪ್ ಸಾಮ್ರಾಜ್ಯಶಾಹಿ ಅಹಂಕಾರಕ್ಕೆ ಸಹ ಇದು ಇನ್ನೊಂದು ಪೆಟ್ಟು ಆಗಲಿದೆ. ಇದು ಬರಿಯ ಕೃತಕ ಬುದ್ಧಿಮತ್ತೆ ಅಥವಾ ತಂತ್ರಜ್ಞಾನ ಕ್ಷೇತ್ರದ ಪೈಪೋಟಿಯ ಪ್ರಶ್ನೆ ಮಾತ್ರವಲ್ಲ. ಯು.ಎಸ್. ತಂತ್ರಜ್ಞಾನ ಮೇಲುಗೈಗೆ ನೇರ ಸವಾಲು ಹಾಕುವ ಮೂಲಕ ಮತ್ತು ಇನ್ನೊಂದು ನಿರ್ಣಾಯಕ ಕ್ಷೇತ್ರದಲ್ಲಿ ಚೀನಾದ ಮೇಲುಗೈ ತೋರಿಸುವ ಮೂಲಕ ಯು.ಎಸ್.ನ ಸಮಗ್ರ ಅಧಿಪತ್ಯಕ್ಕೆ ತೀವ್ರ ಸವಾಲನ್ನು ಗಟ್ಟಿಗೊಳಿಸಿದೆ. ಇದು ದೀರ್ಘಕಾಲಿನ ಜಾಗತಿಕ ರಾಜಕೀಯ ಪರಿಣಾಮ ಬೀರುವ ವಿದ್ಯಮಾನ.

ನಿರ್ಣಾಯಕ ವಿಜ್ಞಾನ–ತಂತ್ರಜ್ಞಾನ ಮತ್ತು ಹೈಟೆಕ್ ಉದ್ಯಮದ ಕ್ಷೇತ್ರಗಳಲ್ಲಿ ಯು.ಎಸ್. ಅಥವಾ ಯಾವುದೇ ದೇಶದ ತಂತ್ರಜ್ಞಾನ ಮತ್ತು ಬಂಡವಾಳದ ಹಂಗಿಲ್ಲದೆ, ಸ್ವಾಯತ್ತ ಸ್ವಾವಲಂಬಿ ಬೆಳವಣಿಗೆಗೆ ಹೂಡಿಕೆ ಮಾಡಬೇಕು ಎಂಬುದು ಭಾರತಕ್ಕೂ ಇದೊಂದು ಪಾಠವಾಗಬೇಕು.

NEW No. MAG(3)/NPP/205/2021-2022
JANASHAKTHI KANNADA VARA PATRIKE February 3-9, 2025 Price: Rs. 10/- Date of Publication: 31 January 2025 RNI No. KARKAN /2006/17926 Posted on 05-02-2025
Posted at BG PSO, BG - 560026 **Posted at Periodical Rate -** Rs. 2

ರಾಜ್ಯವ್ಯಾಪಿ 'ಸೌಹಾರ್ದ ಸಂಕಲ್ಪ ಪ್ರತಿಜ್ಞೆ ಸ್ವೀಕಾರ'

'ದ್ವೇಷದ ದ್ವೀಪಗಳನ್ನು ದಾಟುವ ಸಂದರ್ಭ ಇದು'

ಜನವರಿ 30, 2025 ರ ಮಹಾತ್ಮ–ಹುತಾತ್ಮ ಕಾರ್ಯಕ್ರಮದಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ



ಮಹಾತ್ಮ ಗಾಂಧಿಯವರು ಹುತಾತ್ಮರಾದ ಜನವರಿ 30, 2025 ರಂದು ರಾಜ್ಯವ್ಯಾಪಿಯಾಗಿ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸೌಹಾರ್ದ ಕರ್ನಾಟಕ ಮತ್ತು ಸಮಾನ ಮನಸ್ಕ ಸಂಘಟನೆಗಳ ವತಿಯಿಂದ 'ಸೌಹಾರ್ದ ಸಂಕಲ್ಪ ದಿನ' ದ ಅಂಗವಾಗಿ ಗೀತೆಗಳ ಗಾಯನ, ಸಭೆ ಮಾತು, ಪ್ರತಿಜ್ಞೆ ಸ್ವೀಕಾರ' ಕಾರ್ಯಕ್ರಮಗಳು ನಡೆದಿವೆ. ಒಂದು ಸಂಕ್ಷಿಪ್ತ ವರದಿ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸುಮಾರು 350 ಜನರ ಸಭೆ, ಪ್ರತಿಜ್ಞಾ ಸ್ವೀಕಾರ, ಸೌಹಾರ್ದ ಗೀತೆಗಳ ಗಾಯನ ನಡೆಯಿತು. ಸಾಹಿತಿ–ಚಿಂತಕರು ನಾನಾ ವಿಭಾಗಗಳ ಗಣ್ಯರು, ನಾನಾ ಜನಚಳುವಳಿಗಳ ಮುಖಂಡರು–ಕಾರ್ಯಕರ್ತರು, ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳ ವಿವಿಧ ಸಂಘಟನೆಗಳ ಸಂಗಾತಿಗಳು ಪಾಲ್ಗೊಂಡಿದ್ದರು. ಆರಂಭದಲ್ಲಿ ಗಾಂಧಿ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಶುರುವಾಯಿತು.

ಪ್ರೊ. ಬರಗೂರು ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 'ಖ್ಯಾತ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಅವರು ಒಂದು ದೇಶವನ್ನು ನಾಶ ಮಾಡಬೇಕಾದರೆ ಧರ್ಮ–ಧರ್ಮಗಳ ನಡುವೆ ಜಗಳ ಹುಟ್ಟು ಹಾಕಿದರೆ ಸಾಕು, ಆ ದೇಶ ತಂತಾನೆ ನಾಶವಾಗುತ್ತದೆ, ಬೇರೇನೂ ಮಾಡಬೇಕಿಲ್ಲ ಎಂದು ಹೇಳಿದ್ದಾರೆ' ಎಂದರು. 'ಇಂದು ನಮ್ಮ ಸಮಾಜದಲ್ಲಿ ಭಯೋತ್ಪಾದನೆ, ದ್ವೇಷೋತ್ಪಾದನೆ ಹೆಚ್ಚುತ್ತಿದೆ. ಬಡಜನರು ಜಾತಿ–ಧರ್ಮಗಳ ಹೆಸರಿನಲ್ಲಿ ಬಡಿದಾಡಿಕೊಳ್ಳುವಂತೆ ಮಾಡಲಾಗಿದೆ. ದ್ವೇಷದ ದ್ವೀಪಗಳನ್ನು ದಾಟುವ ಸಂದರ್ಭ ಇದು' ಎಂದರು. ಮುಂದುವರಿದು 'ಸಮಾನತೆ ಮತ್ತು ಸೌಹಾರ್ದತೆ ಭಾರತದ ಎರಡು ಕಣ್ಣುಗಳು. ಅವನ್ನು ಕಾಪಾಡಿಕೊಳ್ಳಬೇಕು' ಎಂದರು.

'ಸಹಿಷ್ಣತೆ ಸೌಹಾರ್ದ ಪ್ರತೀಕವಾಗಿದ್ದ ಗಾಂಧೀಜಿಯವರು ಧರ್ಮದ ಒಳ ವಿಮರ್ಶಕರಾಗಿದ್ದರು. ಅದೇ ಧರ್ಮದ ಗೋಡ್ಸೆ ಗಾಂಧೀಜಿಯವರನ್ನು ಕೊಂದದ್ದನ್ನು ವ್ಯಕ್ತಿಗತವಾಗಿ ನೋಡಲಾಗದು. ಆ ಮನೋಧರ್ಮವೇ ಕೊಲೆ ಮಾಡಿರುವುದು' ಎಂದರು. 'ನಮ್ಮ ನೇತಾರರು ಪ್ರಜಾಸತ್ತಾತ್ಮಕ ಭಾಷೆಯನ್ನೇ ಮರೆತುಬಿಟ್ಟಿದ್ದಾರೆ. ಭಾಷೆಯ ಹಿಂಸೆ, ಮಾನಸಿಕ ಹಿಂಸೆ, ದೈಹಿಕ ಹಿಂಸೆ ನಿರಂತರವಾಗಿದೆ. ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಹಿಂಸೆ, ಅಸಹಿಷ್ಣತೆ, ಇದೆ' ಎಂದು ಪ್ರತಿಪಾದಿಸಿದರು. ವಿಶ್ವದ ಹೃದಯ ಗಾಯಗೊಂಡಿದೆ, ಸೌಹಾರ್ದತೆ ಮತ್ತು ಸಮಾನತೆಯಿಂದ ಈ ಗಾಯವನ್ನು ಮಾಯಿಸುವ ಕೆಲಸ ಮಾಡಬೇಕು. ಅದಕ್ಕಾಗಿ ಬೇರೆ ಬೇರೆ ಪ್ರಗತಿಪರ ವಿಚಾರಧಾರೆಯ ಸಂಘಟನೆಗಳು ಒಂದಾಗಬೇಕು' ಎಂದರು.

ಖ್ಯಾತ ಹಾಡುಗಾರ್ತಿ, ಸಂಗೀತ ನಿರ್ದೇಶಕಿ ಶಮಿತ ಮಲ್ನಾಡು ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಎಲ್ಲರೂ ಎದ್ದು ನಿಂತು ಲಿಖಿತ ಪ್ರತಿಜ್ಞೆಯನ್ನು ಪುನರುಚ್ಚರಿಸಿ ಪ್ರತಿಜ್ಞೆ ಸ್ವೀಕರಿಸಿದರು.

ನಂತರ ಪ್ರೊ.ಕೆ. ಮರುಳಸಿದ್ದಪ್ಪ ಅವರು ಮಾತನಾಡಿ 'ಮಹಾತ್ಮ ಗಾಂಧಿ ನಿಜವಾದ ರಾಮಭಕ್ತರಾಗಿದ್ದರು. ಗೋಡ್ಸೆ ಕಳ್ಳರಾಮಭಕ್ತ, ಕಳ್ಳರಾಮಭಕ್ತನು ನಿಜವಾದ ರಾಮಭಕ್ತ ಗಾಂಧಿಯನ್ನು ಕೊಂದನು. ಬಹುತ್ವದ ಪರಂಪರೆಯನ್ನು ಕಾಪಾಡಿಕೊಳ್ಳಬೇಕು' ಎಂದರು. ಡಿ.ಎಸ್.ಎಸ್.(ಅಂಬೇಡ್ಕರ್‌ವಾದ)ದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ಚಿಂತಕರಾದ ಡಾ.ಜಿ. ರಾಮಕೃಷ್ಣ, ಬಿ.ಟಿ. ಲಲಿತಾನಾಯಕ್, ಮಲ್ಲಿಗೆ ಸಿರಿಮನೆ, ಡಾ.ಮೀನಾಕ್ಷಿ ಬಾಳಿ ಮುಂತಾದವರು ಮಾತನಾಡಿದರು. ಶಮಿತ ಮಲ್ನಾಡ್, ಕೆ.ಎಸ್. ಲಕ್ಷ್ಮಿ, ಪ್ರಕಾಶ್ ಅರಸ್ ಮುಂತಾದವರು ಸೌಹಾರ್ದ ಗೀತೆ–ಸಮಾನತೆಯ ಆಶಯದ ಗೀತೆಗಳನ್ನು ಹಾಡಿದರು. ಆರಂಭದಲ್ಲಿ ಆರ್.ರಾಮಕೃಷ್ಣ ಸ್ವಾಗತಿಸಿದರು. ಡಾ.ಎಸ್.ವೈ. ಗುರುಶಾಂತ್ ಪ್ರಸ್ತಾವಿಕ ಮಾತುಗಳನ್ನಾಡಿದರು. ಬಿ.ರಾಜಶೇಖರ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಪ್ರಕಾಶ್ ಮೂರ್ತಿ ಪಿ. ವಂದಿಸಿದರು. ಅನೇಕ ಸಾಹಿತಿಗಳು, ವಿವಿಧ ಸಂಘಟನೆಗಳ ನಾಯಕರು, ಕಾರ್ಯಕರ್ತರು ಭಾಗವಹಿಸಿದ್ದರು.

ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರದಲ್ಲಿ ಸೌಹಾರ್ದ ಕರ್ನಾಟಕ, ಸಂವಿಧಾನ ರಕ್ಷಣಾ ಸಮಿತಿ, ಕನ್ನಡ ಪಕ್ಷ ಮುಂತಾದ ಸಮಾನ ಮನಸ್ಕ ಸಂಘಟನೆಗಳು ಕಾರ್ಯಕ್ರಮ ಸಂಘಟಿಸಿದ್ದವು. ಸುಮಾರು 30 ಜನರು, ಮಹಾತ್ಮಗಾಂಧಿ ಪ್ರತಿಮೆಗೆ ಹೂಮಾಲೆ ಹಾಕಿ ಗಾಂಧಿಯವರ ವಿಚಾರಗಳನ್ನು ಸ್ಮರಿಸಿಕೊಂಡ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಗೂಳೂರು ವೃತ್ತ(ಎಚ್.ಎನ್.ಸರ್ಕಲ್)ದಲ್ಲಿ ಕ್ರಿಶ್ಚಿಯನ್, ಮುಸ್ಲಿಂ ಅಲ್ಪ ಸಂಖ್ಯಾತರು, ದಲಿತ ಚಳುವಳಿಯ ಮುಖಂಡರು, ಅಧ್ಯಾಪಕರು ಸೇರಿದಂತೆ ಸುಮಾರು 100 ಜನರು ಪಾಲ್ಗೊಂಡ ಸಭೆ, ಸೌಹಾರ್ದ ಗೀತೆಗಳ ಗಾಯನ, ಪತಿಜ್ಞೆ ಸ್ವೀಕಾರ ನಡೆದಿದೆ. ವಕೀಲರಾದ ಸುಧಾಕರ್‌ರವರು ಮುಖ್ಯಭಾಷಣಕಾರರಾಗಿ ಪಾಲ್ಗೊಂಡಿದ್ದರು.

ಕೋಲಾರದ ಬಂಗಾರಪೇಟೆಯಲ್ಲಿ ಸಭಾಂಗಣದೊಳಗೆ ಸುಮಾರು 30 ಜನರು ಪಾಲ್ಗೊಂಡ ಸಭೆ, ಹಾಗೂ ಸೌಹಾರ್ದ ಸಂಕಲ್ಪ ಪತಿಜ್ಞೆ ಸ್ವೀಕಾರ ನಡೆದಿದೆ.

ಉಡುಪಿ ಜಿಲ್ಲೆ–ಕುಂದಾಪುರದಲ್ಲಿ ಸೌಹಾರ್ದ ಕರ್ನಾಟಕ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳು ಸೇರಿ ಸುಮಾರು 100 ಜನರು ಅಂಬೇಡ್ಕರ್ ಭವನದಲ್ಲಿ ಸೇರಿ ಸೌಹಾರ್ದತೆ ಪರವಾದ ವ್ಯಂಗ್ಯ ಚಿತ್ರಗಳ ಪ್ರದರ್ಶನ, ಸೌಹಾರ್ದ ಸಭೆ, ಪ್ರತಿಜ್ಞೆ ಸ್ವೀಕಾರಗಳೊಂದಿಗೆ, ಮಹಾತ್ಮ–ಹುತಾತ್ಮ ದಿನ ಆಚರಿಸಲಾಗಿದೆ. ಕ್ರಿಶ್ಚಿಯನ್, ಮುಸ್ಲಿಂ, ದಲಿತ ಸಮುದಾಯ ಸೇರಿದಂತೆ ಜನಚಳುವಳಿಗಳ ಸಂಗಾತಿಗಳು ಸೇರಿ ನಾನಾ ವಿಭಾಗದ ಜನರು ಪಾಲ್ಗೊಂಡಿದ್ದಾರೆ. ಶಾಸ್ತ್ರಿ ವೃತ್ತದವರೆಗೆ ದೀಪದ ಮೆರವಣಿಗೆ ನಡೆದಿವೆ.

ತುಮಕೂರಿನಲ್ಲಿ ಮಹಾತ್ಮ–ಹುತಾತ್ಮ ಸೌಹಾರ್ದ ಸಪ್ತಾಹದ ಅಂಗವಾಗಿ ಒಂದು ವಾರ ಕಾಲದ ಕಾರ್ಯಕ್ರಮಗಳನ್ನು ಯೋಜಿಸಲಾಗಿತ್ತು. ತುಮಕೂರು ಜಿಲ್ಲೆಯ ತುಮಕೂರು, ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ಮದುಗಿರಿ, ಕುಣಿಗಲ್ ತಾಲ್ಲೂಕುಗಳಲ್ಲಿ ಹಾಗೂ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯಕ್ರಮಗಳು ನಡೆದಿವೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಹಳಿಯಾಳ, ಯಲ್ಲಾಪುರ, ಶಿರಸಿ ಒಟ್ಟು ಐದು ಕೇಂದ್ರಗಳಲ್ಲಿ ಕಾರ್ಯಕ್ರಮಗಳು ನಡೆದಿವೆ. ಕಾರವಾರದ ಸುಭಾಷ್ ವೃತ್ತದಲ್ಲಿ ವಿದ್ಯಾರ್ಥಿಗಳು, ಸಾಹಿತಿ–ಚಿಂತಕರು ಸೇರಿದಂತೆ ಸುಮಾರು 200 ಜನರು ಪಾಲ್ಗೊಂಡ ಸಭೆ, ಕವನ ವಾಚನ, ಪ್ರತಿಜ್ಞಾ ಸ್ವೀಕಾರ ನಡೆದಿದೆ. ಹಳಿಯಾಳ, ಯಲ್ಲಾಪುರಗಳಲ್ಲಿ ತಲಾ ಸುಮಾರು 25 ಜನರು ಪಾಲ್ಗೊಂಡ ಬಹಿರಂಗ ಸಭೆಗಳು ನಡೆದಿವೆ. ಶಿರಸಿಯಲ್ಲಿ ಸುಮಾರು 35 ಜನರು ಪಾಲ್ಗೊಂಡ ಸಭಾಂಗಣ ಸಭೆ, ಕಾರ್ಯಕ್ರಮಗಳು ನಡೆದಿವೆ.

ಬೀದರ್‌ನ ಹುಮ್ನಾಬಾದ್‌ನಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕಿನ ಸಂಗಾತಿಗಳು ಪಾಲ್ಗೊಂಡ ಸುಮಾರು 100 ಜನರ ಜಿಲ್ಲಾಮಟ್ಟದ ಕಾರ್ಯಕ್ರಮ, ಸೌಹಾರ್ದ ಗೀತೆಗಳ ಗಾಯನ, ಪ್ರತಿಜ್ಞಾ ಸ್ವೀಕಾರ ನಡೆದಿದೆ.

ಹಾಸನದಲ್ಲಿ ಜನವರಿ 30 ರಂದು ಬೆಳಿಗ್ಗೆ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ನಡೆದಿದೆ. ಸುಮಾರು 100 ಜನ ಪಾಲ್ಗೊಂಡಿದ್ದಾರೆ. ಸಂಜೆ ಸುಮಾರು 150 ಜನರು ಪಾಲ್ಗೊಂಡ ಸಭೆ, ಸಂವಾದ, ಕವಿಗೋಷ್ಠಿ ಜೊತೆಗೆ ಪ್ರತಿಜ್ಞಾ ಸ್ವೀಕಾರ ನಡೆದಿವೆ.

ಮಂಡ್ಯದ ಗಾಂಧಿ ಪಾರ್ಕಿನಲ್ಲಿ ಅಧ್ಯಾಪಕರು, ಜನಚಳುವಳಿಗಳ ನಾಯಕರು ಸೇರಿದಂತೆ ಸುಮಾರು 30 ಜನರು ಪಾಲ್ಗೊಂಡ, ಸಭೆ, ಪ್ರತಿಜ್ಞೆ ಸ್ವೀಕಾರ ನಡೆದಿದೆ.

ಬಳ್ಳಾರಿಯಲ್ಲಿ ಗಾಂಧಿ ಪ್ರತಿಮೆ ಬಳಿ ಮುಸ್ಲಿಂ, ದಲಿತ ಸಮುದಾಯದ ಪ್ರತಿನಿಧಿಗಳು ಸೇರಿದಂತೆ ಸುಮಾರು 20 ಜನರು ಪಾಲ್ಗೊಂಡ ಸಭೆ ನಡೆದಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಕ್ರಿಶ್ಚಿಯನ್, ಮುಸ್ಲಿಂ, ದಲಿತ ಸಮುದಾಯದ ಪ್ರತಿನಿಧಿಗಳು ಸೇರಿದಂತೆ ಸುಮಾರು 60 ಜನರು ಪಾಲ್ಗೊಂಡ ಕಾರ್ಯಕ್ರಮವು ಗಾಂಧಿ ಪ್ರತಿಮೆ ಬಳಿ ಸೌಹಾರ್ದ ಕರ್ನಾಟಕ ಹಾಗೂ ಸಂವಿಧಾನ ರಕ್ಷಣಾ ಸಮಿತಿಯ ವತಿಯಿಂದ ಜಂಟಿಯಾಗಿ ನಡೆದಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪ್ರತಿಜ್ಞಾ ಸ್ವೀಕಾರ ನಡೆದಿವೆ.

ಹಾವೇರಿಯ ಗಾಂಧಿ ಪ್ರತಿಮೆ ಬಳಿ, ಗಾಂಧಿ ಪ್ರತಿಮೆಗೆ ಮಾಲಾರ್ಪಣೆಯೊಂದಿಗೆ, ಬೀದಿ ಕವಿಗೋಷ್ಠಿ, ಬೀದಿ ನಾಟಕ, ಪ್ರಸಿದ್ದ ಕವಿಗಳ ಸೌಹಾರ್ದ ಪರ ಕವನ ವಾಚನ ಹಾಗೂ ಸಭೆ ನಡೆದಿದೆ.



ಗದಗ ಜಿಲ್ಲೆಯ ಗಜೇಂದ್ರಗಡದ ಶಾದಿ ಮಹಲ್‌ನಲ್ಲಿ ದಲಿತ, ಕನ್ನಡಪರ, ಅಲ್ಪಸಂಖ್ಯಾತ ನಾನಾ ವಿಭಾಗದ ಜನರು ಜನಚಳುವಳಿಗಳ ಸಂಗಾತಿಗಳು ಸೇರಿ ಸುಮಾರು 200 ಪಾಲ್ಗೊಂಡ ಕಾರ್ಯಕ್ರಮ, ಪ್ರತಿಜ್ಞಾ ಸ್ವೀಕಾರ ನಡೆದಿದೆ.

ದಾವಣಗೆರೆ ಜಿಲ್ಲಾ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**